# ಅಧ್ಯಾಯ II

# ಅಧ್ಯಾಯ–II

# ಅನುಪಾಲನಾ ಲೆಕ್ಕಪರಿಶೋಧನೆ

## ಉನ್ನತ ಶಿಕ್ಷಣ ಇಲಾಖೆ

## 2.1 ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಸಮರ್ಪಕ ಆರ್ಥಿಕ ನಿರ್ವಹಣೆ

**ಬೆಂಗಳೂರು ವಿಶ್ವವಿದ್ಯಾಲಯದಲ್ಲಿನ ಅಸಮರ್ಪಕ ಆರ್ಥಿಕ ನಿರ್ವಹಣೆಯ ₹12.97 ಲಕ್ಷ ದುರುಪಯೋಗ, ದಾಖಲೆಗಳ ತಿರುಚುವಿಕೆ (ಕೈಚಳಕ) ಮತ್ತು ಸಂಶಯಾಸ್ಪದ ದುರುಪಯೋಗ ₹1.28 ಲಕ್ಷ ಹಾಗೂ ₹87.87 ಲಕ್ಷ ಆದಾಯದಲ್ಲಿನ ನಷ್ಟದಲ್ಲಿ ಪರಿಣಮಿಸಿತು.**

ಒಂದು ಸಂಸ್ಥೆಯ ಗುರಿ ಮತ್ತು ಉದ್ದೇಶಗಳ ಸಾಧನೆಗೆ ಯೋಜನೆ, ವ್ಯವಸ್ಥೆ ಹಾಗೂ ಆರ್ಥಿಕ ಆಕರಗಳ ನಿರ್ವಹಣೆಗಳು, ಸಂಸ್ಥೆಯ ಆರ್ಥಿಕ ನಿರ್ವಹಣೆಯ ಸಮಗ್ರ ಘಟಕವಾಗಿರುತ್ತದೆ. ಕರ್ನಾಟಕ ಆರ್ಥಿಕ ಸಂಹಿತೆ 1958 (ಕೆಎಫ್‌ಸಿ) ಆರ್ಥಿಕ ಔಚಿತ್ಯತೆಯನ್ನು ವಿಧಿಸುತ್ತದೆ. ಪ್ರತಿಯೋರ್ವ ಸರ್ಕಾರಿ ನೌಕರನೂ ಕೇವಲ ಸಂಪೂರ್ಣ ಪ್ರಾಮಾಣಿಕತೆಯನ್ನು ಗಮನಿಸುವುದಲ್ಲದೇ ಸಾರ್ವಜನಿಕ ಹಣದ ವೆಚ್ಚವನ್ನು ತಾನು ಅಥವಾ ತನ್ನ ಕೈಕೆಳಗಿನ ಸಿಬ್ಬಂದಿಗಳು ನಿರಂತರವಾಗಿ ಉತ್ಕೃಷ್ಟ ಮೌಲ್ಯಗಳ ಬಗ್ಗೆ ಗಮನಿಸುತ್ತಿರಬೇಕು ಹಾಗೂ ಸಾರ್ವಜನಿಕ ಹಣದಿಂದ ಯಾವುದೇ ರೀತಿಯ ವ್ಯರ್ಥ ವೆಚ್ಚವನ್ನು ಬಹು ಎಚ್ಚರಿಕೆಯಿಂದ ರಕ್ಷಿಸಬೇಕಿದೆ.

ಬೆಂಗಳೂರು ವಿಶ್ವವಿದ್ಯಾಲಯದ[8] 2014–15 ರಿಂದ 2018–19ರ ವರೆಗಿನ ದಾಖಲೆಗಳ ಪರಿಶೀಲನೆಯಲ್ಲಿ (ಅಕ್ಟೋಬರ್ 2019 – ಜನವರಿ 2020) ಗಮನಿಸಲಾದ ಅಸಮರ್ಪಕ/ ಅಸಮರ್ಥ ಆರ್ಥಿಕ ನಿರ್ವಹಣೆಯನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

### *2.1.1 ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೆಜ್‌ಮೆಂಟ್ ಸ್ಟಡೀಸ್‌ನ ಸಿಬ್ಬಂದಿಗಳು ಶುಲ್ಕವನ್ನು ದುರುಪಯೋಗಿಸಿರುವುದು*

ಬೆಂಗಳೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ 1998ರಲ್ಲಿ ಸ್ಥಾಪಿಸಲಾದ ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೆಜ್‌ಮೆಂಟ್ ಸ್ಟಡೀಸ್‌ನ ಮೂಲಕ (ಸಿಬಿಎಸ್‌ಎಮ್‌ಎಸ್) ಮಾಸ್ಟರ್ ಆಫ್ ಬಿಸಿನೆಸ್ ಮ್ಯಾನೆಜ್‌ಮೆಂಟ್ (ಎಂಬಿಎ) ಕಾರ್ಯಕ್ರಮವನ್ನು (ಬೆಳಗಿನ ಹಾಗೂ ಸಂಜೆಯ ಪಠ್ಯಕ್ರಮ) ಬೆಂಗಳೂರು ವಿಶ್ವ ವಿದ್ಯಾಲಯ ನೀಡುತ್ತದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸ್ನಾತಕೋತ್ತರ ಸಾಮಾನ್ಯ ಪ್ರವೇಶ ಪರೀಕ್ಷೆಯಿಂದ (PGCET) ಮೇಲಿನ ಕೋರ್ಸ್‌ಗಳಿಗೆ ಪ್ರವೇಶ ನೀಡಲಾಗುತ್ತದೆ. ಯಾವುದೇ ಸ್ಥಾನಗಳು ತುಂಬಿದ್ದಲ್ಲಿ, ವಿಶ್ವವಿದ್ಯಾಲಯವು ಈ ವಿಚಾರದಲ್ಲಿ ಒಂದು ಅಧಿಸೂಚನೆಯನ್ನು ಪ್ರಕಟಿಸಿ ನಂತರ ಪ್ರತಿ ವರ್ಷವೂ ಈ ಉದ್ದೇಶಕ್ಕಾಗಿ, ಪ್ರವೇಶ ಸಮಿತಿಯ ಶಿಫಾರಸಿನ ಮೇಲೆ ಅಭ್ಯರ್ಥಿಗಳು ಪ್ರವೇಶ ಪಡೆಯುತ್ತಾರೆ.

ವಿದ್ಯಾರ್ಥಿಗಳು ಸಮಾಲೋಚನೆಯಲ್ಲಿ (ಕೌನ್ಸೆಲಿಂಗ್ ನಲ್ಲಿ) ಪ್ರವೇಶ ಹಂಚಿಕೆಯಾದ ನಂತರ ಪ್ರಥಮ ವರ್ಷದ ಭಾಗಶಃ ಶುಲ್ಕವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಅಗತ್ಯವಾಗಿ ಪಾವತಿಸಬೇಕು ಹಾಗೂ

---

[8] ಬೆಂಗಳೂರು ವಿಶ್ವವಿದ್ಯಾಲಯವು 2015ರಲ್ಲಿ 1) ಬೆಂಗಳೂರು ವಿಶ್ವವಿದ್ಯಾಲಯ 2) ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ 3) ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಮೂರು ಭಾಗಗಳಾಗಿ ವಿಂಗಡಣೆಗೊಂಡು ಮೂರು ವಿಭಾಗಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿವೆ.

ಬಾಕಿ ಉಳಿದ ಮೊತ್ತವನ್ನು ಡಿಮ್ಯಾಂಡ್ ಡ್ರಾಫ್ಟ್ (ಡಿ.ಡಿ) ಮೂಲಕ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪಾವತಿಸಬೇಕು. ವಿಶ್ವವಿದ್ಯಾಲಯದ ನೇರ ಪ್ರವೇಶ ಪ್ರಕರಣಗಳಲ್ಲಿ ವಿದ್ಯಾರ್ಥಿಗಳು ಸಂಪೂರ್ಣ ಶುಲ್ಕವನ್ನು ವಿಶ್ವವಿದ್ಯಾಲಯದ ಆರ್ಥಿಕ ಅಧಿಕಾರಿಗಳ ಹೆಸರಿನಲ್ಲಿ ಡಿ.ಡಿ ಮುಖಾಂತರ ಪಾವತಿಸಬೇಕು ಹಾಗೂ ಶುಲ್ಕ ಪಾವತಿಸಿರುವುದಕ್ಕೆ ಅಧಿಕೃತ ರಸೀದಿ ಪಡೆಯಬೇಕು.

ಸಂಬಂಧಪಟ್ಟ ಶಾಖೆಯು ವಿದ್ಯಾರ್ಥಿಗಳು ಸಂಪೂರ್ಣ ಶುಲ್ಕ ಪಾವತಿಸಿದ ಬಗ್ಗೆ ಆಧಾರಗಳನ್ನೊದಗಿಸಿದ ನಂತರ ವಿದ್ಯಾರ್ಥಿಗಳ ವಿವರಗಳನ್ನು ಪ್ರವೇಶವಹಿಯಲ್ಲಿ ದಾಖಲಿಸುತ್ತಾರೆ. ತದನಂತರ ಶಾಖೆಯು ವಿದ್ಯಾರ್ಥಿಗಳ ಅರ್ಹತೆ, ಕೆಲಸದ ಅನುಭವ, ಶುಲ್ಕ ಪಾವತಿ/ ಚಲನ್ ನಂಬರ್ ಇತ್ಯಾದಿಗಳೊಂದಿಗೆ ಒಂದು ವಿವರಗಳನ್ನು (ತಃಖ್ತೆ) ತಯಾರಿಸಿ ಶಾಖೆಯ ಮುಖ್ಯಸ್ಥರ ಅನುಮೋದನೆಯೊಂದಿಗೆ ರಿಜಿಸ್ಟ್ರಾರ್(ಪ್ರವೇಶಗಳು) ಅವರಿಗೆ ಒಪ್ಪಿಸುತ್ತಾರೆ. ಶುಲ್ಕಪಾವತಿ/ ಚಲನ್ ನಂಬರ್‌ಗಳ ಪ್ರತಿಗಳನ್ನು ವಿವರಗಳೊಂದಿಗೆ ಲಗತ್ತಿಸಬೇಕಿದೆ. ರಿಜಿಸ್ಟ್ರಾರ್‌ನ ಅಧೀನದಲ್ಲಿರುವ ಪ್ರವೇಶಗಳ ವಿಭಾಗವು ಪ್ರತಿಯೊಂದು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಬೇಕು ಹಾಗೂ ಪ್ರವೇಶಕ್ಕೆ ಶಿಫಾರಿಸಿರುವ ಪ್ರತಿಯೊಬ್ಬ ವಿದ್ಯಾರ್ಥಿಯ ಶುಲ್ಕ ರಸೀದಿ ಅರ್ಜಿಗಳನ್ನು ಪರಿಶೋಧಿಸಬೇಕು. ನಿಗದಿ ಪಡಿಸಿದ ಮಾನದಂಡಗಳು ತಾಳೆಯಾಗದಿದ್ದಲ್ಲಿ ಅಂತಹ ವಿದ್ಯಾರ್ಥಿಗಳನ್ನು ನಿರಾಕರಿಸಬೇಕು.

ಅದೇ ರೀತಿ, ದ್ವಿತೀಯ ವರ್ಷದ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಶುಲ್ಕವನ್ನು ವಿದ್ಯಾರ್ಥಿಗಳು ಶುಲ್ಕದ ಮೊತ್ತಕ್ಕೆ ಡಿ.ಡಿ/ಚಲನ್ ಗಳನ್ನು ಅಗತ್ಯವಾಗಿ ಪಡೆಯಬೇಕು ಹಾಗೂ ಶುಲ್ಕವನ್ನು ಪಾವತಿಸಿರುವ ರಸೀದಿಯನ್ನು ಆಧಾರವಾಗಿ ವಿಭಾಗಕ್ಕೆ ಒದಗಿಸಬೇಕು.

ಬೆಂಗಳೂರು ವಿಶ್ವವಿದ್ಯಾಲಯವು ನೀಡಿದ ಮಾಹಿತಿಯಂತೆ 2014–19ರ ಅವಧಿಯಲ್ಲಿ ಒಟ್ಟು 145 ವಿದ್ಯಾರ್ಥಿಗಳನ್ನು (53 ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಮತ್ತು 92 ವಿಶ್ವವಿದ್ಯಾಲಯದಡಿಯಲ್ಲಿ) ಎಂಬಿಎ ಪಠ್ಯಕ್ರಮದಡಿ ಸಂಜೆಯ ಪಾಳಿಗೆ ಪ್ರವೇಶ ಮಾಡಲಾಯಿತು.

***ಸಿಬಿಎಸ್‌ಎಮ್‌ಎಸ್ ದಾಖಲೆಗಳ ಪರಿಶೀಲನೆಯಲ್ಲಿ 2014–19ರ ಅವಧಿಯಲ್ಲಿ ಕೆಳಕಂಡಂತೆ ಗಮನಿಸಲಾಯಿತು.***

***(i) ಪ್ರವೇಶವಹಿಯಲ್ಲಿ 2016–17ರ 10 ವಿದ್ಯಾರ್ಥಿಗಳ ಹಾಗೂ 2017–18ರ ಓರ್ವ ವಿದ್ಯಾರ್ಥಿಯ ವಿವರಗಳಿರಲಿಲ್ಲ. ಪ್ರವೇಶವಹಿಯು ಅನೇಕ ಕಡೆಗಳಲ್ಲಿ ಅಪೂರ್ಣವಾಗಿದ್ದಿತು. ಅಂದರೆ ಪಠ್ಯಕ್ರಮದ ಶುಲ್ಕಗಳ (ಕಲಿಕಾ ಶುಲ್ಕ, ನೋಂದಣಿ ಶುಲ್ಕ, ಪ್ರವೇಶ ಶುಲ್ಕ, ಕ್ರೀಡಾಶುಲ್ಕಗಳನ್ನೊಳಗೊಂಡಂತೆ) ವಿವರಗಳಾದ ಚಲನ್ ನಂಬರ್, ಬ್ಯಾಂಕ್ ಹಣ ರವಾನೆ, ಹಣ ರವಾನೆಯಾದ ದಿನಾಂಕ ಇತ್ಯಾದಿಗಳ ಪಾವತಿಯಾದ ಬಗ್ಗೆ ಸೂಚಿಸುತ್ತಿರಲಿಲ್ಲ.***

***(ii) ನಿರ್ದೇಶಕರು, ಸಿಬಿಎಸ್‌ಎಮ್‌ಎಸ್, ವಿದ್ಯಾರ್ಥಿಗಳ ಪ್ರವೇಶದ ವಿವರಗಳನ್ನು ತೋರಿಸುವ ಪಟ್ಟಿಯನ್ನು ಪ್ರತಿ ವರ್ಷವೂ ರಿಜಿಸ್ಟ್ರಾರ್ ರವರಿಗೆ ಸಲ್ಲಿಸುತ್ತಾರೆ. ನೋಂದಣಿ ಮತ್ತು ಅರ್ಹತಾ ಶುಲ್ಕಗಳನ್ನು[9] ವಿದ್ಯಾರ್ಥಿಗಳಿಂದ ಸ್ವೀಕರಿಸಲಾಗಿದೆ ಹಾಗೂ ವಿಶ್ವವಿದ್ಯಾಲಯದ ಲೆಕ್ಕಪತ್ರಕ್ಕೆ ಜಮೆಯಾಗಿದೆ ಎಂದು ಆ ಪಟ್ಟಿಯಲ್ಲಿ ನಿರ್ದೇಶಕರು, ಸಿಬಿಎಸ್‌ಎಮ್‌ಎಸ್, ರವರ ದೃಢೀಕರಣ ಪತ್ರವನ್ನು ಆ ಪಟ್ಟಿಯಲ್ಲಿ ಸೇರಿಸಲಾಗುತ್ತದೆ, ಆದಾಗ್ಯೂ, ಈ ಪಟ್ಟಿಗಳಲ್ಲಿ ವಿಶ್ವವಿದ್ಯಾಲಯದ ಲೆಕ್ಕಪತ್ರದಲ್ಲಿ ಶುಲ್ಕವನ್ನು ಜಮೆ ಮಾಡಿರುವ ಚಲನ್‌ಗಳ/ ರಸೀದಿಗಳ ಆಧಾರವಿರುವುದಿಲ್ಲ.***

***(iii) ಕೆಲವೊಂದು ಪ್ರಕರಣಗಳಲ್ಲಿ ಸಿಬಿಎಸ್‌ಎಮ್‌ಎಸ್, ವಿದ್ಯಾರ್ಥಿಗಳಿಂದ ಶುಲ್ಕವನ್ನು ನಗದು ರೂಪವಾಗಿ ಸಂಗ್ರಹಿಸಿ, ಅವರು ಪಾವತಿಸಿದ ಶುಲ್ಕವನ್ನು ವಿಶ್ವವಿದ್ಯಾಲಯದ ಲೆಕ್ಕಪತ್ರಗಳಿಗೆ ಜಮೆ ಮಾಡುವುದಾಗಿ***

[9] ಅರ್ಹತಾಶುಲ್ಕ ಎಂದರೆ ಅರ್ಹತಾದಾಯಕ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಕರ್ನಾಟಕದ ಹೊರರಾಜ್ಯಗಳ (ಭಾರತದ ಪ್ರಜೆಗಳಾಗಿರಬೇಕು) ಪಾವತಿಸಬೇಕಾದ ಶುಲ್ಕ.

*ಭರವಸೆ ನೀಡಿರುವುದಾಗಿ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ವಿಭಾಗವು ವಿದ್ಯಾರ್ಥಿಗಳಿಂದ ವೈಯಕ್ತಿಕ ಡಿ.ಡಿ.ಗೆ ಪ್ರತಿಯಾಗಿ ಕ್ರೋಢೀಕೃತ ಡಿ.ಡಿ.ಗಳನ್ನು ಸಲ್ಲಿಸಿರುವುದು ಈ ವಿಚಾರಕ್ಕೆ ಸಮರ್ಥಿಸಿದಂತಿದೆ ಹಾಗೂ ಕೆಲವೊಂದು ವಿದ್ಯಾರ್ಥಿಗಳಿಂದ ಈ ವಿಚಾರವನ್ನು ವಿಶ್ವವಿದ್ಯಾಲಯದ ಗಮನಕ್ಕೆ ತರಲಾಗಿದೆ. ವಿಶ್ವವಿದ್ಯಾಲಯದ ನಿರ್ದೇಶನಗಳಂತೆ ಶುಲ್ಕವನ್ನು ನಗದು ರೂಪದಲ್ಲಿ ಸಂಗ್ರಹಿಸುವುದು ನಿಷೇಧಿಸಿದೆ.*

**(iv)** *ಅರ್ಜಿಗಳ ವಿವರಗಳು, ಅರ್ಹತಾ ಮಾನದಂಡಗಳು, ಅನುಭವ, ವಿಶ್ವವಿದ್ಯಾಲಯಕ್ಕೆ ಪಾವತಿಸಿದ ಶುಲ್ಕಗಳನ್ನೊಳಗೊಂಡ ಚಲನ್ / ರಸೀದಿಗಳ ಪರಿಶೀಲನೆಯನ್ನು ರಿಜಿಸ್ಟ್ರಾರ್ ಅಧೀನದ ಪ್ರವೇಶ ವಿಭಾಗವು ಮಹತ್ವದ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿರುವುದಿಲ್ಲ ಹಾಗೂ ನಿರ್ದೇಶಕರು ಸಿಬಿಎಸ್‌ಎಮ್‌ಎಸ್ ರವರು ಸಲ್ಲಿಸಿದ ಧೃಡೀಕರಣ ಪತ್ರವನ್ನು ಒಪ್ಪಿಕೊಳ್ಳಲಾಗಿದೆ. ಶುಲ್ಕ ಪಾವತಿಯ ದ್ವಿತೀಯ ಹಂತದ ಪರಿಶೀಲನೆ ಇಲ್ಲದಿರುವುದು ವಿಶ್ವವಿದ್ಯಾಲಯದಲ್ಲಿ ಇರುವಂತಹ ಆಂತರಿಕ ನಿಯಂತ್ರಣ ವ್ಯವಸ್ಥೆಯ ದುರ್ಬಲತೆಯನ್ನು ಪ್ರಕಟಗೊಳಿಸಿದೆ.*

**(v)** *ವಿದ್ಯಾರ್ಥಿಗಳಿಂದ ಸಂಗ್ರಹಿಸಿದ ಶುಲ್ಕವನ್ನು ಜಮೆ ಮಾಡಿರುವುದನ್ನು ಪರಿಶೀಲಿಸುವುದಕ್ಕೆ ಲೆಕ್ಕಪರಿಶೋಧನೆ ಪ್ರಯತ್ನಿಸಿತು ಹಾಗೂ ಸಂಜೆ ಪಾಳಿಯ ಎಂಬಿಎ ಪಠ್ಯಕ್ರಮದಡಿ ಪ್ರವೇಶ ಪಡೆದ 38 ವಿದ್ಯಾರ್ಥಿಗಳ ಚಲನ್ /ರಸೀದಿಗಳ ಮೊತ್ತ ₹12.97 ಲಕ್ಷ ದಾಖಲೆಯಲ್ಲಿ ಇರಲೂ ಇಲ್ಲ ಅಥವಾ ಸಂಗ್ರಹಿಸಲಾಗಿದೆ ಎಂದು ಸೂಚಿಸುವ ಮೊತ್ತಕ್ಕೆ ಬ್ಯಾಂಕ್‌ಗಳಲ್ಲಿ/ ವಿಶ್ವವಿದ್ಯಾಲಯದ ಲೆಕ್ಕಪತ್ರಗಳಲ್ಲಿ ಪತ್ತೆಹಚ್ಚಲಾಗಲಿಲ್ಲವಾದುದರಿಂದ ₹12.97 ಲಕ್ಷ (ಅನುಬಂಧ 2.1) ಕಡಿಮೆ ಜಮೆಯಾಗಿರುತ್ತದೆ. ಎಲ್ಲ ವಿದ್ಯಾರ್ಥಿಗಳೂ ಶುಲ್ಕ/ಬಾಕಿಗಳನ್ನು ಪಾವತಿಸಿದ್ದಾರೆಂದು ನಿರ್ದೇಶಕರು ಸಿಬಿಎಸ್‌ಎಮ್‌ಎಸ್ ಧೃಡೀಕರಿಸಿರುವುದರಿಂದ ವಿದ್ಯಾರ್ಥಿಗಳಿಂದ ಮೊತ್ತವನ್ನು ಸಂಗ್ರಹಿಸಲಾಗಿದೆಯಾದರೂ ವಿಶ್ವವಿದ್ಯಾಲಯದ ಲೆಕ್ಕಪತ್ರಗಳಲ್ಲಿ ಜಮೆ ಆಗಿರುವುದಿಲ್ಲ ಎಂಬುದು ವಾಸ್ತವಾಂಶವಾಗಿದೆ. ಶುಲ್ಕವನ್ನು ಸಂಗ್ರಹಿಸಲಾಗಿದೆ ಎಂದು ಧೃಢೀಕರಣಗೊಂಡಿದ್ದರೂ ಜಮೆಯಾಗದಿರುವುದು, ಮೋಸದ ಪದ್ಧತಿ ಹಾಗೂ ಹಣದ ದುರುಪಯೋಗದಲ್ಲಿ ಪರಿಣಮಿಸುತ್ತದೆ.*

**(vi)** *ಬೆಂಗಳೂರು, ಬೆಂಗಳೂರು ಕೇಂದ್ರ ಹಾಗೂ ಬೆಂಗಳೂರು ಉತ್ತರ ವಿಶ್ವವಿದ್ಯಾಲಯಗಳೆಂದು 2015ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯವನ್ನು ಮೂರು ಭಾಗಗಳಾಗಿ ವಿಭಜಿಸಿದ ನಂತರ ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿರುವ ಸಿಬಿಎಸ್‌ಎಮ್‌ಎಸ್ ನಿರ್ದೇಶಕರು ಹಾಗೂ ಸಹಾಯಕರನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸಿಬಿಎಸ್‌ಎಮ್‌ಎಸ್‌ಗೆ ವರ್ಗಾಯಿಸಲಾಯಿತು (ಫೆಬ್ರವರಿ 2019). ಸಂಜೆ ಪಾಳಿಯ 2018–19ನೇ ಸಾಲಿನ ಶೈಕ್ಷಣಿಕ ವರ್ಷದ ಎಂಬಿಎ ಪಠ್ಯಕ್ರಮದ ಪ್ರವೇಶ ಶುಲ್ಕದಲ್ಲಿ ಹಣ ದುರುಪಯೋಗದ ಆಪಾದನೆಗಳನ್ನು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ಹೊರಿಸಲಾಯಿತು ಹಾಗೂ ಶೋಧನಾ (ತನಿಖಾ) ಸಮಿತಿಯನ್ನು ರಚಿಸಲಾಯಿತು (ಆಗಸ್ಟ್ 2019). ಸಮಿತಿಯು ಇಬ್ಬರ ಮೇಲಿನ ಆಪಾದನೆಗಳನ್ನು ರುಜುವಾತು ಮಾಡಿತು ಹಾಗೂ ಅವರ ವಿರುದ್ಧ ಶಿಸ್ತುಕ್ರಮ ಜರುಗಿಸಲು ಪ್ರಸ್ತಾವನೆ ಸಲ್ಲಿಸಿತು (ಅಕ್ಟೋಬರ್ 2019). ಮೋಸದ ವ್ಯವಹಾರಗಳನ್ನು ಹಾಗೂ ಹಣ ದುರುಪಯೋಗವನ್ನು ಎಸಗುವುದು ಸಂಬಂಧಿಸಿದ ನೌಕರರ ವಾಡಿಕೆಯಾಗಿದೆ ಎಂದು ಲೆಕ್ಕಪರಿಶೋಧನೆಯ ಅಭಿಪ್ರಾಯವು ಪುಷ್ಟೀಕರಿಸುತ್ತದೆ.*

***ಪತ್ತೆಯಾಗದ ಮೊತ್ತವನ್ನು ಹಣ ದುರುಪಯೋಗಿಸಿದ ವ್ಯಕ್ತಿಗಳಿಂದ ವಸೂಲು ಮಾಡಲಾಗುತ್ತದೆ ಹಾಗೂ ದುಷ್ಕೃತ್ಯವೆಸಗಿದಂತಹವರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ಜರುಗಿಸಲಾಗುತ್ತದೆ ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ಜನವರಿ 2021).***

***ಲೆಕ್ಕಪರಿಶೋಧನೆಯಲ್ಲಿ ಇದರ ಗಮನ ಸೆಳೆದಾಗ (ಅಕ್ಟೋಬರ್ 2019 – ಜನವರಿ 2020) ತಕ್ಷಣದಲ್ಲಿ ರಾಜ್ಯ ಸರ್ಕಾರ/ವಿಶ್ವವಿದ್ಯಾಲಯ ಕರ್ತವ್ಯ ಬದ್ಧವಾಗಿ ಕ್ರಮಗಳನ್ನು ಜರುಗಿಸಬೇಕಿದ್ದಿತು ಹಾಗೂ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ಅವರ ವಿರುದ್ಧ ಇದೇ ರೀತಿಯ ಆಪಾದನೆಗಳು ರುಜುವಾತಾಗಿರುವ (ಅಕ್ಟೋಬರ್ 2019) ವಾಸ್ತವಾಂಶದ ಹಿನ್ನೆಲೆಯಲ್ಲಿ ಉತ್ತರವನ್ನು ಒಪ್ಪಲಾಗುವುದಿಲ್ಲ.***

***ಕಡಿಮೆ ಮೊತ್ತದ ಜಮೆ ಹಾಗೂ ಪ್ರವೇಶ ವಿಭಾಗದ ಸಿಬ್ಬಂದಿಗಳು ಶುಲ್ಕ ಪಾವತಿಗಳನ್ನು ಪರಿಶೀಲಿಸುವಲ್ಲಿನ ಹಾಗೂ ನಿರ್ದೇಶಕರು ಒದಗಿಸಿದ ಪಟ್ಟಿಯ ಸತ್ಯಾಸತ್ಯತೆಯಲ್ಲಿನ ವೈಫಲ್ಯಕ್ಕೆ ಸಿಬಿಎಸ್ಎಮ್ಎಸ್‌ನ ಹಿಂದಿನ ನಿರ್ದೇಶಕರು ಮತ್ತು ಸಹಾಯಕರ ವಿರುದ್ಧ ಸೂಕ್ತ ಕ್ರಮಗಳನ್ನು ಜರುಗಿಸಬೇಕೆಂದು ಶಿಫಾರಸು ಮಾಡುತ್ತದೆ. ಇಂತಹ ಪ್ರಕರಣಗಳು ಮರುಕಳಿಸುವುದನ್ನು ತಪ್ಪಿಸಲು ಆಂತರಿಕ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸುವ ಅಗತ್ಯತೆ ಇದೆ.***

### *2.1.2 ದಾಖಲೆಗಳ ಕೈಚಳಕ ತೋರಿಸುವ ಹಾಗೂ ಸಂದೇಹಾಸ್ಪದ ಹಣ ದುರುಪಯೋಗ*

ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆ ಕೈಗೊಳ್ಳುವ ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ಮಾಸಿಕ ಸ್ಟೈಫಂಡ್ ಒದಗಿಸುತ್ತದೆ. ಸ್ಟೈಫಂಡ್ ನ ಕೋರಿಕೆಯನ್ನು ಸಂಬಂಧಿಸಿದ ಮಾರ್ಗದರ್ಶಕರ ಧೃಡೀಕರಣ ಹಾಗೂ ವಿಭಾಗದ ಮುಖ್ಯಸ್ಥರ ಮೇಲುರುಜುವೊಂದಿಗೆ ನಿಗದಿತ ನಮೂನೆಗಳಲ್ಲಿ ಸಂಶೋಧನಾ ವಿದ್ಯಾರ್ಥಿಗಳು ಸಲ್ಲಿಸುತ್ತಾರೆ. ಸ್ಟೈಫಂಡ್ ನ ಕೋರಿಕೆಯ ಅವಧಿಗೆ ಹಾಜರಾತಿ ಪ್ರಮಾಣ ಪತ್ರದ ಪ್ರತಿಗಳನ್ನು ಲಗತ್ತಿಸಲಾಗುತ್ತದೆ. ಸಂಶೋಧನಾ ವಿದ್ಯಾರ್ಥಿಗಳು ಸಲ್ಲಿಸುವ ಈ ಸ್ಟೈಫಂಡ್ ಕೋರಿಕೆಗಳನ್ನು ಆರ್ಥಿಕ ವಿಭಾಗವು ಪರಿಶೀಲಿಸಿ ಪಾವತಿಗೆ ಮಂಜೂರು ಮಾಡಲಾಗುವುದು. ತದನಂತರ ಸಂಶೋಧನಾ ವಿದ್ಯಾರ್ಥಿಗಳ ಸಂಬಂಧಿಸಿದ ಬ್ಯಾಂಕ್ ಖಾತೆಗಳಿಗೆ ಪಾವತಿಗಳನ್ನು ಜಮೆ ಮಾಡಲಾಗುವುದು.

***ದಾಖಲೆಗಳನ್ನು ಕೈಚಳಕದಿಂದ ತಿರುಚಲಾಗಿದೆ ಹಾಗೂ ಸ್ಟೈಫಂಡ್ ದುರುಪಯೋಗವಾಗಿದೆ ಎಂಬ ಆರೋಪಿಸಿದ ಓರ್ವ ಸ್ನಾತಕೋತ್ತರ ಸಂಶೋಧನಾ ವಿದ್ಯಾರ್ಥಿಯ ದೂರಿನ ಆಧಾರದ ಮೇಲೆ (28 ಜೂನ್ 2017) ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳು ಆರ್ಥಿಕ ವಿಭಾಗದಲ್ಲಿನ ಹಿರಿಯ ಸಹಾಯಕನ ಕೆಲಸದ ಅವಧಿಯಲ್ಲಿ ನಡೆಸಲಾದ ಸಂಪೂರ್ಣ ಕೆಲಸದ ಬಗ್ಗೆ ವಿಸ್ತೃತ ತನಿಖೆ ನಡೆಸಬೇಕೆಂದು ಆದೇಶಿಸಿದರು (3 ಜುಲೈ 2017). ಸಂಶೋಧನಾ ವಿದ್ಯಾರ್ಥಿಗಳ ಶಿಷ್ಯವೇತನಗಳ ಅರ್ಜಿಗಳ ಪ್ರಕ್ರಿಯೆ, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಗಳ ಹಣಕಾಸಿಗೆ ಸಂಬಂಧಿಸಿದ ಎಲ್ಲಾ ಕಡತಗಳ ಕೆಲಸ, ಮಾಸಿಕ ಪಿಂಚಣಿ ಬಿಲ್ಲುಗಳ ಪ್ರಕ್ರಿಯೆ ಇತ್ಯಾದಿಗಳೊಂದಿಗೆ ಇನ್ನೂ ಅನೇಕ ಕೆಲಸಗಳನ್ನು ಆ ನೌಕರನಿಗೆ ವಹಿಸಲಾಗಿತ್ತು. ಪ್ರಾಥಮಿಕ ಆಂತರಿಕ ತನಿಖೆಯ ಆಧಾರದ ಮೇಲೆ 4 ಜುಲೈ 2017 ರಂದು ಆ ನೌಕರನನ್ನು ಅಮಾನತ್ತು ಮಾಡಲಾಯಿತು ಹಾಗೂ ಮೇಲಿನ ದೂರುದಾರನ ಬಿಲ್ಲನ್ನೂ ಒಳಗೊಂಡಂತೆ ನೌಕರನ ಕೈಚಳಕದಿಂದ ತಿರುಚಿದ ಹಾಗೂ ದುರುಪಯೋಗದ ಒಂಬತ್ತು ಬಿಲ್ಲುಗಳ ಒಟ್ಟು ಮೊತ್ತವು ₹4.32 ಲಕ್ಷದಷ್ಟಿದ್ದು (ಮೂಲ ಸ್ಟೈಫಂಡ್ ನ ಕೋರಿಕೆಯ ₹0.72 ಲಕ್ಷಕ್ಕೆ ಪ್ರತಿಯಾಗಿ ಸ್ಟೈಫಂಡ್ ಅರ್ಜಿಗಳನ್ನು ₹4.32 ಲಕ್ಷಗಳಿಗೆ ಕೈಚಳಕದಿಂದ ತಿರುಚಲಾಗಿ ಸೆಳೆಯಲಾಯಿತು). ನೌಕರನ ವಿರುದ್ಧ ಪೊಲೀಸ್ ದೂರನ್ನು 22 ಜುಲೈ 2017ರಂದು ದಾಖಲಿಸಲಾಯಿತು. ಸಂಶೋಧನಾ ವಿದ್ಯಾರ್ಥಿಗಳ ಮಾಸಿಕ ₹8,000ದ ಸ್ಟೈಫಂಡ್ ನ ಕೋರಿಕೆಯನ್ನು ಮಾರ್ಪಾಡಿಸುವಲ್ಲಿ ನೌಕರನು ಈ ಕೆಳಕಂಡಂತೆ ಹಸ್ತಕ್ಷೇಪ ಮಾಡಿರುತ್ತಾನೆ.***

***(i) ಸ್ಟೈಫಂಡ್ ನ ಕೋರಿಕೆಯನ್ನು ಆರು ತಿಂಗಳುಗಳಿಗೆಂಬಂತೆ ತಿಂಗಳನ್ನು ಪೂರ್ವಪದವಾಗಿ ಜೋಡಿಸಲಾಗಿದೆ (ಉದಾಹರಣೆ ಸಂಶೋಧನಾ ವಿದ್ಯಾರ್ಥಿ ನವೆಂಬರ್ 2016ರ ಶಿಷ್ಯ ವೇತನದ ಸ್ಟೈಫಂಡ್ ಕೋರಿಕೆಗೆ ಜೂನ್ 2016 ರಿಂದ ನವೆಂಬರ್ 2016ರ ವರೆಗೆ ಎಂದು ಪೂರ್ವಪದ ಜೋಡಿಸಿ ಆರು ತಿಂಗಳುಗಳೆಂದು ಓದಲಾಗುವಂತೆ ಹಸ್ತಕ್ಷೇಪ ಮಾಡಿರುತ್ತಾರೆ) ಅಥವಾ ದಿನಾಂಕವನ್ನು (ಉದಾಹರಣೆ ಸಂಶೋಧನಾ ವಿದ್ಯಾರ್ಥಿ ಮೇ 2017ರ ಶಿಷ್ಯ ವೇತನದ ಸ್ಟೈಫಂಡ್***

*ನ ಕೋರಿಕೆಗೆ 1.12.2016 ರಿಂದ 31.05.2017ರ ವರೆಗೆ ಎಂದು ಪೂರ್ವಪದ ಜೋಡಿಸಿ ಆರು ತಿಂಗಳುಗಳಿಗೆ ಓದಲಾಗುವಂತೆ ಹಸ್ತಕ್ಷೇಪ ಮಾಡಿರುತ್ತಾರೆ).*

*(ii) ಸಂಖ್ಯೆ 6ರಿಂದ ಗುಣಿಸಿ 8,000ಕ್ಕೆ ಪೂರ್ವಪದ ಜೋಡಣೆ.*

*(iii) ಸಂಖ್ಯೆ 4ನ್ನು 8,000ಕ್ಕೆ ಪೂರ್ವಪದ ಜೋಡಿಸಿ 48,000 ಎಂದು ಓದಲಾಗಿದೆ.*

*(iv) ನಲವತ್ತು ಎಂಬ ಪದವನ್ನು ಪೂರ್ವಪದವಾಗಿ ಜೋಡಿಸಿ ನಲವತ್ತೆಂಟು ಸಾವಿರ ಎಂದು ಓದಲಾಗಿದೆ.*

*ಮೂಲ ಸ್ಟೈಫಂಡ್ ನ ಕೋರಿಕೆಗೆ ಸಹಾಯಕ ಆರ್ಥಿಕ ಅಧಿಕಾರಿ/ಉಪ ಆರ್ಥಿಕ ಅಧಿಕಾರಿಯವರ ಅನುಮೋದನೆ ಪಡೆದ ನಂತರ ನೌಕರನು ಇಂತಹ ಮಾರ್ಪಾಡುಗಳನ್ನು ನಡೆಸಿರುತ್ತಾನೆ. ಮುಂದುವರೆದು, ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ದೂರಿನ ಅನ್ವಯ ವಿದ್ಯಾರ್ಥಿಗಳ ಖಾತೆಗೆ ತಪ್ಪಾಗಿ ಇತರ ವಿದ್ಯಾರ್ಥಿಗಳ ಹಣವನ್ನು ಜಮೆ ಮಾಡಲಾಗಿದೆ ಎಂದು ನೌಕರನು ಹೆಚ್ಚುವರಿಯಾಗಿ ವರ್ಗಾಯಿಸಲ್ಪಟ್ಟ ಹಣವನ್ನು ನಗದು ರೂಪದಲ್ಲಿ ವಸೂಲು ಮಾಡುತ್ತಿದ್ದನು.*

*ನೌಕರನು ಆರಂಭದಲ್ಲಿ ಹೆಚ್ಚುವರಿ ಹಣವಾದ ₹40,000ಅನ್ನು ವಿಶ್ವವಿದ್ಯಾಲಯದ ಲೆಕ್ಕಪತ್ರಕ್ಕೆ ದೂರುದಾರನಿಂದ ಅದನ್ನು ವಸೂಲು ಮಾಡಿರುವುದನ್ನು ಡಿ.ಡಿ. ಮೂಲಕ ರವಾನಿಸಿರುತ್ತಾನೆ ಹಾಗೂ ನಾಲ್ಕು ಪ್ರಕರಣಗಳಿಗೆ ಸಂಬಂಧಿಸಿದ ₹1.6 ಲಕ್ಷ ಮೊತ್ತವನ್ನು 16 ಆಗಸ್ಟ್ 2017 ರಂದು ರವಾನಿಸಿರುತ್ತಾನೆ. ಬಾಕಿ ಉಳಿದ ₹1.6 ಲಕ್ಷ ರವಾನಿಸಿರುವುದರ ವಿವರಗಳು ನೀಡಲಾದ ದಾಖಲೆಗಳಲ್ಲಾಗಲಿ ಅಥವಾ ಲೆಕ್ಕಪರಿಶೋಧನೆಗಾಗಲಿ ತಿಳಿಸಿರುವುದಿಲ್ಲ. ಕಾರಣ ಕೇಳುವ ಸೂಚನಾಪತ್ರವನ್ನು ನೌಕರನಿಗೆ 27 ನವೆಂಬರ್ 2017ರಂದು ಜಾರಿಮಾಡಲಾಗಿದೆ ಹಾಗೂ ಅದಕ್ಕೆ ನೌಕರನು ತನ್ನ ಉತ್ತರವನ್ನು 5 ಡಿಸೆಂಬರ್ 2017ರಂದು ಸಲ್ಲಿಸಿರುತ್ತಾನೆ ಮತ್ತು ವಿಶ್ವವಿದ್ಯಾಲಯವು ಅದನ್ನು ಒಪ್ಪಿರುವುದಿಲ್ಲ.*

*ತದನಂತರ, ಉಪಕುಲಪತಿಗಳು ಕೈಚಳಕದಿಂದ ತಿರುಚಿದ ಹಾಗೂ ದುರುಪಯೋಗದ ಆಪಾದನೆಗಳಿಗೆ ತನಿಖೆ ನಡೆಸಲು ಶ್ರೀ ಬಿ ಶಿವಲಿಂಗೇಗೌಡ, ನಿವೃತ್ತ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರನ್ನು ನೇಮಿಸಿದರು (8 ಆಗಸ್ಟ್ 2018). "ಮೇಲೆ ನಿರೂಪಿಸಲಾದ ಕೈಚಳಕದಿಂದ ತಿರುಚಿದ ಕ್ರಮವು ಸ್ಪಷ್ಟವಾಗಿ ಪ್ರದರ್ಶಿಸುತ್ತದೆ. ಇದು ಕಣ್ತಪ್ಪಿನಿಂದಾದ ಕ್ರಮಗಳಾಗಿರುವುದಿಲ್ಲ. ಬದಲಿಗೆ ಮುಂದಾಗಿಯೇ ಪೂರ್ವೋದ್ದೇಶಿತ, ಉದ್ದೇಶಪೂರ್ವಕವಾಗಿ ಹಾಗೂ ಯಥಾಯೋಗ್ಯವಾದ ಯೋಜನೆ ಹಾಗೂ ಕಾರಣ ಸ್ಪಷ್ಟ" ಎಂದು ತನಿಖಾವರದಿಯು ತಿಳಿಸುತ್ತದೆ (11 ಜನವರಿ 2019). ಮುಂದುವರೆದು, ತನಿಖಾಧಿಕಾರಿಯು ಕೈಚಳಕದಿಂದ ತಿರುಚುವಿಕೆಯ ಆಪಾದನೆಯು ರುಜುವಾತಾಗಿದೆಯಾದರೂ ದುರುಪಯೋಗವು ಸಾಬೀತಾಗಿರುವುದಿಲ್ಲವಾದ್ದರಿಂದ ವಿಶ್ವವಿದ್ಯಾಲಯವು ಶಾಸನಬದ್ಧವಾಗಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.*

*ಇಲಾಖಾ ತನಿಖೆ ಬಾಕಿಇರುವಂತೆ ನೌಕರನ ಅಮಾನತ್ತನ್ನು ರದ್ದುಗೊಳಿಸಲಾಯಿತು ( 13 ಜೂನ್ 2018) ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಇದು ಅಕ್ರಮವು ಹಾಗೂ ಅಮಾನತ್ತನ್ನು ರದ್ದುಗೊಳಿಸಿರುವುದಕ್ಕೆ ಯಾವುದೇ ಕಾರಣಗಳನ್ನು ದಾಖಲಿಸಿರಲಿಲ್ಲ. ತನಿಖಾಧಿಕಾರಿಗಳು ಆಪಾದನೆಗಳನ್ನು ಖಚಿತಪಡಿಸಿ ವರದಿಯನ್ನು ಸಲ್ಲಿಸಿದ್ದರೂ, ವಿಶ್ವವಿದ್ಯಾಲಯದ ನೌಕರನ ಮೇಲೆ ಯಾವುದೇ ಕ್ರಮಗಳನ್ನು ಇಲ್ಲಿಯವರೆಗೂ ತೆಗೆದುಕೊಂಡಿರಲಿಲ್ಲ ಮತ್ತು ಉಪಕುಲಪತಿಗಳು ನೌಕರನ ಮೇಲೆ ಸೂಕ್ತಕ್ರಮಗಳನ್ನು ಜರುಗಿಸುವ ಪ್ರಸ್ತಾವನೆಯನ್ನು ಮುಂದೂಡಿದರು (20 ಜುಲೈ 2019) ಹಾಗೂ ಯಾವುದೇ ಕಾರಣಗಳನ್ನು ನೀಡದೇ ತಡೆಹಿಡಿಯಲಾಗಿದೆ ಎಂದು ಸೂಚಿಸಿದರು.*

*ಮುಂದುವರೆದು, ಲೆಕ್ಕಪರಿಶೋಧನಾ ಅವಧಿಯಲ್ಲಿ ಪರೀಕ್ಷಾತನಿಖೆಯ ವ್ಯಾಪ್ತಿಯಲ್ಲಿ ಲಭ್ಯವಾಗಿಸಿದ ದಾಖಲೆಗಳ (ಪ್ರಮುಖ ವೋಚರ್‌ಗಳ) ಮೇಲಿನ ಒಂಬತ್ತು ಬಿಲ್ಲುಗಳು ಸೇರುವುದರೊಂದಿಗೆ ಮುಂದೆ*

*ತಿಳಿಸಲಾದ ನಾಲ್ಕು ಬಿಲ್ಲುಗಳಲ್ಲಿ ಕೈಚಳಕದ ತಿರುಚುವಿಕೆಯಿಂದ ಹೆಚ್ಚುವರಿಯಾಗಿ ₹1.28 ಲಕ್ಷ ಸ್ಟೈಫಂಡ್ ನ ಬಟವಾಡೆಯಲ್ಲಿ ಪರಿಣಮಿಸಿತು ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು.*

*(i)* *ರಸಾಯನಶಾಸ್ತ್ರದ ವಿಭಾಗದ ಶ್ರೀ ಓಂಕಾರ್ ಮೂರ್ತಿ ಬಿ.ಎಂ ರವರು ಜನವರಿ 2017 ತಿಂಗಳ ₹8,000 ಸ್ಟೈಫಂಡ್ ಕೋರಿಕೆಯನ್ನು ಸಲ್ಲಿಸಿದರು (ಫೆಬ್ರವರಿ 2017). ಸಹಾಯಕ ಆರ್ಥಿಕ ಅಧಿಕಾರಿ/ ಉಪ ಆರ್ಥಿಕ ಅಧಿಕಾರಿಗಳ ಅನುಮೋದನೆ ಪಡೆದ ನಂತರ, ಸ್ಟೈಫಂಡ್ ನ ಕೋರಿಕೆಯ ₹8,000 ಕ್ಕೆ 1 * 6 ಎಂದು ಜೋಡಿಸಿ ಆರು ತಿಂಗಳುಗಳು ಎಂದು ಓದುವುದಕ್ಕಾಗಿ ಅನುವು ಮಾಡಿತು ಹಾಗೂ ₹8,000 ನಂಬರ್ ಗೆ 4ನ್ನು ಪೂರ್ವಪದ ಜೋಡಿಸಿ ₹48,000 ಎಂದು ಓದಲಾಗಿಸಿತು. ಆಗಸ್ಟ 2016 ಎಂಬ ಪದವನ್ನು ಜನವರಿ 2017ರ ಮೇಲೆ ಬರೆಯಲಾಯಿತು. ಆದರೆ ಸ್ಟೈಫಂಡ್ ನ ಮೊತ್ತದಲ್ಲಿನ ಪದಗಳಲ್ಲಿ ಯಾವುದೇ ಮಾರ್ಪಾಡುಗಳಿರಲಿಲ್ಲದೇ ಹಾಗೇ ಉಳಿಸಲಾಯಿತು. ಆದರೆ ಬಿಲ್ಲು ಅಂಗೀಕೃತವಾಗುವ ಸೀಲ್ ನಲ್ಲಿ ಮೊತ್ತವನ್ನು ನಲವತ್ತೆಂಟು ಸಾವಿರವೆಂದು, ಪದಗಳಲ್ಲಿ ಮಾರ್ಪಾಡಿಸಲಾಗಿತ್ತು.*

*ಮುಂದುವರೆದು, ಈಗಿನ (ಪ್ರಸಕ್ತ) ಪ್ರಕರಣದಲ್ಲಿ ಸಂಪೂರ್ಣ ಮೊತ್ತವಾದ ₹48,000 ಸ್ಟೈಫಂಡ್ ಕೋರಿಕೆದಾರನ ಖಾತೆಯ ಬದಲಿಗೆ ನೌಕರನ ಬ್ಯಾಂಕ್ ಖಾತೆಗೆ ಜಮೆ ಮಾಡಲಾಯಿತು (7 ಫೆಬ್ರವರಿ 2017). ಸ್ಟೈಫಂಡ್ ಕೋರಿಕೆದಾರನ ಖಾತೆಗೆ 8 ಫೆಬ್ರವರಿ 2017 ರಂದು ನಗದು ರೂಪದಲ್ಲಿ ₹8,000 ಜಮೆ ಮಾಡಲಾಯಿತು. ಪೊಲೀಸ್ ದೂರಿನ ಅನ್ವಯ ಮೇಲೆ ತಿಳಿಸಿದ ಒಂಬತ್ತು ಪ್ರಕರಣಗಳ ಪೈಕಿ ಎರಡು ಪ್ರಕರಣಗಳಲ್ಲಿ ನೌಕರನು ಇದೇ ರೀತಿಯ ಕಾರ್ಯವಿಧಾನವನ್ನು ಅಳವಡಿಸಿದ್ದನು.*

*(ii)* *ವಿಜ್ಞಾನ ಹಾಗೂ ಇಂಜಿನೀಯರಿಂಗ್ ವಿಭಾಗದ ಸುನಿತಮ್ಮ ಕೆ ರವರ ಶಿಷ್ಯವೇತನದ ಮೊತ್ತ ₹36,129ಕ್ಕೆ (ಆಗಸ್ಟ್ 2016ರಿಂದ ಡಿಸೆಂಬರ್ 2016ರ ವರೆಗೆ) ₹40,000 ಗಳಿಗೆ ಮಂಜೂರು ಮಾಡಲಾಯಿತು. ಅಧೀಕ್ಷಕರು ಬಿಲ್ ವಹಿಯನ್ನು ಅಧಿಕೃತಗೊಳಿಸಿರಲಿಲ್ಲ.*

*(iii)* *ಶ್ರೀ ರವಿಕುಮಾರ್ ಇ ರವರಿಗೆ ನವೆಂಬರ್ 2015ರಿಂದ ಮಾರ್ಚ್ 2016ರ ವರೆಗೆ ಶಿಷ್ಯವೇತನದ ₹22,400 ಮೊತ್ತವನ್ನು ಮೇ 2016ರಲ್ಲಿ ಬಿಲ್ ವಹಿಯಲ್ಲಿ ದಾಖಲಿಸಿ ಪಾವತಿಸಲಾದರೂ, ವಿದ್ಯಾರ್ಥಿಯು ಪುನಃ ಜನವರಿಯಿಂದ ಮಾರ್ಚ್ 2016ರ ವರೆಗೂ ₹18,000 ಸ್ಟೈಫಂಡ್ಗೆ ಅರ್ಜಿಯನ್ನು ಸಲ್ಲಿಸಿದನು. ಇದನ್ನು ₹40,305ಕ್ಕೆ ಈ ಕೆಳಕಂಡಂತೆ ಮಾರ್ಪಾಡಿಸಲಾಯಿತು.*

- *ಮತ್ತೊಂದು ಬಿಲ್ ಸಂಖ್ಯೆ ಬಿ.ಆರ್ 9637/31.01.2016ಗೆ ₹28,155 ಉಲ್ಲೇಖವನ್ನು ನೀಡಲಾಯಿತು (ಸೆಳೆಯಲಾಯಿತು).*
- *ಅಂಕೆಗಳಲ್ಲಿ ಪರಿವರ್ತಿಸಲಾಗಿದ್ದರೂ, ಸ್ಟೈಫಂಡ್ ಕೋರಿಕೆದಾರನ ಮೊತ್ತದಲ್ಲಿನ ಪದಗಳ ನಮೂದುಗಳಲ್ಲಿ ಮಾರ್ಪಾಡು ಮಾಡಿರಲಿಲ್ಲ.*
- *ಬಿಲ್ ಅಂಗೀಕೃತವಾಗುವ ಸೀಲ್‌ನಲ್ಲಿ ಅಂಕೆ ಹಾಗೂ ಪದಗಳೆರಡರಲ್ಲೂ ₹40,305 ಎಂದು ಬರೆಯಲಾಗಿತ್ತು.*
- *ಅದಾಗ್ಯೂ, ಬಿಲ್ ವಹಿ/ಲೆಡ್ಜರ್ ಫೋಲಿಯೋದಲ್ಲಿ ಮೇಲೆ ಪಾವತಿಸಲಾಗಿರುವುದರ ಸಂಬಂಧ ಯಾವುದೇ ನಮೂದುಗಳಿರಲಿಲ್ಲ. ಇದು ಸ್ಟೈಫಂಡ್ ಕೋರಿಕೆಯ ನೈಜತೆಯನ್ನು ಸಂದೇಹಾಸ್ಪದವಾಗಿಸುತ್ತದೆ.*

*(iv)* *ಕನ್ನಡ ವಿಭಾಗದಲ್ಲಿ ಶ್ರೀ ಕೃಷ್ಣಾ ನಾಯಕ್ ರವರ ಮಾರ್ಚ್ 2017 ಮತ್ತು ಏಪ್ರಿಲ್ 2017ರ ಶಿಷ್ಯವೇತನದ ಸ್ಟೈಫಂಡ್ ಕೋರಿಕೆಯಲ್ಲಿ ₹16,000 ವನ್ನು ₹24,000 ಎಂದೂ 2017ರ ಫೆಬ್ರವರಿ ತಿಂಗಳಿಗೆ ಒಟ್ಟು ಮೊತ್ತದ ಕೆಳಗೆ ₹800 ಎಂದು ಸೇರಿಸಿ, ₹24,000 ಕ್ಕೆ ಮಂಜೂರು ಮಾಡಲಾಗಿದೆ.*

*ಫೆಬ್ರವರಿ 2017ಕ್ಕೆ ಸಂಬಂಧಿಸಿದ ಕ್ಲೈಮ್‌ಗೆ ಹಾಜರಿ ಪತ್ರದ ಆಧಾರ ಒದಗಿಸಿರಲಿಲ್ಲ. ಅರ್ಜಿದಾರರಿಂದ ಪದಗಳಲ್ಲಿ ಬರೆಯಲ್ಪಟ್ಟ ಮೊತ್ತವನ್ನು ₹24,000 ಎಂದು ಮಾರ್ಪಾಡಿಸಲಾಗಿತ್ತು.*

*ವಿಶ್ವವಿದ್ಯಾಲಯದ ಆರ್ಥಿಕ ವಿಭಾಗವು ಚೆಕ್ ಗಳನ್ನು ಪ್ರಿಂಟ್ ಮಾಡುವ ಮುನ್ನ ಬಿಲ್ ಮೊತ್ತದಲ್ಲಿರುವ ಅಂಕಿಗಳು ಹಾಗೂ ಪದಗಳನ್ನು ತುಲನೆ ಮಾಡುವ, ಬಿಲ್ಲುಗಳಲ್ಲಿ ಮಾಡಲಾದ ಮಾರ್ಪಾಡುಗಳನ್ನು ಧೃಡೀಕರಿಸುವುದರ ಮುಂತಾದ ಈ ರೀತಿಯ ಅಗತ್ಯವಿರುವ ತಾಳೆ ನೋಡುವುದರ ವೈಫಲ್ಯವು ಅಸ್ತಿತ್ವದಲ್ಲಿರುವ ನಿಯಂತ್ರಣ ವ್ಯವಸ್ಥೆಯ ನ್ಯೂನತೆಗಳನ್ನು ಸೂಚಿಸುತ್ತಲ್ಲದೇ, ಇಂತಹ ಪ್ರಕರಣಗಳಲ್ಲಿ ಅವರು ಒಳಗೊಂಡಿರುವ ಸಾಧ್ಯತೆಗಳಿರುತ್ತದೆ.*

*ಲೆಕ್ಕಪರಿಶೋಧನೆಯಲ್ಲಿ ಮೇಲೆ ಗಮನಿಸಲಾದಂತೆ, ಒದಗಿಸಿದ ದಾಖಲೆಗಳಿಂದ ಪೊಲೀಸ್ ವರದಿಯಾದುವುಗಳಲ್ಲದೇ ಅಧಿಕವಾಗಿ ನಾಲ್ಕು ಪ್ರಕರಣಗಳನ್ನು ಗಮನಿಸಲಾಯಿತು. ಹೀಗೆ, ಆರ್ಥಿಕ ವಿಭಾಗದ ಹಿರಿಯ ಸಹಾಯಕನ ಕೆಲಸದ ಸಂಪೂರ್ಣ ಅವಧಿಯಾದ 15 ಫೆಬ್ರವರಿ 2005ರಿಂದ 4 ಜುಲೈ 2017ರ ವರೆಗಿನ ಅವಧಿಯ ವಿಸ್ತೃತ ತನಿಖೆಯನ್ನು ಸಮಗ್ರವಾಗಿ ನಡೆಸಬೇಕೆಂದು ಆದೇಶಿಸಿದ್ದರೂ ಸಹ ವಿಶ್ವವಿದ್ಯಾಲಯವು ಪರಿಣಾಮಕಾರಿಯಾಗಿ ಪರಿಶೀಲಿಸಿಲ್ಲವೆನ್ನುವುದನ್ನು ನಿರ್ಣಯಿಸಬಹುದು.*

*ನೌಕರನಿಂದ ವೈಯಕ್ತಿಕ ವಿದ್ಯಾರ್ಥಿಗಳ ಸ್ಟೈಫಂಡ್ ಕೋರಿಕೆಗಳನ್ನು ಕೈಚಳಕದಿಂದ ತಿರಿಚಿರುವುದು ಅಧಿಕ ಮೊತ್ತಕ್ಕಾಗಿ ಎಂಬುದನ್ನು ತೋರಿಸುತ್ತದೆ ಹಾಗೂ ನೌಕರನು ತನ್ನ ಖಾತೆಗೆ ವರ್ಗಾಯಿಸುವುದರ ಮೂಲಕವೋ ಅಥವಾ ಹೆಚ್ಚುವರಿಯಾಗಿ ವರ್ಗಾಯಿಸಲ್ಪಟ್ಟ ಮೊತ್ತವನ್ನು ವಿದ್ಯಾರ್ಥಿಗಳಿಂದ ನಗದು ರೂಪದಲ್ಲಿ ವಸೂಲು ಮಾಡುವುದರಿಂದ ವಿಶ್ವವಿದ್ಯಾಲಯದ ನಿಧಿಯನ್ನು ಎಳೆಯುವ (ಸೆಳೆಯುವ) ಉದ್ದೇಶವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ.*

*ಸಂಬಂಧಪಟ್ಟ ಎಲ್ಲರ ಮೇಲೆ ಕ್ರಮಗಳನ್ನು ಜರುಗಿಸಬೇಕು ಹಾಗೂ ಭವಿಷ್ಯದಲ್ಲಿ ಇಂತಹ ಪ್ರಕರಣಗಳು ಮರುಕಳಿಸದಂತಿರಬೇಕೆಂದು ಶಿಫಾರಸು ಮಾಡಲಾಗಿದೆ. ಸ್ಟೈಫಂಡ್ ಕೋರಿಕೆದಾರರು ಸಲ್ಲಿಸುವ ಸ್ಟೈಫಂಡ್ ಕೋರಿಕೆಗಳ ಮಾರ್ಪಾಡುಗಳನ್ನು ಧೃಡೀಕರಿಸುವುದು, ವಿದ್ಯಾರ್ಥಿಗಳು ಸ್ಟೈಫಂಡ್ ಕೋರಿದ ಮೊತ್ತಕ್ಕೆ ಸ್ವೀಕೃತಿ ಪತ್ರ ಪಡೆಯುವುದು ಅಂಕಿ ಮತ್ತು ಪದಗಳೆರಡನ್ನೂ ಮೊತ್ತಕ್ಕೆ ತುಲನೆ ಮಾಡುವುದು ಇತ್ಯಾದಿಗಳಿಂದ ಬಿಲ್ಲನ್ನು ಮಂಜೂರು ಮಾಡುವ ಹಾಗೂ ಚೆಕ್‌ಗಳ ಮುದ್ರಣಗಳನ್ನು ತೆಗೆಯುವ ಮುನ್ನ ಹೆಚ್ಚುವರಿಯಾಗಿ ಖಚಿತಪಡಿಸಿಕೊಳ್ಳಬೇಕು ಎಂಬುದನ್ನು ಜಾರಿಗೊಳಿಸಬೇಕು.*

### *2.1.3 ಬ್ಯಾಂಕ್ ಖಾತೆಗಳ ಕಾರ್ಯಾಚರಣೆ ಹಾಗೂ ನಿರ್ವಹಣೆ*

ಬ್ಯಾಂಕ್ ಖಾತೆಗಳಲ್ಲಿ ನಿಧಿ/ಹಣದ ನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ಜವಾಬ್ದಾರಿಗಳನ್ನು ಖಾತ್ರಿಪಡಿಸಿಕೊಳ್ಳಲು ಹಣದ ಕಾರ್ಯಾಚರಣೆಗೆ ಮಾರ್ಗದರ್ಶಿ ಸೂತ್ರಗಳನ್ನು ಕರ್ನಾಟಕ ಸರ್ಕಾರವು ಜಾರಿಗೊಳಿಸಿತು (ಜನವರಿ 2017). ಹೊಸದಾಗಿ ಬ್ಯಾಂಕ್ ಗಳಲ್ಲಿ ಖಾತೆ ತೆಗೆಯುವ, ಬ್ಯಾಂಕ್ ಖಾತೆಗಳ ನಿರ್ವಹಣೆ ಮತ್ತು ಬ್ಯಾಂಕ್ ಖಾತೆಗಳ ಬಹಿರಂಗಗೊಳಿಸುವಿಕೆ ಹಾಗೂ ಇನ್ನೂ ಅನೇಕ ಬ್ಯಾಂಕ್ ನಿಧಿಯ ಕಾರ್ಯಾಚರಣೆಗೆ ಕೇವಲ ಸ್ವೀಪ್ ಇನ್ ಸ್ವೀಪ್ ಔಟ್ ಠೇವಣಿ ಖಾತೆಗಳನ್ನು ಪರಿಗಣಿಸಬೇಕು ಮತ್ತು ಇನ್ನುಳಿದ ಬ್ಯಾಂಕ್ ಖಾತೆಗಳಿಗೆ (ಉಳಿತಾಯಖಾತೆ/ಚಾಲ್ತಿಖಾತೆ ಇತ್ಯಾದಿಗಳ) ಇಲಾಖೆಯ ಆಡಳಿತಾತ್ಮಕ ಮಂಜೂರಾತಿಯನ್ನು ಸರ್ಕಾರದ ಆದೇಶವು ಕಡ್ಡಾಯವಾಗಿರಬೇಕು ಎಂಬ ವಿಷಯಗಳನ್ನು ಮಾರ್ಗದರ್ಶಿ ಸೂತ್ರಗಳಲ್ಲಿ ವಿಸ್ತರಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯವು 23 ಬ್ಯಾಂಕ್ ಖಾತೆಗಳನ್ನು ವಿಶ್ವವಿದ್ಯಾಲಯದ ಆರ್ಥಿಕ ತಃಖ್ತೆಗಳಲ್ಲಿ ಪ್ರದರ್ಶಿಸಲಾಗಿತ್ತು. ಆದಾಗ್ಯು, ಬೆಂಗಳೂರು ವಿಶ್ವವಿದ್ಯಾಲಯವು ಆರ್ಥಿಕ ಅಧಿಕಾರಿ/ ಅನೇಕ ಇಲಾಖೆಗಳ ಮುಖ್ಯಸ್ಥರ ಹೆಸರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನಾಗರಬಾವಿ ಶಾಖೆ ಅಲ್ಲದೇ ಓರ್ವ

ಖಾತೆಯನ್ನು ಬ್ಯಾಂಕ್ ಆಫ್ ಬರೋಡಾದಲ್ಲಿ, ಒಟ್ಟು 94 ಖಾತೆಗಳನ್ನು ನಿರ್ವಹಿಸುತ್ತಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಮಾರ್ಗದರ್ಶಿಸೂತ್ರಗಳನ್ವಯ ಬೆಂಗಳೂರು ವಿಶ್ವವಿದ್ಯಾಲಯವು ಬ್ಯಾಂಕ್ ಖಾತೆಗಳ ಪಟ್ಟಿಯನ್ನಾಗಲೀ ಅಥವಾ ದಾಖಲೆಗಳಿಂದ ವಿವರಗಳಾಗಲಿ ಕಂಡುಬರುತ್ತಿರಲಿಲ್ಲ. ಹೀಗಾಗಿ, ವಿಶ್ವವಿದ್ಯಾಲಯವು ನಿಖರವಾಗಿ ಎಷ್ಟು ಬ್ಯಾಂಕ್ ಖಾತೆಗಳನ್ನು ಕಾರ್ಯಾಚರಣೆಯಲ್ಲಿರಿಸುತ್ತಿತ್ತು ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಖಾತ್ರಿ ಪಡಿಸಿಕೊಳ್ಳಲಾಗಲಿಲ್ಲ ಮತ್ತು ಉಳಿದ ಬ್ಯಾಂಕ್ ಖಾತೆಗಳನ್ನು ಮರೆಮಾಚಿರುವ ಸಾಧ್ಯತೆಗಳಿದೆ. ಬೆಂಗಳೂರು ವಿಶ್ವವಿದ್ಯಾಲಯವು ಎಲ್ಲ ವ್ಯವಹಾರಗಳನ್ನು ಎಲ್ಲ ಬ್ಯಾಂಕ್ ಖಾತೆಗಳನ್ನು ತನ್ನ ಲೆಕ್ಕಪತ್ರ ಪುಸ್ತಕದಲ್ಲಿ ಪ್ರದರ್ಶಿಸದಿರುವುದರ ವೈಫಲ್ಯದಿಂದ ವಿಶ್ವವಿದ್ಯಾಲಯದ ಆರ್ಥಿಕ ತಃಖ್ತೆಗಳು ನೈಜ ಹಾಗೂ ನ್ಯಾಯ ಸಮ್ಮತವಾದ ಚಿತ್ರಣಗಳನ್ನು ಮಂಡಿಸುವುದಿಲ್ಲ.

ಹಾಲಿ ಇರುವ ಖಾತೆಗಳ ಜೊತೆಗೆ ಎಲ್ಲ ರೀತಿಯ ಶುಲ್ಕವನ್ನು ಆನ್‌ಲೈನ್‌ನಲ್ಲಿ ಸಂಗ್ರಹಿಸಲು ಬೆಂಗಳೂರು ವಿಶ್ವವಿದ್ಯಾಲಯವು ಆಕ್ಸಿಸ್ ಬ್ಯಾಂಕ್‌ನಲ್ಲಿ ಒಂದು ಚಾಲ್ತಿ ಖಾತೆಯನ್ನು ತೆರೆಯಿತು (ಫೆಬ್ರವರಿ 2017) ಹಾಗೂ ವಿಶ್ವವಿದ್ಯಾಲಯದ ಖಾತೆಗೆ ಆನ್‌ಲೈನ್ ಮೂಲಕವಾಗಿ ಸಂಗ್ರಹಿಸಿದ ಹಣವನ್ನು ವರ್ಗಾಯಿಸಲು ಕಾಲಮಿತಿಯನ್ನು ವಿಧಿಸಿ ಒಂದು ಒಡಂಬಡಿಕೆ ಮಾಡಿಕೊಂಡಿತು (ಮಾರ್ಚ್ 2017). ಮೇಲೆ ತಿಳಿಸಿದಂತೆ ಮಾರ್ಗದರ್ಶಿಸೂತ್ರಗಳನ್ನು ಜಾರಿಯಾದ ನಂತರ ಖಾತೆಯನ್ನು ತೆರೆದ ಕಾರಣ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆಯವರ ನಿಗದಿತ ಮಂಜೂರಾತಿಯನ್ನು ಬೆಂಗಳೂರು ವಿಶ್ವವಿದ್ಯಾಲಯವು ಪಡೆಯಬೇಕಿತ್ತು. ಅಂತಹ ಯಾವುದೇ ಮಂಜೂರಾತಿಯನ್ನು ಪಡೆದಿರಲಿಲ್ಲ. ವಿಶ್ವವಿದ್ಯಾಲಯದಲ್ಲಿ ಬ್ಯಾಂಕಿಂಗ್ ಕಾರ್ಯಾಚರಣೆಗಳಿಗಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾನಲ್ಲಿ ಬ್ಯಾಂಕಿಂಗ್ ವ್ಯವಹಾರಗಳು ಇದ್ದರೂ ಬೆಂಗಳೂರು ವಿಶ್ವವಿದ್ಯಾಲಯವು ಮುಚ್ಚಿದ ಕೊಟೇಶನ್‌ಗಳನ್ನು[10] ಆಹ್ವಾನಿಸಿತು ಹಾಗೂ ಆಕರ್ಷಕ ಪ್ರಸ್ತಾವನೆಗಳಿದ್ದರೂ ಇತರ ಬ್ಯಾಂಕ್‌ಗಳ ಕೊಟೇಶನ್‌ಗಳನ್ನು ಪರಿಗಣಿಸಲಿಲ್ಲವೆಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಅದೂ ಅಲ್ಲದೇ, ಸ್ವೀಪ್–ಇನ್ ಸ್ವೀಪ್–ಔಟ್ ಖಾತೆಗೆ[11] ಬದಲಾಗಿ ಚಾಲ್ತಿಖಾತೆಯನ್ನು ತೆರೆದಿರುವುದು ಸರ್ಕಾರದ ಮಾರ್ಗದರ್ಶಿ ಸೂತ್ರಗಳ ಉಲ್ಲಂಘನೆಯಾಗಿದ್ದಲ್ಲದೇ ₹37.79 ಲಕ್ಷ ಬಡ್ಡಿಯಲ್ಲಿನ ನಷ್ಟದಲ್ಲಿ[12] ಪರಿಣಮಿಸಿತು.

ಮುಂದುವರೆದು, ಒಡಂಬಡಿಕೆಯ ಕರಾರು ಮತ್ತು ನಿಬಂಧನೆಗಳಂತೆ

- ಸಂಜೆ 7ರವರೆಗೆ ದಿನದಲ್ಲಿ ಒಟ್ಟು ಸಂಗ್ರಹಿಸಲಾದ ಮೊತ್ತವನ್ನು ಏಳು ದಿನಗಳೊಳಗಾಗಿ ಎಸ್‌ಬಿಎಮ್ ಖಾತೆಗೆ ವರ್ಗಾಯಿಸಬೇಕು (ಕಲಮು 3ಡಿ)
- ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿಯಲ್ಲಿ ಪ್ರತಿನಿತ್ಯವೂ ಬ್ಯಾಂಕ್ ಸಂಗ್ರಹಿಸಲಾದ ಸಂಪೂರ್ಣ ಶುಲ್ಕವನ್ನು ಚಾಲ್ತಿ ಖಾತೆಗೆ ಜಮೆ ಮಾಡಬೇಕು (ಕಲಮು 5)
- ಬ್ಯಾಂಕ್ ಮೊತ್ತವನ್ನು ತಕ್ಷಣವೇ ಮೊದಲನೇ ಭಾಗಿದಾರನ ಖಾತೆಗೆ ವರ್ಗಾಯಿಸಬೇಕು ಹಾಗೂ ಏಳು ದಿನಗಳೊಳಗಾಗಿ ಖಾತೆಯನ್ನು ಇತ್ಯರ್ಥ ಮಾಡಬೇಕು. ಬ್ಯಾಂಕ್ ಎರಡನೇ ಭಾಗೀದಾರನಿಗೆ ವರ್ಗಾಯಿಸುವುದರಲ್ಲಿ ಯಾವುದೇ ವಿಳಂಬವಾದಲ್ಲಿ ಬಾಕಿ ಇರುವ ಮೊತ್ತಕ್ಕೆ ವಿಳಂಬದ ದಿನಗಳಿಗೆ ಚಾಲ್ತಿಯಲ್ಲಿರುವ ಬ್ಯಾಂಕ್ ಬಡ್ಡಿದರದಂತೆ ಪಾವತಿಸುವ ಬಾಧ್ಯತೆ ಇರುತ್ತದೆ (ಕಲಮು 7).

---

[10] ಕೆನರಾಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ.

[11] ಇದು ಸ್ಥಿರ ಠೇವಣಿ ಮತ್ತು ಉಳಿತಾಯ ಬ್ಯಾಂಕ್ ಖಾತೆಯ ಅನುಕೂಲ ಮತ್ತು ಸೌಕರ್ಯ ನೀಡುವ ಖಾತೆಯಾಗಿದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಇದು ಉಳಿತಾಯ ಮತ್ತು ಸ್ಥಿರ ಠೇವಣಿ ಖಾತೆಗಳ ಸಂಯೋಜನೆಯಾಗಿದೆ.

[12] ಸ್ವೀಪ್–ಇನ್ ಸ್ವೀಪ್ ಔಟ್ ಉಳಿತಾಯ ಬ್ಯಾಂಕ್ ಮತ್ತು ಸ್ಥಿರ ಠೇವಣಿಯ ಎರಡೂ ಅಂಶಗಳನ್ನು ಹೊಂದಿರುವುದರಿಂದ, ಬಡ್ಡಿಯನ್ನು ಒಂದು ದಿನಕ್ಕೆ ಉಳಿತಾಯ ಖಾತೆಯ ಬಡ್ಡಿಯ ದರ ಶೇಕಡಾ 4 ರಂತೆ ಲೆಕ್ಕಾಚಾರ ಮಾಡಲು ಪರಿಗಣಿಸಲಾಗಿದೆ.

ಚಾಲ್ತಿ ಖಾತೆಗಳಲ್ಲಿ ಇರಿಸಲಾಗಿರುವ ನಿಧಿಗೆ ಬ್ಯಾಂಕ್‌ಗಳು ಯಾವುದೇ ಬಡ್ಡಿ ನೀಡದಿರುವುದರಿಂದ ಏಳು ದಿನಗಳ ಒಳಗಾಗಿ ಚಾಲ್ತಿ ಖಾತೆಯಿಂದ ಎಸ್‌ಬಿಎಂನಲ್ಲಿನ ಉಳಿತಾಯ ಖಾತೆಗೆ ನಿಧಿ ವರ್ಗಾಯಿಸುವುದನ್ನು ವಿಧಿಸುವುದಕ್ಕೆ ಕಾರಣ/ ಸಮರ್ಥನೆಯನ್ನು ಸ್ಪಷ್ಟವಾಗಿ ದಾಖಲಿಸಬೇಕಿತ್ತು. ಇದನ್ನು ಮಾಡಲೂ ಇಲ್ಲ ಅಥವಾ ಲೆಕ್ಕಪರಿಶೋಧನೆಗೆ ಕಾರಣಗಳನ್ನು ವಿವರಿಸಲೂ ಇಲ್ಲ.

ಬ್ಯಾಂಕ್ ಖಾತೆಗಳ ತಃಖ್ತೆಗಳನ್ನು ಪರಿಶೀಲಿಸಿದಾಗ ಇವು ಪ್ರಕಟಗೊಂಡವು.

- ಒಡಂಬಡಿಕೆಯಲ್ಲಿ ವಿಧಿಸಿರುವಂತೆ ಶುಲ್ಕ ಸಂಗ್ರಹಿಸಿರುವುದನ್ನು ಜಮೆ ಮಾಡಲು ಆಕ್ಸಿಸ್ ಬ್ಯಾಂಕ್ ಕಾಲಮಿತಿಗೆ ಬದ್ಧವಾಗಿರಲಿಲ್ಲ
- ಪ್ರತಿನಿತ್ಯದ ವಸೂಲಾತಿಗಳನ್ನು ವಿಶ್ವವಿದ್ಯಾಲಯದ ಖಾತೆಗೆ ವರ್ಗಾಯಿಸಲು ತೆಗೆದುಕೊಂಡ ಸಮಯವು 2017, 2018 ಹಾಗೂ 2019ರಲ್ಲಿ ಸರಾಸರಿಯಾಗಿ ಅನುಕ್ರಮವಾಗಿ 12, 15 ಮತ್ತು 9 ದಿನಗಳು.
- ಆಕ್ಸಿಸ್ ಬ್ಯಾಂಕ್ ನಿಂದ ಮೊತ್ತವನ್ನು ಚಾಲ್ತಿ ಖಾತೆಗೆ ಜಮೆ ಮಾಡುವುದರಲ್ಲಿನ ವಿಳಂಬ ಹಾಗೂ ಮುಂದುವರೆದು ಮೂರು ವರ್ಷಗಳ ಅವಧಿಯಲ್ಲಿ ಏಳು ದಿನಗಳನ್ನು ವಿಧಿಸಿರುವುದು ವಿಶ್ವವಿದ್ಯಾಲಯದ ಎಸ್‌ಬಿಎಮ್ ಖಾತೆಗೆ ವರ್ಗಾಯಿಸುವಲ್ಲಿನ ಅಧಿಕ ವಿಳಂಬದಿಂದಾಗಿ ₹17.43 ಲಕ್ಷ ಬಡ್ಡಿ ನಷ್ಟದಲ್ಲಿ ಪರಿಣಮಿಸಿತು.

ಈ ರೀತಿ, ಬೆಂಗಳೂರು ವಿಶ್ವವಿದ್ಯಾಲಯವು ಖಾಸಗಿ ಬ್ಯಾಂಕ್‌ನಲ್ಲಿ ಚಾಲ್ತಿಖಾತೆ ತೆರೆಯುವ ಕ್ರಮದಿಂದ ಮತ್ತು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಅನುಕೂಲವಿಲ್ಲದ ಕರಾರು ಮತ್ತು ನಿಬಂಧನೆಗಳನ್ನು ಸೇರಿಸಿರುವುದು ವಿಶ್ವವಿದ್ಯಾಲಯಕ್ಕೆ ₹55.22 ಲಕ್ಷದಷ್ಟು ಬಡ್ಡಿ ನಷ್ಟದಲ್ಲಿ ಪರಿಣಮಿಸಿತು.

ರಾಜ್ಯ ಸರ್ಕಾರವು ಲೆಕ್ಕ ಪರಿಶೋಧನೆಯ ಅಭಿಪ್ರಾಯಗಳನ್ನು ಅಂಗೀಕರಿಸಿತು ಹಾಗೂ ಅದು ಕೆಳಕಂಡಂತೆ ತಿಳಿಸಿತು (ಮಾರ್ಚ್ 2021).

(i) ಕನಿಷ್ಠ ಬಿಡ್ಡರ್ ಆದ ಎಸ್‌ಬಿಐ ಟೆಂಡರ್ ಪ್ರಕ್ರಿಯೆಯಲ್ಲಿ ಉತ್ತೀರ್ಣವಾದರೂ ಆನ್‌ಲೈನ್ ಸೇವೆಯಲ್ಲಿನ ಶುಲ್ಕ ಸಂಗ್ರಹದಿಂದ ವಸೂಲು ಮಾಡಲು ಬೆಂಗಳೂರು ವಿಶ್ವವಿದ್ಯಾಲಯ ಕಾನೂನಾತ್ಮಕವಾಗಿ ನಿರ್ಬಂಧಕ್ಕೊಳಗಾಗಿತ್ತು. ಆಕ್ಸಿಸ್ ಬ್ಯಾಂಕ್ ಬಿಡ್ಡರ್ ಅರ್ಹತೆಯನ್ನು ಪಡೆಯದಿದ್ದರೂ ವಸೂಲಾತಿಗೆ ನಿರ್ಣಯಿಸಿದರು. ವಿಶ್ವವಿದ್ಯಾಲಯದ ಈ ನಿಲುವು ಕೆಟಿಟಿಪಿ ಕಾಯಿದೆ 1999 ಹಾಗೂ ಅದರಡಿಯಲ್ಲಿನ ನಿಯಮಗಳನ್ನು ಗುರುತರವಾಗಿ ಉಲ್ಲಂಘನೆ ಮಾಡಿದೆ ಹಾಗೂ ವಿಶ್ವವಿದ್ಯಾಲಯದ ವಿರುದ್ಧ ದಂಡಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸುತ್ತದೆ.

(ii) ಬೆಂಗಳೂರು ವಿಶ್ವವಿದ್ಯಾಲಯವು ಆಕ್ಸಿಸ್ ಬ್ಯಾಂಕ್‌ನಲ್ಲಿ ಉನ್ನತ ಶಿಕ್ಷಣ ಇಲಾಖೆಯ ಸ್ಪಷ್ಟ ಮಂಜೂರಾತಿ ಇಲ್ಲದೇ ಚಾಲ್ತಿಖಾತೆ ತೆರೆಯಿತು.

(iii) ಬೆಂಗಳೂರು ವಿಶ್ವವಿದ್ಯಾಲಯವು ಆನ್‌ಲೈನ್‌ನಲ್ಲಿ ಸಂಗ್ರಹಿಸಲಾದ ಶುಲ್ಕಗಳನ್ನು ಎರಡು ದಿನಗಳೊಳಗಾಗಿ ವರ್ಗಾವಣೆ ಮಾಡುವ ಫೆಬ್ರವರಿ 2020ರ ನಿರ್ದೇಶನಗಳನ್ನು ಪಾಲಿಸಿರಲಿಲ್ಲ.

(iv) ನಷ್ಟ, ನಷ್ಟದ ಪುನರ್ಭರ್ತಿ, ಆಕ್ಸಿಸ್ ಬ್ಯಾಂಕ್‌ನಲ್ಲಿ ಚಾಲ್ತಿ ಖಾತೆಯನ್ನು ಮುಕ್ತಾಯಗೊಳಿಸುವ, ಎಸ್‌ಬಿಐನಲ್ಲಿ ಸ್ವೀಪ್ ಇನ್ ಸ್ವೀಪ್ ಔಟ್ ಖಾತೆಯನ್ನು ತೆರೆಯುವ ಹಾಗೂ ಎರಡು ದಿನಗಳೊಳಗಾಗಿ ಸ್ವೀಕೃತಿಗಳನ್ನು ವರ್ಗಾಯಿಸುವುದನ್ನು ಖಚಿತಪಡಿಸಿಕೊಳ್ಳಬೇಕು ಹಾಗೂ 30 ದಿನಗಳೊಳಗಾಗಿ ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಜವಾಬ್ದಾರರಾದ ಅಧಿಕಾರಿಗಳು/ ಸಿಬ್ಬಂದಿಗಳ ವಿರುದ್ಧ ದಂಡಾರ್ಹ ನಡವಳಿಗಳನ್ನು ನಡೆಸಲು ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳಿಗೆ ನಿರ್ದೇಶಿಸಿದೆ.

***ರಾಜ್ಯ ಸರ್ಕಾರವು ತನ್ನ ಸೂಚನೆಗಳಿಗೆ ಅನುಸರಣಾ ಕ್ರಮಗಳನ್ನು ಮತ್ತು ಜವಾಬ್ದಾರಿಯನ್ನು ನಿಗದಿಪಡಿಸುವುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ರಾಜ್ಯ ಸರ್ಕಾರವು ನೀಡಿರುವ ಮಾರ್ಗದರ್ಶಿಸೂತ್ರಗಳ ಹಾಗೂ ಕಾರ್ಯವಿಧಾನಗಳ ಅನುಪಾಲನೆಯನ್ನು ಖಚಿತಪಡಿಸದವರ ವಿರುದ್ಧ ಕ್ರಮಗಳನ್ನು ಕೈಗೊಳ್ಳಬೇಕು.***

### *2.1.4 ಲೆಕ್ಕ ಹೊಂದಾಣಿಕೆ ಇಲ್ಲದಿರುವುದು*

ವಂಚನೆ ಕಂಡುಹಿಡಿಯುವುದು, ತಪ್ಪುಗಳನ್ನು ಕಂಡುಹಿಡಿಯುವುದು, ದಂಡಗಳನ್ನು ವಿಧಿಸುವ ಮುನ್ನಡೆಗಳ ವ್ಯವಹಾರಗಳಲ್ಲಿನ ಹಾನಿಸಂಭವವನ್ನು ತಗ್ಗಿಸುವುದು, ಬಡ್ಡಿ ವೆಚ್ಚಗಳು ಇತ್ಯಾದಿಗಳಿಂದ ಪ್ರಮುಖ ನಿಯಂತ್ರಣವಾದ ಹೊಂದಾಣಿಕೆಯು ಸಹಾಯವಾಗಲಿದೆ. ಕಳ್ಳತನ ಅಥವಾ ದುರುಪಯೋಗವಂತಹದನ್ನು ಕೋರುವ ಹಾಗೂ ವಿವರಿಸಲಾಗದ ವ್ಯತ್ಯಾಸಗಳನ್ನು ಹುಡುಕುವುದರಲ್ಲಿ ಸಹಾಯವಾಗಲಿದೆ. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಹೊಂದಾಣಿಕೆ ವ್ಯವಸ್ಥೆ ಇಲ್ಲದಿರುವುದು ರಾಜಸ್ವ ನಷ್ಟದಲ್ಲಿ ಪರಿಣಮಿಸಿರುವುದರಲ್ಲಿ ಈ ಕೆಳಕಂಡಂತೆ ಉದಾಹರಿಸಲಾಗಿದೆ.

- **ಡಿಡಿಗಳ ನಗದು ಹಣಕ್ಕೆ ಪರಿವರ್ತಿಸದಿರುವುದು ₹23.21 ಲಕ್ಷ ಆದಾಯದಲ್ಲಿ ನಷ್ಟವು.**

ಬೆಂಗಳೂರು ವಿಶ್ವವಿದ್ಯಾಲಯವು ಅನೇಕ ಪದವಿಪೂರ್ವ ಸ್ನಾತಕೊತ್ತರ ಹಾಗೂ ಪಿಹೆಚ್ ಡಿ ಶ್ರೇಣಿಗಳನ್ನು ನೀಡುತ್ತದೆ ಹಾಗೂ ನೋಂದಣಿ, ಪ್ರವೇಶ ಪರೀಕ್ಷೆ ಹಾಗೂ ಅಭಿವೃದ್ಧಿ ಶುಲ್ಕಗಳನ್ನು ಸಂಯೋಜಿತ ಕಾಲೇಜುಗಳು ಹಾಗೂ ವಿದ್ಯಾರ್ಥಿಗಳಿಂದ ಡಿ.ಡಿ. ಮೂಲಕವಾಗಿ ಸಂಗ್ರಹಿಸುತ್ತದೆ. ಈ ಡಿ.ಡಿ.ಗಳನ್ನು ಆದಾಯದ ಸಂಗ್ರಹಣೆಗಾಗಿ (ಸಂಗ್ರಹಣಾ ಖಾತೆಗಳಲ್ಲಿ) ಪ್ರತ್ಯೇಕ ಬ್ಯಾಂಕ್ ಖಾತೆಗಳಲ್ಲಿ ಠೇವಣಿ ಇರಿಸಲಾಗುತ್ತದೆ. ಸಂಗ್ರಹಣಾ ಖಾತೆಗಳಲ್ಲಿ ಡಿ.ಡಿ.ಗಳ ರವಾನೆಯನ್ನು ಕಾಲಮಿತಿದೊಳಗೆ ವಿಶ್ವವಿದ್ಯಾಲಯದ ಖಾತೆಗೆ ಜಮೆಯಾಗುವುದನ್ನು ಆರ್ಥಿಕ ಅಧಿಕಾರಿ ಖಚಿತಪಡಿಸಿಕೊಳ್ಳಬೇಕು.

ಬೆಂಗಳೂರು ವಿಶ್ವವಿದ್ಯಾಲಯವು ಒದಗಿಸಿದ 2015–16ರಿಂದ 2018–19ರ ವರೆಗಿನ ಆರ್ಥಿಕ ತಃಖ್ತೆಗಳನ್ನು ಪರಿಶೀಲಿಸಿದಾಗ ಸ್ವೀಕೃತವಾದ ₹23.21 ಲಕ್ಷ ಮೊತ್ತವು ಕಾಲಾವಧಿ ಮೀರಿದ ಡಿ.ಡಿ.ಗಳು, ಸರ್ವರ್ ತೊಂದರೆಗಳು, ದಿನಾಂಕವಿಲ್ಲದಿರುವುದು, ಸಹಿ ಇತ್ಯಾದಿಗಳ ಕಾರಣಗಳಿಂದ ಬ್ಯಾಂಕ್ ಹಿಂದಿರುಗಿಸಿ ಬ್ಯಾಂಕ್‌ಗಳಲ್ಲಿ ಸ್ವೀಕೃತವಾದುದನ್ನು ಸಂಬಂಧಿಸಿದವರಿಗೆ ಊರ್ಜಿತಗೊಳಿಸುವ/ ಮಾರ್ಪಾಡು ಮಾಡುವ ಮತ್ತು ತದನಂತರ ವಸೂಲು ಮಾಡುವ ಸಲಕರಣೆಗಳ ಮೇಲ್ವಿಚಾರಣೆಗಳ ನಿರ್ವಹಣೆಗೆ ದಾಖಲೆಗಳಿರಲಿಲ್ಲವೆಂಬುದನ್ನು ಗಮನಿಸಲಾಯಿತು. ಹೊಂದಾಣಿಕೆ, ವ್ಯವಹಾರಗಳಲ್ಲಿನ ವೈಫಲ್ಯತೆಯನ್ನು ಪತ್ತೆಮಾಡುವ ಹಾಗೂ ತದನಂತರ ವಸೂಲು ಮಾಡುವುದು ಸಾಧ್ಯವಾಗದಿರುವುದು ಮತ್ತು ವಿಶ್ವವಿದ್ಯಾಲಯಕ್ಕೆ ₹23.21 ಲಕ್ಷಗಳನ್ನು ಮರುಪಡೆಯುವಲ್ಲಿನ ವೈಫಲ್ಯದಲ್ಲಿ ಪರಿಣಮಿಸಿತು.

- **ಬ್ಯಾಂಕ್ ತಃಖ್ತೆಗಳಲ್ಲಿ ₹8.66 ಲಕ್ಷ ಡಿ.ಡಿ.ಗಳು / ಸ್ವೀಕೃತಿಗಳನ್ನು ಪತ್ತೆಹಚ್ಚಲಾಗಲಿಲ್ಲ.**

ಬೆಂಗಳೂರು ವಿಶ್ವವಿದ್ಯಾಲಯದ ಆರ್ಥಿಕ ಅಧಿಕಾರಿಯವರ ಹೆಸರಿನಲ್ಲಿ ಸೆಳೆಯಲಾದ ₹8.66 ಲಕ್ಷ ಮೊತ್ತ ಡಿ.ಡಿ.ಗಳನ್ನು ಎರಡು ವಿಭಾಗಗಳಿಗೆ (ದೈಹಿಕ ಶಿಕ್ಷಣ ಮತ್ತು ಸಿಬಿಎಸ್‌ಎಮ್‌ಎಸ್) ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಆಟದ ಮೈದಾನವನ್ನು ಬಳಸಲು ಕ್ಷೇತ್ರ ಶುಲ್ಕ ಮತ್ತು ಪ್ರವೇಶ ಶುಲ್ಕಗಳನ್ನು 2ನೇ ವರ್ಷದ ಎಂಬಿಎ ವಿದ್ಯಾರ್ಥಿಗಳಿಂದ ಪಾವತಿಯಾಗಿರುವುದನ್ನು ಪತ್ತೆ ಹಚ್ಚಲಾಗಲಿಲ್ಲ/ ಬ್ಯಾಂಕ್ ತಃಖ್ತೆಗಳಲ್ಲಿರಲಿಲ್ಲ (**ಅನುಬಂಧ 2.2** ಮತ್ತು **ಅನುಬಂಧ 2.3**). ಈ ಪ್ರಕರಣವು ಡಿ.ಡಿ.ಗಳನ್ನು ಬ್ಯಾಂಕ್‌ಗೆ ಸಲ್ಲಿಸದಿರುವುದು ಅಥವಾ ಕಾಲಾವಧಿ ಮೀರಿದ ಡಿ.ಡಿ.ಗಳಾಗಿರಬಹುದು ಅದಲ್ಲದೇ ಅದು ನಿಧಿಗಳ ಮಾರ್ಗಪಲ್ಲಟ/ದುರ್ಬಳಕೆಯ ಅಪಾಯವನ್ನು ಹೊಂದಿತ್ತು. ನಿಯತಕಾಲಿಕವಾಗಿ ಖಾತೆಗಳ ಹೊಂದಾಣಿಕೆಯ ವೈಫಲ್ಯವು ಆದಾಯವು ವಸೂಲಾಗದೇ ಉಳಿದು ಪತ್ತೆ ಹಚ್ಚಲಾಗದೆ ಇರುವಲ್ಲಿ ಪರಿಣಮಿಸಿರುವುದು ನಿಯಂತ್ರಣ ವ್ಯವಸ್ಥೆ ಇಲ್ಲದಿರುವುದನ್ನು ಸೂಚಿಸುತ್ತದೆ.

***ಇಂತಹ ಲೋಪಗಳು ಮರುಕಳಿಸದಂತೆ ತಡೆಯಲು ಈ ವಿಷಯವನ್ನು ತನಿಖೆ ನಡೆಸಬೇಕು ಹಾಗೂ ತನಿಖೆಯ ಆಧಾರದ ಮೇಲೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಶಿಫಾರಸು ಮಾಡಲಾಗುತ್ತದೆ.***

### *2.1.5 ಕ್ಷೇತ್ರ ಶುಲ್ಕ ಸಂಗ್ರಹದಲ್ಲಿ ₹0.79 ಲಕ್ಷ ಕಡಿಮೆ ವಸೂಲು ಮಾಡಿರುವುದು ಹಾಗೂ ದೈಹಿಕ ಶಿಕ್ಷಣ ವಿಭಾಗದ ಮತ್ತೊಂದರಲ್ಲಿ ₹0.78 ಲಕ್ಷ ರವಾನೆಯು ಸಂದೇಹಾಸ್ಪದವಾಗಿದೆ.*

ಬೆಂಗಳೂರು ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗವು ಶಾಲೆಗಳ/ಕಾಲೇಜುಗಳ ಮತ್ತು ಖಾಸಗಿ ಸಂಸ್ಥೆಗಳಿಗೆ ಕ್ರೀಡೆ/ ಇನ್ನಿತರ ಉದ್ದೇಶಗಳಿಗೆ ಕ್ಷೇತ್ರ ಶುಲ್ಕವನ್ನು ಬಾಡಿಗೆ ಆಧಾರದ ಮೇಲೆ ವಸೂಲು ಮಾಡುತ್ತದೆ. ವಿವಿಧ ಪ್ರವರ್ಗಗಳಿಗೆ ವಿವಿಧ ದರಗಳನ್ನು ನಿಗದಿಪಡಿಸಿದೆ (**ಅನುಬಂಧ 2.4ಎ**) ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಆರ್ಥಿಕ ಅಧಿಕಾರಿಯ ಪರವಾಗಿ ಶುಲ್ಕಗಳನ್ನು ಡಿ.ಡಿ. ಮೂಲಕ ಪಾವತಿಸಬೇಕಿದೆ.

ಸ್ವೀಕೃತಿ ವಹಿಯ ಪರಿಶೀಲನೆಯಲ್ಲಿ ನಿಗದಿತ ದರಗಳಲ್ಲಿ ಕ್ಷೇತ್ರ ಶುಲ್ಕಗಳನ್ನು ಅಳವಡಿಸದಿರುವುದು ₹78,500 ಕಡಿಮೆ ವಸೂಲು ಆಗಿರುವುದು ಮತ್ತು ತತ್ಪರಿಣಾಮವಾಗಿ ವಿಶ್ವವಿದ್ಯಾಲಯಕ್ಕೆ ಆದಾಯದಲ್ಲಿ ನಷ್ಟವಾಗಿರುವುದು ತೋರಿಸಿತು (**ಅನುಬಂಧ 2.4ಬಿ**). ಮುಂದುವರೆದು, ಬೆಂಗಳೂರಿನ ಕರ್ನಾಟಕ ರಾಜ್ಯ ಅಮೆಚ್ಯೂರ್ ಕಬಡ್ಡಿ ಸಂಘದಿಂದ ₹78,200 ಗಳನ್ನು 23 ಜೂನ್ 2015 ರಂದು ವಸೂಲು ಮಾಡಲಾಗಿದೆ ಎಂದು ವಹಿಯಲ್ಲಿ ದಾಖಲಿಸಿದೆ. ಅದಾಗ್ಯೂ ಡಿ.ಡಿ. ಸಂಖ್ಯೆ ಅಥವಾ ರಸೀದಿ ಸಂಖ್ಯೆಯ ವಿವರಗಳನ್ನು ಸೂಚಿಸಿರಲಿಲ್ಲ. ಹಾಗಾಗಿ, ಅದು ಜಮೆಯಾಗಿರುವುದು ಸಂದೇಹಾಸ್ಪದವಾಗಿದೆ.

### *2.1.6 ಎನ್‌ಡಿಸಿ ಬಿಲ್ಲುಗಳ ಅಸಾಮಾನ್ಯ ವಿಳಂಬ ಸಲ್ಲಿಕೆ ₹1.91 ಕೋಟಿ*

ಸಾದಿಲ್ವಾರು ವೆಚ್ಚದ ಕೈಪಿಡಿ 1958, ನಿಯಮ 36ರ ಅಡಿಯಲ್ಲಿ ನಿಯಂತ್ರಣ ಮತ್ತು ಬಟವಾಡೆ ಮಾಡುವ ಅಧಿಕಾರಿಗಳಿಗೆ ಸಂಕ್ಷಿಪ್ತ ಸಾದಿಲ್ವಾರು (ಎಸಿ) ಬಿಲ್ಲುಗಳನ್ನು ತಯಾರಿಸಿ ಹಣವನ್ನು ಸೆಳೆಯುವ ಅಧಿಕಾರವನ್ನು ನೀಡಿದೆ ಹಾಗೂ ತಿಂಗಳ 15ನೇ ದಿನದೊಳಗೆ, ಹಿಂದಿನ ತಿಂಗಳಿಗೆ ಸಂಬಂಧಿಸಿದ ಬಿಲ್ಲುಗಳಿಗೆ ಪಾವತಿಸಿಗಲ್ಲದ ಸವಿವರ ಸಾದಿಲ್ವಾರು (ಎನ್ ಡಿಸಿ) ಬಿಲ್ಲುಗಳನ್ನು (ಅಂತಿಮ ವೆಚ್ಚದ ವೋಚರ್ ಗಳ ಬೆಂಬಲದೊಂದಿಗೆ) ಅಗತ್ಯವಾಗಿ ಮಂಡಿಸಬೇಕು. ಅಗತ್ಯವಾಗಿ ತಕ್ಷಣಕ್ಕೆ ಬಟವಾಡೆ ಮಾಡುವುದನ್ನು ಹೊರತುಪಡಿಸಿ ಖಜಾನೆಯಿಂದ ಯಾವುದೇ ಹಣವನ್ನು ಸೆಳೆಯದಂತೆ ನಿಯಂತ್ರಣಾಧಿಕಾರಿಗಳು ಖಚಿತಪಡಿಸಿಕೊಳ್ಳಬೇಕು. ಮುಂದುವರೆದು ಕರ್ನಾಟಕ ಆರ್ಥಿಕ ಸಂಹಿತೆ 1958, ನಿಯಮ 243 ಯಡಿಯಲ್ಲಿರುವಂತೆ, ನೌಕರನು ಸ್ವೀಕರಿಸುವ ಎಲ್ಲಾ ಮುಂಗಡಗಳನ್ನು ನಿಯಮಗಳು ಪ್ರತಿ ಪ್ರಕರಣಗಳಿಗೆ ಅನ್ವಯಿಸುವಂತೆ ಹೊಂದಾಣಿಕೆಗೆ ಒಳಪಡುತ್ತದೆ. ಮುಂಗಡಗಳನ್ನು ಸೆಳೆದ ತಿಂಗಳ ನಂತರದ ತಿಂಗಳಿನಲ್ಲಿ ಪ್ರತಿ ಮುಂಗಡಗಳನ್ನು ತಿಂಗಳಾಂತ್ಯದಲ್ಲಿ ಹೊಂದಾಣಿಕೆಯಾಗಬೇಕು ಹಾಗೂ ಆದೇಶದಲ್ಲಿಯೇ ಯಾವ ದಿನಾಂಕದೊಳಗಾಗಿ ಹೊಂದಾಣಿಕೆಯಾಗಬೇಕೆಂಬುದನ್ನು ನಿಗದಿಪಡಿಸಿರುವುದಿಲ್ಲ.

ಆದೇಶದಲ್ಲಿ ಯಾವ ದಿನಾಂಕದೊಳಗಾಗಿ ಹೊಂದಾಣಿಕೆ ಮಾಡಬೇಕು ಎನ್ನುವದನ್ನು ನಿಗದಿಪಡಿಸದೇ ಇದ್ದರೆ ಮುಂಗಡಗಳನ್ನು ಸೆಳೆದ ತಿಂಗಳ ನಂತರದ ತಿಂಗಳಿನಲ್ಲಿ ಪ್ರತಿ ಮುಂಗಡಗಳನ್ನು ತಿಂಗಳಾಂತ್ಯದಲ್ಲಿ ಹೊಂದಾಣಿಕೆ ಮಾಡಬೇಕು. ಲೆಕ್ಕ ಪರಿಶೋಧನೆಯಲ್ಲಿನ ಪರಿಶೀಲನೆಯಲ್ಲಿ ಎಸಿ ಬಿಲ್ ವಹಿ, ಎನ್‌ಡಿಸಿ ಬಿಲ್ ವಹಿ ಹಾಗೂ ವೋಚರ್‌ಗಳಿಂದ 111 ಎಸಿ ಬಿಲ್ಲುಗಳ ₹1.92 ಕೋಟಿ ಮೌಲ್ಯಕ್ಕೆ ಎನ್‌ಡಿಸಿ ಬಿಲ್ಲುಗಳನ್ನು ಅಸಮಾನ್ಯ ವಿಳಂಬವಾಗಿ 123 ದಿನಗಳಿಂದ 3,322 ದಿನಗಳ ವ್ಯಾಪ್ತಿಯಲ್ಲಿ ಸಲ್ಲಿಸಲಾಗಿರುವುದನ್ನು ತೋರ್ಪಡಿಸಲಾಗಿದೆ. ಮುಂದುವರೆದು, 26 ಏಪ್ರಿಲ್ 2014 ರಿಂದ 24 ಮೇ 2019ರ ಅವಧಿಯಲ್ಲಿ ₹14.84 ಲಕ್ಷಕ್ಕೆ ಸಂಬಂಧಿಸಿದಂತೆ 27 ಎಸಿ ಬಿಲ್ಲುಗಳಿಗೆ ಎನ್ ಡಿಸಿ ಬಿಲ್ಲುಗಳನ್ನು ಇನ್ನೂ ಸಲ್ಲಿಸಬೇಕೆನ್ನುವುದನ್ನು ಗಮನಿಸಲಾಯಿತು.

ಎಸಿ ಬಿಲ್‌ಗಳಲ್ಲಿ ಸೆಳೆಯಲಾದ ಹಣವು ನೈಜವಾಗಿ ತಕ್ಷಣಕ್ಕೆ ಬಟವಾಡೆಗಾಗಿತ್ತೇ, ಎಸಿ ಬಿಲ್‌ಗಳನ್ನು ಸೆಳೆದ ವ್ಯಕ್ತಿಗಳಿಗೆ ಪ್ರತಿಯಾಗಿ ಯಾವುದಾದರೂ ಮುಂಗಡಗಳು ಹೊಂದಾಣಿಕೆಯಾಗದೇ ಬಾಕಿ ಉಳಿದಿತ್ತೇ, ಹೊಂದಾಣಿಕೆ ಕಾಲಾವಧಿ ಇತ್ಯಾದಿಗಳ ಈ ರೀತಿಯ ಮುಂಗಡ ಪಾವತಿಗಳನ್ನು ಆರ್ಥಿಕ ಅಧಿಕಾರಿಯು ಪಾಲಿಸದೇ, ಎನ್‌ಡಿಸಿ ಬಿಲ್ಲುಗಳು ಗಣನೀಯವಾಗಿ ವಿಳಂಬ ಸಲ್ಲಿಕೆಯಾಗಿರುವುದು ನಿಯಮಗಳ ಉಲ್ಲಂಘನೆಯಲ್ಲದೇ, ಹಣದ ದುರುಪಯೋಗದ ಸಾಧ್ಯತೆಗಳಿರುವುದನ್ನು ಸೂಚಿಸುತ್ತದೆ.

***ಎನ್‌ಡಿಸಿ ಬಿಲ್ಲುಗಳನ್ನು ನಿಗದಿತ ಸಮಯದೊಳಗೆ ಸಲ್ಲಿಸದಿರುವ ಸಂಬಂಧಪಟ್ಟವರ ವಿರುದ್ಧ ಕ್ರಮಗಳನ್ನು ಜರುಗಿಸಬೇಕು ಹಾಗೂ ತಕ್ಷಣವೇ ಬಾಕಿಯಿರುವುದನ್ನು ವಸೂಲು ಮಾಡಲು ಶಿಫಾರಸು ಮಾಡಲಾಗಿದೆ.***

### *2.1.7 ಸ್ವಯಂ ಚೆಕ್‌ಗಳ ಮೂಲಕ ₹20.72 ಲಕ್ಷ ಹಣವನ್ನು ಸೆಳೆದಿರುವುದು*

ಕರ್ನಾಟಕ ಆರ್ಥಿಕ ಸಂಹಿತೆ ನಿಯಮ 3ರ ಪ್ರಕಾರ ಪ್ರತಿಯೊಬ್ಬ ಸರ್ಕಾರಿ ನೌಕರನೂ ತನಗೆ ಸಂಬಂಧಿಸಿದ ಎಲ್ಲಾ ಆರ್ಥಿಕ ವ್ಯವಹಾರಗಳನ್ನು ಅವಲೋಕಿಸಿ ಸರಿಯಾದ ಲೆಕ್ಕಪತ್ರಗಳನ್ನು ನಿರ್ವಹಿಸಬೇಕು. ನೌಕರನು ನಿಖರವಾಗಿ ಹಾಗೂ ತಡವಿಲ್ಲದೆ (ತತ್ ಕ್ಷಣದಲ್ಲಿಯೇ) ಅಂತಹ ಎಲ್ಲಾ ಸಂಬಂಧಿಸಿದ ಲೆಕ್ಕಪತ್ರಗಳನ್ನು ಸರ್ಕಾರವು ನಿಗದಿಪಡಿಸಿರುವ ಮಹಾಲೇಖಪಾಲರಿಗೆ ಅಥವಾ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕೆಂದು ಸಹ ಸೂಚಿಸುತ್ತದೆ.

ಬೆಂಗಳೂರು ವಿಶ್ವವಿದ್ಯಾಲಯದಿಂದ ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜನೀಯರಿಂಗ್ (ಯುವಿಸಿಇ) ಗೆ ವಸತಿ ಇನ್ನಿತರ ವೆಚ್ಚಕ್ಕಾಗಿ ಹಣವನ್ನು ಬಿಡುಗಡೆ ಮಾಡಿರುವುದನ್ನು ಒಂದು ಬ್ಯಾಂಕ್ ಖಾತೆಯಲ್ಲಿ[13] ಠೇವಣಿಯಾಗಿ ಇರಿಸಲಾಯಿತು. ಮೆಸ್ ನಿರ್ವಹಣೆ ಹಾಗೂ ಸ್ವಚ್ಛ ಮಾಡುವ ಉದ್ದೇಶಕ್ಕಾಗಿ ಯುವಿಸಿಇಯ ಕಿರಿಯ ಸಹಾಯಕರಿಂದ ಏಪ್ರಿಲ್ 2018ರಿಂದ ಡಿಸೆಂಬರ್ 2018 ರ ಅವಧಿಯಲ್ಲಿ ಸ್ವಯಂ ಚೆಕ್ ಮೂಲಕ ₹20.72 ಲಕ್ಷ ಸೆಳೆಯಲಾಯಿತು. ಆದಾಗ್ಯು, ಲೆಕ್ಕಪರಿಶೋಧನೆಗೆ ಹಾಜರು ಪಡಿಸಿದ ದಾಖಲೆಗಳಲ್ಲಿ ವೆಚ್ಚ ಮಾಡಿರುವುದಕ್ಕೆ ವೋಚರ್‌ಗಳಾಗಲಿ ಅಥವಾ ಬಿಲ್ಲುಗಳಾಗಲಿ ಲಭ್ಯವಿರಲಿಲ್ಲ. ಹಾಗಾಗಿ, ವೆಚ್ಚದ ಸತ್ಯಾಸತ್ಯತೆಯ ಬಗ್ಗೆ ಖಚಿತಪಡಿಸಿಕೊಳ್ಳಲಾಗಲಿಲ್ಲ.

***ಸಂಹಿತೆಯ ಉಪಬಂಧಗಳ ಅನುಪಾಲನೆಯಲ್ಲಿನ ಲೋಪದ ವಿರುದ್ಧ ಸಂಬಂಧಿಸಿದವರ ಮೇಲೆ ಸೂಕ್ತಕ್ರಮಗಳನ್ನು ಜರುಗಿಸಬೇಕೆಂದು ಶಿಫಾರಸು ಮಾಡಲಾಗಿದೆ.***

ಈ ರೀತಿ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪರಿಣಾಮಕಾರಿಯಾದ ಆಂತರಿಕ ನಿಯಂತ್ರಣ ವ್ಯವಸ್ಥೆ ಇಲ್ಲದಿರುವುದು ಸರ್ಕಾರ ಹಾಗೂ ವಿಶ್ವವಿದ್ಯಾಲಯಗಳೆರಡೂ ನಿಗಧಿಪಡಿಸಿರುವ ಮಾರ್ಗದರ್ಶಿಯ ಸೂತ್ರಗಳ/ ಸೂಚನೆಗಳ ಉಲ್ಲಂಘನೆಯ ಮೂಲಕ ಅಸಮರ್ಪಕ ಆರ್ಥಿಕ ನಿರ್ವಹಣೆಯಲ್ಲಿ ಪರಿಣಮಿಸಿ ಸಿಬ್ಬಂದಿಗಳಿಂದ ₹12.97 ಲಕ್ಷ ದುರುಪಯೋಗ, ನೌಕರನಿಂದ ₹1.28 ಲಕ್ಷ ಕೈಚಳಕದ ತಿರುಚುವುದರಿಂದ ಹಾಗೂ ದುರುಪಯೋಗಕ್ಕೆ ಎಡೆಮಾಡಿತು ಹಾಗೂ ₹87.88 ಲಕ್ಷ ಆದಾಯದಲ್ಲಿ ಬಡ್ಡಿ ನಷ್ಟ, ಡಿ.ಡಿ.ಗಳಿಂದ ವಸೂಲಾಗದಿರುವುದು, ಕ್ಷೇತ್ರ ಬಾಡಿಗೆಯಲ್ಲಿ ಕಡಿಮೆ ಸಂಗ್ರಹ ಇತ್ಯಾದಿಗಳನ್ನು ಪರಿಣಮಿಸಿತು.

***ಲೆಕ್ಕಪರಿಶೋಧನೆಯಲ್ಲಿ ಸೂಚಿಸಿರುವ ವಿಷಯಗಳು ಕೇವಲ ಉದಾಹರಣೆಗಳಾಗಿವೆ ಹಾಗೂ ವ್ಯಾಪಕವಾಗಿರುವುದಿಲ್ಲ. ವಿಶ್ವವಿದ್ಯಾಲಯದಲ್ಲಿ ಅನೇಕ ವಿಧದ ಆರ್ಥಿಕ ಅಕ್ರಮಗಳು ಅಸ್ತಿತ್ವದಲ್ಲಿರುವುದರಿಂದ ರಾಜ್ಯ ಸರ್ಕಾರವು ಸವಿಸ್ತಾರವಾದ ತನಿಖೆ ನಡೆಸಬೇಕು ಹಾಗೂ ಅದರ ಮೇಲೆ ಸೂಕ್ತಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಶಿಫಾರಸು ಮಾಡಲಾಗಿದೆ.***

[13] ಉಳಿತಾಯ ಖಾತೆ ಸಂಖ್ಯೆ 64156935644 ಎಸ್ ಬಿಐಸಿಟಿ ಶಾಖೆ, ಬೆಂಗಳೂರು.

## 2.2 ಎನ್‌ಪಿಎಸ್ ನೌಕರರಿಗೆ ಅಂತಿಮ ಫಲ ನೀಡುವಿಕೆಯಲ್ಲಿನ ನಷ್ಟ

**ಪಿಂಚಣಿ ನಿಧಿ ನಿಯಮ ಹಾಗೂ ಅಭಿವೃದ್ಧಿ ಪ್ರಾಧಿಕಾರದ ನಿಯಮಗಳನ್ನು ರಾಷ್ಟ್ರೀಯ ಪಿಂಚಣಿ ಪದ್ಧತಿಗೆ ಅನುಗುಣವಾಗಿ ಜಾರಿಗೊಳಿಸದಿರುವುದು, ಮೂರು ವಿಶ್ವವಿದ್ಯಾಲಯಗಳಲ್ಲಿ 01 ಏಪ್ರಿಲ್ 2006ರ ನಂತರ ಸೇರಿದ 577 ನೌಕರರಿಗೆ ₹2.83 ಕೋಟಿ ನಷ್ಟದಲ್ಲಿ ಪರಿಣಮಿಸಿತು.**

ಹೊಸ ಅಂಶದಾಯಿ ಪಿಂಚಣಿ ಯೋಜನೆ (ಎನ್‌ಪಿಎಸ್) ಅನ್ನು 01 ಏಪ್ರಿಲ್ 2006ರ ನಂತರ ರಾಜ್ಯ ಸರ್ಕಾರದ ಸೇವೆಗೆ ನೇಮಕಗೊಂಡ ಎಲ್ಲಾ ನೌಕರರಿಗೆ ಕರ್ನಾಟಕ ಸರ್ಕಾರವು (ಮಾರ್ಚ್ 2006) ಕಡ್ಡಾಯವಾಗಿಸಿ ಅಧ್ಯಾದೇಶ ನೀಡಿ ಪ್ರಾರಂಭಿಸಿತು. ಕೇಂದ್ರೀಯ ದಾಖಲು ಪಾಲಕ ಏಜನ್ಸಿ ಹಾಗೂ ಪಿಂಚಣಿ ನಿಧಿ ಕಾರ್ಯ ನಿರ್ವಾಹಕರ ನೇಮಕಾತಿಯವರೆಗೂ ಸೂಕ್ತ ಬಡ್ಡಿ ಪಾವತಿಯೊಂದಿಗೆ ಸರ್ಕಾರದ ನೌಕರರ ವಂತಿಗೆ ಹಾಗೂ ರಾಜ್ಯ ಸರ್ಕಾರದ ವಂತಿಗೆಯನ್ನು ಸರ್ಕಾರಿ ಲೆಕ್ಕಪತ್ರಗಳಲ್ಲಿ ಇರಿಸಲಾಗುತ್ತದೆ. ಪಿಂಚಣಿ ನಿಧಿನಿಯಮ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಪಿಎಫ್‌ಆರ್‌ಡಿಎ) ಸ್ಥಾಪಿಸಿದ ಎನ್‌ಪಿಎಸ್ ಸಂರಚನೆಯ ಸೇವೆಯನ್ನು ಉಪಯೋಗಿಸಲು ರಾಜ್ಯ ಸರ್ಕಾರವು ಜನವರಿ 2010ರಲ್ಲಿ ನಿರ್ಧರಿಸಿತು ಮತ್ತು ತದನುಸಾರವಾಗಿ ಕಾಲಕಾಲಕ್ಕೆ ನೀಡಿದ ಕ್ರಮಬದ್ಧತೆಗಳು, ನಿರ್ದೇಶನಗಳು, ಮಾರ್ಗಸೂಚಿಗಳು ಹಾಗೂ ಪಿಎಫ್‌ಆರ್‌ಡಿಎಯಿಂದ ಅನುಮೋದಿಸಿದ ಪಿಂಚಣಿ ನಿಧಿಯ ದಾಖಲು ಪಾಲನೆ, ಲೆಕ್ಕಪತ್ರ, ಆಡಳಿತ ಮತ್ತು ಗ್ರಾಹಕರ ಸೇವೆಗೆ ಎಂದು ಕೇಂದ್ರೀಯ ದಾಖಲುಪಾಲಕ ಏಜೆನ್ಸಿಯಾಗಿ ನೇಮಿಸಲ್ಪಟ್ಟ ಎನ್‌ಎಸ್‌ಡಿಎಲ್ ಜೊತೆಗೆ ರಾಜ್ಯ ಸರ್ಕಾರ (ಜನವರಿ 2010ರಲ್ಲಿ) ಒಡಂಬಡಿಕೆ ಮಾಡಿಕೊಂಡಿತು.

ರಾಜ್ಯ ಸರ್ಕಾರವು ತನ್ನ ಆಧೀನದಲ್ಲಿರುವ ರಾಜ್ಯ ಸ್ವಾಯತ್ತ ಸಂಸ್ಥೆ/ಮಂಡಳಿ/ನಿಗಮಗಳು/ ಸೊಸೈಟಿ/ವಿಶ್ವವಿದ್ಯಾಲಯಗಳು/ ರಾಜ್ಯ ಅನುದಾನಿತ ಸಂಸ್ಥೆಗಳಿಗೆ 1 ಏಪ್ರಿಲ್ 2006 ರ ನಂತರ ನೇಮಕಗೊಂಡ ನೌಕರರಿಗೆ ಎನ್‌ಪಿಎಸ್‌ಅನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಲು ಹಾಗೂ ಯೋಜನೆಗೆ ಉದ್ಯೋಗದಾತರ ವಂತಿಗೆಯನ್ನು ತಮ್ಮ ಸಂಪನ್ಮೂಲಗಳಿಂದಲೇ ಭರಿಸಬೇಕೆಂದು ಕರ್ನಾಟಕ ಸರ್ಕಾರವು ಸೂಚಿಸಿತು (ಫೆಬ್ರವರಿ 2015). ಆದಾಗ್ಯೂ, ಈ ಸಂಸ್ಥೆಗಳಿಗೆ ಎನ್‌ಪಿಎಸ್‌ಅನ್ನು ಅಳವಡಿಸಿಕೊಳ್ಳಲು ಯಾವುದೇ ಕಾಲಮಿತಿ ನಿಗದಿಪಡಿಸಲಿಲ್ಲ.

ಎನ್‌ಎಸ್‌ಡಿಎಲ್ ನಿಗದಿಗೊಳಿಸಿದಂತೆ ಎನ್‌ಪಿಎಸ್ ಅವಧಿಯಲ್ಲಿ ನೌಕರನ ಖಾತೆಯಲ್ಲಿರುವ ಒಟ್ಟು ವಂತಿಗೆಯನ್ನು ಎಸ್‌ಬಿಐ ಪಿಂಚಣಿ ನಿಧಿ ನಿಯಮಿತ, ಎಲ್‌ಐಸಿ ಪಿಂಚಣಿ ನಿಧಿ ನಿಯಮಿತ ಹಾಗೂ ಯುಟಿಐ ರಿಟೈರ್‌ಮೆಂಟ್ ಸಲ್ಯೂಷನ್ಸ್ ಲಿಮಿಟೆಡ್ ಹೀಗೆ ಮೂರು[14] ಪಿಂಚಣಿ ನಿಧಿ ಕಾರ್ಯನಿರ್ವಾಹಕ ಮಂಡಳಿಗಳಲ್ಲಿ ಹೂಡಿಕೆ ಮಾಡಿ ಹಾಗೂ ಅದರಂತೆ ವಂತಿಗೆ ಖಾತೆಗೆ ಯೂನಿಟ್‌ಗಳನ್ನು ಹಂಚಬೇಕು. ಪಿಂಚಣಿ ನಿಧಿ ಕಾರ್ಯನಿರ್ವಾಹಕವು ಪಿಎಫ್‌ಆರ್‌ಡಿಎ ಹೂಡಿಕೆ ಮಾರ್ಗಸೂಚಿಗಳಂತೆ ಹಣವನ್ನು ಬೇರೆ ಆರ್ಥಿಕ ಉಪಕರಣಗಳಲ್ಲಿ ಹೂಡಿ ಹಾಗೂ ಪ್ರತಿದಿನದ ಕಡೆಯಲ್ಲಿ ನೆಟ್ ಅಸೆಟ್ ವ್ಯಾಲು (ಎನ್‌ಎವಿ)[15] ಯನ್ನು ಘೋಷಿಸಬೇಕು. ಈ ರೀತಿ ಎನ್‌ಎವಿಯ ಲೆಕ್ಕಪತ್ರದಂತೆ ವಂತಿಗೆ ಖಾತೆಗಳಲ್ಲಿ ಯೂನಿಟ್‌ಗಳನ್ನು ಜಮೆ ಮಾಡಬೇಕು. ಯೂನಿಟ್‌ಗಳನ್ನು ಎನ್‌ಎವಿಯಿಂದ ಗುಣಿಸಿ ಬರುವುದನ್ನು ಪ್ರಸ್ತುತ ಹೂಡಿಕೆ ಬೆಲೆ ಎಂದು ಪರಿಗಣಿಸಬೇಕು.

[14] ಎಸ್‌ಬಿಐ ಪಿಂಚಣಿ ನಿಧಿಗಳು ಖಾಸಗಿ ಸೀಮಿತ, ಎಲ್‌ಐಸಿ ಪಿಂಚಣಿ ನಿಧಿ ಸೀಮಿತ ಮತ್ತು ಯುಟಿಐ ನಿವೃತ್ತಿ ಪರಿಹಾರಗಳ ಲಿಮಿಟೆಡ್.

[15] ಎನ್‌ಎವಿ ನಿಧಿಯ ಪೋರ್ಟ್‌ಫೋಲಿಯೊದಲ್ಲಿ (ಅದರ ಸ್ವತ್ತುಗಳು) ಎಲ್ಲಾ ಸೆಕ್ಯೂರಿಟಿಗಳು ಮತ್ತು ನಗದುಗಳ ಮೌಲ್ಯವನ್ನು ಸೇರಿಸುವ ಮೂಲಕ, ನಿಧಿಯ ಹೊಣೆಗಾರಿಕೆಗಳನ್ನು ಕಳೆಯುವುದರ ಮೂಲಕ ಮತ್ತು ಆ ಸಂಖ್ಯೆಯನ್ನು ಫಂಡ್ ವಿತರಿಸಿದ ಯೂನಿಟ್‌ಗಳ ಸಂಖ್ಯೆಯಿಂದ ಭಾಗಿಸುವ ಮೂಲಕ ಇದನ್ನು ಲೆಕ್ಕ ಹಾಕಲಾಗುತ್ತದೆ.

ಏಳು ವಿಶ್ವವಿದ್ಯಾಲಯಗಳನ್ನು[16] ಮಾರ್ಚ್ 2019ರವರೆಗೆ 2019–20ರಲ್ಲಿ ಲೆಕ್ಕಪರಿಶೋಧನೆಗೆ ಆಯ್ಕೆ ಮಾಡಲಾಯಿತು. ದಾಖಲೆಗಳ ಪರಿಶೀಲನೆಗಳಲ್ಲಿ ಎನ್‌ಪಿಎಸ್ ಜಾರಿಗೊಳಿಸುವುದರಲ್ಲಿ ಈ ಕೆಳಕಂಡಂತೆ ತೋರಿಸಿತು.

i. ಸಕ್ರಮ ನೌಕರರಿಲ್ಲದ ಕರ್ನಾಟಕ ಜಾನಪದ ವಿಶ್ವವಿದ್ಯಾಲಯವನ್ನು ಹೊರತುಪಡಿಸಿ ಉಳಿದ ಎಲ್ಲಾ ವಿಶ್ವವಿದ್ಯಾಲಯಗಳು ಎನ್‌ಪಿಎಸ್‌ಅನ್ನು ಅಳವಡಿಸಿಕೊಂಡಿತ್ತು ಹಾಗೂ ನೌಕರರಿಗೆ ವಿಸ್ತರಿಸಿತ್ತು.

ii. ಏಳು ವಿಶ್ವವಿದ್ಯಾಲಯಗಳ ಪೈಕಿ ಕೇವಲ ನಾಲ್ಕು ವಿಶ್ವವಿದ್ಯಾಲಯಗಳು ಮಾತ್ರ ಎನ್‌ಎಸ್‌ಡಿಎಲ್ ಜೊತೆ ನೋಂದಾಯಿಸಿತ್ತು. ಲೆಕ್ಕಪರಿಶೋಧನೆಯಲ್ಲಿ ತಿಳಿಸಿದ ನಂತರ ಆಗಸ್ಟ್ 2020ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ನೋಂದಾಯಿಸಿಕೊಂಡಿತು. ಮಂಗಳೂರು ಹಾಗೂ ಕರ್ನಾಟಕ ಜಾನಪದ ವಿಶ್ವವಿದ್ಯಾಲಯಗಳು ಇನ್ನೂ ನೋಂದಾಯಿಸಿಕೊಳ್ಳಬೇಕಾಗಿತ್ತು.

iii. ಸಂಸ್ಥೆಗಳಿಗೆ ಕಾಲಮಿತಿಯಿಲ್ಲದಿರುವಿಕೆಯಿಂದ ಅಗತ್ಯವಾದ ಸರ್ಕಾರದ ಸೂಚನೆಗಳನ್ನು ನೆರವೇರಿಸಲಿಲ್ಲ. ಆಗಸ್ಟ್ 2016ರಿಂದ ಡಿಸೆಂಬರ್ 2019ರ ನಡುವೆ ವಿಶ್ವವಿದ್ಯಾಲಯಗಳು ನೋಂದಾಯಿಸಿಕೊಂಡವು. ವಿಶ್ವವಿದ್ಯಾಲಯಗಳು ತಡವಾಗಿ ನೋಂದಾಯಿಸಿಕೊಂಡಿರುವುದು ನೌಕರರಿಗೆ ಅಂತಿಮ ಫಲದ ಮೊತ್ತದಲ್ಲಿ ನಷ್ಟ ಉಂಟಾಗುವ ಸಾಧ್ಯತೆ ಇದೆ.

iv. ಮಂಗಳೂರು ವಿಶ್ವವಿದ್ಯಾಲಯ ಹಾಗೂ ಬೆಂಗಳೂರು ವಿಶ್ವವಿದ್ಯಾಲಯ (2009 ಮತ್ತು 2016 ಅನುಕ್ರಮವಾಗಿ) ವಂತಿಗೆಗಳನ್ನು (ನೌಕರನ ಹಾಗೂ ಉದ್ಯೋಗದಾತನ ವಂತಿಗೆ) ನ್ಯೂಗ್ರೂಪ್ ಸೂಪರ್ ಆನ್ಯುಎಷನ್ ಕ್ಯಾಷ್ ಅಕ್ಯುಮುಲೇಷನ್ ಪ್ಲಾನ್[17] ನಲ್ಲಿ ಭಾರತೀಯ ಲೈಫ್ ಇನ್ಸೂರೆನ್ಸ್‌ನಲ್ಲಿ ಹೂಡಿತು[18]. ಸರ್ಕಾರದ ಸೂಚನೆಗಳು ಬರುವುದಕ್ಕೆ ಮುನ್ನವೇ ಮಂಗಳೂರು ವಿಶ್ವವಿದ್ಯಾಲಯವು ನೌಕರರಿಂದ ಕಟಾವು ಪ್ರಾರಂಭಿಸಿದ್ದರೂ ಅದು ಎನ್‌ಎಸ್‌ಡಿಎಲ್‌ಯೊಂದಿಗೆ ಫೆಬ್ರವರಿ 2015ರ ನಂತರ ನೋಂದಾಯಿಸಿಕೊಳ್ಳಲಿಲ್ಲ ಹಾಗೂ ಎಲ್‌ಐಸಿಯಲ್ಲಿ ತನ್ನ ಹೂಡಿಕೆಯನ್ನು ಮುಂದುವರೆಸಿತು. ಎನ್‌ಪಿಎಸ್ ಯೋಜನೆಯಡಿಯಲ್ಲಿ ವಿಶ್ವವಿದ್ಯಾಲಯಗಳು ನೀಡಿದ ತಃಖ್ತೆಯಂತೆ ಮಾರ್ಚ್ 2020ರ ಅಂತ್ಯಕ್ಕೆ ಲೆಕ್ಕಹಾಕಿದಂತೆ ಎನ್‌ಎಸ್‌ಡಿಎಲ್ ನಲ್ಲಿ ಹೂಡಿಕೆಗಿಂತ ಕಡಿಮೆ ಲಾಭವನ್ನು ಗಳಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಮಂಗಳೂರು ಹಾಗೂ ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿನ ನೌಕರರ ₹64.13 ಲಕ್ಷ ಹಾಗೂ ₹189.57 ಲಕ್ಷ ನಷ್ಟವನ್ನು[19] ಅನುಕ್ರಮವಾಗಿ **ಅನುಬಂಧ 2.5** ಹಾಗೂ **ಅನುಬಂಧ 2.6** ರಲ್ಲಿ ವಿವರಿಸಲಾಗಿದೆ.

---

16 ಬೆಂಗಳೂರು ವಿಶ್ವವಿದ್ಯಾಲಯ, ದಾವಣಗೆರೆ ವಿಶ್ವವಿದ್ಯಾಲಯ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಮತ್ತು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ.

17 ಇದು ಉದ್ಯೋಗದಾತರಿಗೆ, ತಮ್ಮ ಉದ್ಯೋಗಿಗಳಿಗೆ ನಿರ್ದಿಷ್ಟಪಡಿಸಿದ ಕೊಡುಗೆಯನ್ನು ಹೊಂದಲು ಸೂಕ್ತವಾದ ಲಿಂಕ್ ಮಾಡದ ಭಾಗವಹಿಸಿದ ಗ್ರೂಪ್ ಸೂಪರ್ ಆನ್ಯುಎಷನ್ ಕ್ಯಾಷ್ ಅಕ್ಯುಮುಲೇಶನ್ ಯೋಜನೆಯಾಗಿದೆ. ಪಾಲಿಸಿ ಖಾತೆ ಮೌಲ್ಯದಲ್ಲಿ ಈ ಕೆಳಗಿನ ಬಡ್ಡಿದರಗಳನ್ನು ಒದಗಿಸಲಾಗುತ್ತದೆ. (1) ಕನಿಷ್ಠ ದರ: ಸಂಪೂರ್ಣ ಪಾಲಿಸಿ ಅವಧಿಯಲ್ಲಿ ವಾರ್ಷಿಕ ಶೇಕಡಾ 0.5. (2) ಹೆಚ್ಚುವರಿ ಬಡ್ಡಿದರ: ಪ್ರತಿ ಹಣಕಾಸು ತ್ರೈಮಾಸಿಕದ ಆರಂಭದಲ್ಲಿ ನಿಗಮದಿಂದ ಘೋಷಿಸಲ್ಪಡುವ ಶೂನ್ಯೇತರ ಧನಾತ್ಮಕ ಬಡ್ಡಿದರ (3) ಉಳಿದ ಸೇರ್ಪಡೆ: ಐದನೇ ನೀತಿ ವಾರ್ಷಿಕೋತ್ಸವದಿಂದ ಪ್ರತಿ ಪಾಲಿಸಿ ವರ್ಷದ ಕೊನೆಯಲ್ಲಿ ನಿಗಮದಿಂದ ಘೋಷಿಸಲ್ಪಡುವ ಶೂನ್ಯೇತರ ಧನಾತ್ಮಕ ಬಡ್ಡಿದರ.

18 ಪಾಲಿಸಿ ಸಂಖ್ಯೆ ಎನ್‌ಜಿಎಸ್‌ಸಿಎ 508000192 (ಮಂಗಳೂರು) ಮತ್ತು ಎನ್‌ಜಿಎಸ್‌ಸಿಎ 501005587 (ಬೆಂಗಳೂರು).

19 ನಷ್ಟವು, ಹೂಡಿಕೆಯ ಒಟ್ಟು ಮೌಲ್ಯದ (ಖರೀದಿಸಬಹುದಾದ ಒಟ್ಟು ಯೂನಿಟ್‌ಗಳ ಸಂಖ್ಯೆಯನ್ನು ಮಾರ್ಚ್ 31, 2020ರ ವೇಳೆಗೆ ಮೂರು ನಿಧಿಗಳ ಸರಾಸರಿ ಎನ್ ಎವಿ ಯಿಂದ ಗುಣಿಸಲ್ಪಡುತ್ತದೆ) ಮತ್ತು ವಿಶ್ವವಿದ್ಯಾಲಯಗಳು ಮಾಡಿದ ಒಟ್ಟು ಹೂಡಿಕೆ ಮತ್ತು ಭಾರತದ ಎಲ್‌ಐಸಿಯಿಂದ ಗಳಿಸಿದ ಬಡ್ಡಿ, ಇವೆರಡರ ಅಂತರ.

v. ರಾಣಿಚೆನ್ನಮ್ಮ ವಿಶ್ವವಿದ್ಯಾಲಯವು ನೀಡಿರುವ ಮಾಹಿತಿಯಂತೆ ಫೆಬ್ರವರಿ 2015ರಿಂದ ಸೆಪ್ಟೆಂಬರ್ 2016ರ ವರೆಗಿನ ಅವಧಿಯಲ್ಲಿ ನೌಕರರ ಹಾಗೂ ಉದ್ಯೋಗದಾತರ ವಂತಿಗೆಯ ಹಣ ₹2.40 ಕೋಟಿ ಹೂಡಿಕೆ ಮಾಡಿರಲಿಲ್ಲ. ಹಿಂದಿನ ವಂತಿಗೆಯೊಂದಿಗೆ ಅಕ್ಟೋಬರ್ 2016 ರಲ್ಲಿ ಎನ್‌ಎಸ್‌ಡಿಎಲ್‌ನಲ್ಲಿ ಹೂಡಿಕೆ ಮಾಡುವಲ್ಲಿನ ವಿಳಂಬವು **ಅನುಬಂಧ 2.7** ರಲ್ಲಿ ವಿವರಿಸಿರುವಂತೆ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ನೌಕರರಿಗೆ ₹29.62 ಲಕ್ಷ ನಷ್ಟದಲ್ಲಿ ಪರಿಣಮಿಸಿತು.

vi. ಮಾಸಿಕ ಕಡಿತಗಳು, ಹೂಡಿಕೆ ಹಾಗೂ ಹೂಡಿಕೆಯಿಂದ ಗಳಿಸಿದ ಲಾಭಗಳ ವಿವರಗಳು ಉಳಿದ ವಿಶ್ವವಿದ್ಯಾಲಯಗಳಿಂದ ನಿರೀಕ್ಷಿಸಲಾಗಿದೆ ಹಾಗೂ ನಷ್ಟದ ಪರಿಮಾಣವನ್ನು ತಿಳಿಸಲಾಗಲಿಲ್ಲ.

ಈ ರೀತಿ ಎರಡು ವಿಶ್ವವಿದ್ಯಾಲಯಗಳು ಮಾಸಿಕ ಕಡಿತಗಳನ್ನು ರಾಜ್ಯ ಸರ್ಕಾರದ ಸೂಚನೆಗಳನ್ನು ಉಲ್ಲಂಘಿಸಿ, ಎಲ್‌ಐಸಿಯಲ್ಲಿ ಹೂಡಿಕೆ ಮಾಡಿರುವುದು ಹಾಗೂ ಒಂದು ವಿಶ್ವವಿದ್ಯಾಲಯವು ವಂತಿಗೆಯನ್ನು ಎನ್‌ಎಸ್‌ಡಿಎಲ್‌ಗೆ ವರ್ಗಾವಣೆ ಮಾಡದೆ ವಿಳಂಬವಾಗಿ ಹೂಡಿಕೆಯ ಪರಿಣಾಮದಿಂದ 577 ವಿಶ್ವವಿದ್ಯಾಲಯದ ನೌಕರರಿಗೆ (138 ಮಂಗಳೂರು ವಿವಿ, 221 ಬೆಂಗಳೂರು ವಿವಿ ಹಾಗೂ 218 ರಾಣಿ ಚೆನ್ನಮ್ಮ ವಿವಿ) ₹283.32 ಲಕ್ಷ ನಷ್ಟ ಉಂಟಾಯಿತು. ನಿವೃತ್ತಿ ನಂತರ ಎನ್‌ಪಿಎಸ್ ವಂತಿಗೆದಾರರಿಗೆ ಆರ್ಥಿಕ ಭದ್ರತೆ ಹಾಗೂ ಸ್ಥಿರತೆಯನ್ನು ದುರ್ಬಲಗೊಳಿಸುವ ಸಂಭವ ಹೆಚ್ಚಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯವು ದಿನಾಂಕ 01.04.2006ರ ನಂತರ ನೇಮಕಗೊಂಡ ನೌಕರರಿಗೆ ಎನ್‌ಪಿಎಸ್‌ಅನ್ನು ಅಳವಡಿಸುವುದಾಗಿ ಸೂಕ್ತಕ್ರಮ ಕೈಗೊಳ್ಳುವುದಾಗಿ ಸರ್ಕಾರವು ತಿಳಿಸಿತು (ಜನವರಿ 2021) ಹಾಗೂ ಪಿಎಫ್‌ಆರ್‌ಡಿಎ ಹಂಚಿಕೆಯಂತೆ, ಹಣ ತೆಗೆಯುವ ಮತ್ತು ಬಟವಾಡೆ ಅಧಿಕಾರಿ, ಖಜಾನೆ ನಿರ್ದೇಶನಾಲಯದ ಲೆಕ್ಕಪತ್ರದ ನೋಂದಣಿ ಸಂಖ್ಯೆಯನ್ನು ವಿಶ್ವವಿದ್ಯಾಲಯವು ಸ್ವೀಕರಿಸಿತು. ಮುಂದುವರೆದು, ಬೆಂಗಳೂರು ವಿಶ್ವವಿದ್ಯಾಲಯಕ್ಕೆ ತಕ್ಷಣವೇ ಎನ್‌ಪಿಎಸ್ ಸಂರಚನೆಯಡಿಯಲ್ಲಿ ಎಲ್‌ಐಸಿಯಲ್ಲಿ ಹೂಡಿಕೆಯಾಗಿರುವ ಪೂರ್ವಾರ್ಜಿತ ಹಾಗೂ ಮಾಸಿಕ ವಂತಿಗೆ ಕಡಿತಗಳನ್ನು ಹಿಂತೆಗೆಯಲು ಮತ್ತು ದಿನಾಂಕ 01.04.2006ರ ನಂತರ ನೇಮಕಗೊಂಡ ಎಲ್ಲಾ ನೌಕರರಿಗೆ ಎನ್‌ಪಿಎಸ್‌ನ್ನು ಅಳವಡಿಸಬೇಕೆಂದು ಕಠಿಣ ಸೂಚನೆಗಳನ್ನು ನೀಡಲಾಗಿದೆ ಎಂದು ರಾಜ್ಯ ಸರ್ಕಾರವು ತಿಳಿಸಿತು.

ಮಂಗಳೂರು ವಿಶ್ವವಿದ್ಯಾಲಯವು ಯಾವುದೇ ಉತ್ತರ ನೀಡಿರುವುದಿಲ್ಲ. ಆದಾಗ್ಯು, ನೆಟ್ ಅಸೆಟ್ ವ್ಯಾಲ್ಯು 2016ರಿಂದ 2019ರ ಅವಧಿಯಲ್ಲಿ 2020ರನ್ನು ಹೊರತುಪಡಿಸಿ ಎಲ್‌ಐಸಿಯಲ್ಲಿನ ಮೌಲ್ಯವು ತುಲನಾತ್ಮಕವಾಗಿ ಎಸ್‌ಬಿಐ ಹಾಗೂ ಯುಟಿಐಗಿಂತ ಅಧಿಕವಾಗಿತ್ತೆಂದು ವಿಶ್ವವಿದ್ಯಾಲಯವು ಉತ್ತರಿಸಿತು (ಜನೆವರಿ 2021) ಹಾಗೂ 2020ರಲ್ಲಿ ಮಾತ್ರ ನೌಕರರಿಗೆ ಹೂಡಿಕೆಯಿಂದ ನಷ್ಟ ಉಂಟಾಯಿತು. ಎಲ್‌ಐಸಿಯಿಂದ ಪಡೆದ ಲಾಭಾಂಶಗಳು ಎನ್‌ಎವಿ ಪ್ರಕಾರವಿರಲಿಲ್ಲವಾದುದರಿಂದ ಉತ್ತರವು ಸರಿಯಿರುವುದಿಲ್ಲ. ಅಲ್ಲದೆ, ಹೂಡಿಕೆಗಳು ಸರ್ಕಾರದ ನಿರ್ದೇಶನಗಳಿಗೆ ವಿರುದ್ಧವಾಗಿದ್ದವು.

***ಪಿಎಫ್‌ಆರ್‌ಡಿಎ ಹಂಚಿಕೆಯಂತೆ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ತಕ್ಷಣವೇ ಎನ್‌ಎಸ್‌ಡಿಎಲ್ ಜೊತೆ ನೋಂದಾಯಿಸಿಕೊಳ್ಳಬೇಕು ಹಾಗೂ ಎಲ್ಲಾ ನೌಕರರಿಗೆ ಎನ್‌ಪಿಎಸ್ ಅಳವಡಿಸಕೊಳ್ಳಬೇಕೆಂಬುದನ್ನು ರಾಜ್ಯ ಸರ್ಕಾರವು ಖಚಿತಪಡಿಸಿಕೊಳ್ಳಬೇಕು. ವಿಳಂಬ ಅನುಪಾಲನೆಯಿಂದ ನೌಕರರಿಗೆ ಅಂತಿಮ ಫಲ ನೀಡುವಲ್ಲಿನ ನಷ್ಟಕ್ಕೆ ಸಂಸ್ಥೆಗಳ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳಬೇಕು.***

## ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

### 2.3 ಸರ್ಕಾರದ ರಾಜಸ್ವವನ್ನು ಜಮೆ ಮಾಡದಿರುವುದರಿಂದ ನಷ್ಟ ಹಾಗು ದುರುಪಯೋಗ

**ಸಹಾಯಕ ನಿರ್ದೇಶಕರ ಕಛೇರಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಚನ್ನಪಟ್ಟಣದಲ್ಲಿ, ನಗದು ಸ್ವೀಕೃತಿಗಳನ್ನು ಸರ್ಕಾರದ ಖಾತೆಗೆ ಜಮೆ ಮಾಡದಿರುವುದರಿಂದ ಹಾಗು ದಾಖಲೆಗಳಲ್ಲಿ ಕೈಚಳಕ ಮಾಡಿರುವುದರಿಂದ, ಸರ್ಕಾರದ ರಾಜಸ್ವದ ದುರುಪಯೋಗವಾಗುವಲ್ಲಿ ಹಾಗು ನಷ್ಟವಾಗುವಲ್ಲಿ ಪರಿಣಮಿಸಿತು–₹1.38 ಲಕ್ಷ.**

ಕರ್ನಾಟಕ ಆರ್ಥಿಕ ಸಂಹಿತೆ 1958(ಕೆಎಫ್‌ಸಿ) ಅನುಚ್ಛೇದ 4(ಎ) ಅಧ್ಯಾಯ 2, ಸಾಮಾನ್ಯ ನೀತಿ ಹಾಗು ನಿಯಮಗಳ ಅಡಿಯಲ್ಲಿ, ಕರ್ನಾಟಕ ರಾಜ್ಯ ಸರ್ಕಾರವು, ಯಾವುದೇ ಸರ್ಕಾರಿ ನೌಕರನು ತನ್ನ ಅಧಿಕಾರದ ವ್ಯಾಪ್ತಿಯಲ್ಲಿ ಮಾಡಿರುವ ಎಲ್ಲಾ ವಹಿವಾಟುಗಳನ್ನು ಲೆಕ್ಕಕ್ಕೆ ತರಬೇಕೆಂದು ಹಾಗೂ ಸ್ವೀಕರಿಸಿರುವ ಎಲ್ಲಾ ಹಣಗಳನ್ನು ಅನಗತ್ಯ ವಿಳಂಬ ಮಾಡದೆ ಎರಡು ದಿನಗಳ ಒಳಗೆ ಸರ್ಕಾರದ ಖಜಾನೆಯಲ್ಲಿ ಸೂಕ್ತ ಖಾತೆಗೆ ಜಮೆ ಮಾಡಿ ಸಾಮಾನ್ಯ ಖಜಾನೆಯ ಶಿಲ್ಕಿನ ಭಾಗವನ್ನಾಗಿ ಮಾಡಬೇಕೆಂದು ನಿಗದಿಪಡಿಸುತ್ತದೆ.

ಪ್ರತಿಯೊಬ್ಬ ಸರ್ಕಾರಿ ಅಧಿಕಾರಿಯು ಸರ್ಕಾರದ ಪರವಾಗಿ ಹಣ ಪಡೆದರೆ, ಪಾವತಿದಾರನಿಗೆ ರಶೀದಿಯನ್ನು ನೀಡಬೇಕೆಂದು ಕೆಎಫ್ ಸಿಯ ಅನುಚ್ಛೇದ ಆರು ನಿರ್ದೇಶಿಸುತ್ತದೆ ಹಾಗು ಅನುಚ್ಛೇದ 34ರ ಪ್ರಕಾರ ಪ್ರತಿ ಇಲಾಖೆಯ ನಿಯಂತ್ರಣ ಅಧಿಕಾರಿಯು, ತಮ್ಮ ಕೆಳಗಿನ ಸಿಬ್ಬಂದಿಗಳು ಸ್ವೀಕರಿಸಿರುವ ಹಣವನ್ನು ಖಜಾನೆಗೆ ಪಾವತಿ ಮಾಡಿರುವುದರ ಬಗ್ಗೆ ವ್ಯವಸ್ಥಿತವಾಗಿ ಲೆಕ್ಕಗಳನ್ನು ಹಾಗು ಸಲ್ಲಿಕೆಗಳನ್ನು ಪಡೆಯಬೇಕು ಮತ್ತು ಪ್ರತಿ ತಿಂಗಳಿನ ಒಟ್ಟು ಜಮೆಯ ಮೊತ್ತವನ್ನು ಕ್ರೋಢೀಕರಿಸಿ ಆಯವ್ಯಯದ ಅಂದಾಜು ಪತ್ರದಲ್ಲಿರುವ ಲೆಕ್ಕ ಶೀರ್ಷಿಕೆಗಳಂತೆ ವರ್ಗೀಕರಿಸಿ ವಹಿಯಲ್ಲಿ ತೋರಿಸಬೇಕು.

ಜಮೆಯ ಚಲನ್ನನ್ನು ಭರ್ತಿ ಮಾಡಿ ಇಲಾಖೆಯ ಮುಖ್ಯಸ್ಥರಿಂದ ಸಹಿಮಾಡಲಾಗಿದ್ದು ನಿಗದಿತ ಬ್ಯಾಂಕು ಮೊಹರನ್ನು ಚಲನಿನ ಮೇಲೆ ಲಗತ್ತಿಸಿದ ನಂತರ ಸರ್ಕಾರದ ಖಾತೆಗೆ ಹಣದ ಸ್ವೀಕೃತಿಯನ್ನು ಖಜಾನೆಯು ಖಚಿತಪಡಿಸಿಕೊಳ್ಳಬೇಕು. ಜಮೆಯಾದ ಮೊತ್ತಗಳನ್ನು, ಇಲಾಖಾವಾರು ಜಮೆಯ ವಿವರಗಳನ್ನು ತೋರಿಸುವ ಕರ್ನಾಟಕ ಖಜಾನೆ ಸಂಹಿತೆಯ (ಕೆಟಿಸಿ) ಫಾರ್ಮ ಸಂಖ್ಯೆ 25 ರಲ್ಲಿ ಪ್ರತಿಬಿಂಬಿಸಲಾಗುತ್ತದೆ ಹಾಗು ಈ ಮೊತ್ತಗಳನ್ನು ಸಂಬಂಧಿತ ಇಲಾಖೆಯ ಜಮೆಯ ವಹಿಯಲ್ಲಿರುವ ನಮೂದುಗಳೊಂದಿಗೆ ಸರಿಹೊಂದಿಸಬೇಕಾಗುತ್ತದೆ.

***ಸಹಾಯಕ ನಿರ್ದೇಶಕರು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಚನ್ನಪಟ್ಟಣ, ರಾಮನಗರ ಜಿಲ್ಲೆ, ಇವರ ಕಛೇರಿಯ 2015–16 ರಿಂದ 2019–20ರ ಅವಧಿಯ ದಾಖಲೆಗಳ ಲೆಕ್ಕ ಪರಿಶೋಧನೆಯು( ಡಿಸೆಂಬರ್ 2020/ಜನವರಿ 2021) ಪರೀಕ್ಷಾ ತನಿಖೆ ನಡೆಸಿದ 72 ಪ್ರಕರಣಗಳ ಪೈಕಿ 10 ಪ್ರಕರಣಗಳಲ್ಲಿ, ವೀರ್ಯ(ಸಿಮೆನ ಸ್ಟ್ರಾ)ದ[20] ಪೂರೈಕೆಗೆ ಹಾಗು ಇತರೆ ಕೋಳಿ ಸಾಕಾಣಿಕೆ ಶುಲ್ಕಗಳಿಗೆ, ₹1,38,470 ರಷ್ಟು ಮೊತ್ತವನ್ನು ಸೇವಾ ಶುಲ್ಕವನ್ನಾಗಿ ಸಂಗ್ರಹಿಸಲಾಗಿತ್ತೆಂದು ತೋರಿಸಿತು.. ನಗದು ಸ್ವೀಕೃತಿಗಳನ್ನು ನಿಗದಿತ ಬ್ಯಾಂಕಿಗೆ[21] ಜಮೆ ಮಾಡಲು ಬಳಸಿದ ಚಲನ್ನುಗಳನ್ನು, ಕಛೇರಿಯ ಜಮೆಯ ವಹಿಯಲ್ಲಿ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಯ ಅಡಿಯಲ್ಲಿ ನಮೂದಿಸಲಾಗಿತ್ತು. ಆದರೆ ಅನುಬಂಧ 2.8 ರಲ್ಲಿ ತೋರಿರುವಂತೆ ಚಲನ್ನುಗಳಲ್ಲಿ ಸೂಚಿಸಿರುವ ಸಂಗ್ರಹಿತ ಮೊತ್ತಗಳ ಜಮೆಯನ್ನು, ಉಪ ಖಜಾನೆಯ ಕೆಟಿಸಿ–25 ರಲ್ಲಿ ನಿರ್ವಹಿಸುವ ಜಮೆಗಳ ಪಟ್ಟಿಯಲ್ಲಿ ಪತ್ತೆಮಾಡಲಾಗಲಿಲ್ಲ.***

---

[20] ಸೆಮೆನ ಸ್ಟ್ರಾ, ಜಾನುವಾರುಗಳಲ್ಲಿ/ಪಶುಗಳಲ್ಲಿ ಕೃತಕ ಗರ್ಭಧಾರಣೆ ಮಾಡುವಾಗ ಉಪಯೋಗಿಸುವ ವಿಧಾನ

[21] ಭಾರತೀಯ ಸ್ಟೇಟ್ ಬ್ಯಾಂಕು, ಬಿ.ಎಮ್ ರಸ್ತೆ, ಚನ್ನಪಟ್ಟಣ

*ಜಮೆಗಳ 10 ಪ್ರಕರಣಗಳಿಗೆ ಸಂಬಂಧಪಟ್ಟಂತೆ, ಉಪ–ಖಜಾನೆ,ಚನ್ನಪಟ್ಟಣ, ರಾಮನಗರ ಜಿಲ್ಲೆ ಮತ್ತು ನಿಗದಿತ ಬ್ಯಾಂಕು, ಅಂದರೆ ಭಾರತೀಯ ಸ್ಟೇಟ್ ಬ್ಯಾಂಕ್, ಚನ್ನಪಟ್ಟಣ, ರವರಿಂದ ಜಮೆಯ ದೃಢೀಕರಣ ಕೋರಲಾಯಿತು(ಜನವರಿ 2021). ಪತ್ರದಲ್ಲಿ ಸೂಚಿಸಿದ ಜಮೆಯಾದ ಮೊತ್ತಗಳನ್ನು, ಉಪಖಜಾನೆಯಲ್ಲಿ ಕೆಟಿಸಿ 25ರಲ್ಲಿ ನಿರ್ವಹಿಸಿದ ಜಮೆಗಳ ಪಟ್ಟಿಯಲ್ಲಿ ಪತ್ತೆ ಮಾಡಲಾಗಲಿಲ್ಲವೆಂದು ಉಪ–ಖಜಾನೆ, ಚನ್ನಪಟ್ಟಣವು ದೃಢೀಕರಿಸಿತು(ಜನವರಿ 2021). ಭಾರತೀಯ ಸ್ಟೇಟ್ ಬ್ಯಾಂಕ್, ಚನ್ನಪಟ್ಟಣ ಸಹ, ಉಲ್ಲೇಖಿಸಿದ ಎಲ್ಲ ಹತ್ತು ಜಮೆಯ ಪ್ರಕರಣಗಳನ್ನು ಬ್ಯಾಂಕಿನಲ್ಲಿ ಸ್ವೀಕರಿಸಲಾಗಿರಲಿಲ್ಲ ಹಾಗು ಮೊತ್ತಗಳನ್ನು ಜಮೆ ಮಾಡಲು ಉಪಯೋಗಿಸಿದ ಚಲನ್ನುಗಳ ಮೇಲೆ ಲಗತ್ತಿಸಿದ ಮೊಹರು (ಬ್ಯಾಂಕಿನಿಂದ ನಗದು ಸ್ವೀಕೃತಿ, ಶಾಖೆ ಮತ್ತು ದಿನಾಂಕ ಸೂಚಿಸುವ ರಬ್ಬರ್ ಸ್ಟಾಂಪ್) ಬ್ಯಾಂಕಿಗೆ ಸಂಬಂಧಪಟ್ಟಿರಲಿಲ್ಲವೆಂದು ದೃಢೀಕರಣ ನೀಡಿತು. ಉಲ್ಲೇಖಿಸಿದ ಚಲನ್ನುಗಳ ಮೇಲಿರುವ ಮೊದಲಕ್ಷರಗಳ ಸಹಿಯು ಬ್ಯಾಂಕ್ ಶಾಖೆಯ ಯಾವುದೇ ಸಿಬ್ಬಂದಿ/ಅಧಿಕಾರಿಗೆ ಅನ್ವಯವಾಗಿರಲಿಲ್ಲ ಹಾಗೂ ಚಲನ್ನುಗಳಲ್ಲಿ ನಮೂದಿಸಿರುವ ಸಂಖ್ಯೆಗಳು ಜಮೆಗಳಿಗೆ ಸಂಬಂಧಪಟ್ಟಿರಲಿಲ್ಲ.*

*ಸರ್ಕಾರದ ವಹಿವಾಟಿನ ದಾಖಲೆಗಳಲ್ಲಿ ಕೈಚಳಕ ತೋರಿರುವುದು ಹಾಗು ಕಾಲ್ಪನಿಕ ಸಾಧನಗಳನ್ನು ಬಳಸಿರುವುದು, ಸಹಾಯಕ ನಿರ್ದೇಶಕರು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಚನ್ನಪಟ್ಟಣ,ರವರಿಂದಾದ ಗಂಭೀರ ಲೋಪವಾಗಿದೆ. ಮುಂದುವರೆದು, ಸಹಾಯಕ ನಿರ್ದೇಶಕರು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಚನ್ನಪಟ್ಟಣರವರು, ಸಂಹಿತೆಯ ಅನುವುಗಳನುಸಾರ, ಇಲಾಖೆಯು ಸಂಗ್ರಹಿಸಿದ ಎಲ್ಲಾ ಸರ್ಕಾರದ ಸ್ವೀಕೃತಿಗಳು ಸರ್ಕಾರದ ಖಾತೆಗೆ ಜಮೆಯಾಗಿರುವುದನ್ನು ಖಚಿತಪಡಿಸಿಕೊಳಲು ನಗದು ಪುಸ್ತಕದ ನಮೂದುಗಳನ್ನು ಖಜಾನೆಯ ತಃಖ್ತೆಗಳೊಂದಿಗೆ ನಿಯತಕಾಲಿಕವಾಗಿ ಹೊಂದಾಣಿಕೆ ಮಾಡುವುದರಲ್ಲಿ ವಿಫಲರಾಗಿದ್ದರು. ಆದ್ದರಿಂದ, ನಿಗದಿತ ಕಾರ್ಯವಿಧಾನಕ್ಕೆ ಅನುಗುಣವಾಗಿ ನಡೆದುಕೊಳ್ಳದಿರುವುದರ ಜೊತೆಗೆ ಮೋಸದ ಪ್ರವೃತ್ತಿಯು, ಸರ್ಕಾರಕ್ಕೆ ₹1.38 ಲಕ್ಷ ನಷ್ಟವಾಗುವುದರಲ್ಲಿ/ರಾಜಸ್ವರ ದುರುಪಯೋಗವಾಗುವುದರಲ್ಲಿ ಪರಿಣಮಿಸಿತು.*

ಈ ವಿಷಯವನ್ನು ರಾಜ್ಯ ಸರ್ಕಾರದ ಗಮನಕ್ಕೆ ಫೆಬ್ರವರಿ 2021 ರಲ್ಲಿ ತರಲಾಗಿದ್ದು, ಉತ್ತರವನ್ನು ನಿರೀಕ್ಷಿಸಲಾಗಿದೆ.

***ದುರುಪಯೋಗಕ್ಕೆ ಜವಾಬ್ದಾರರಾದವರನ್ನು ಕಂಡುಹಿಡಿಯಲು ಸರ್ಕಾರದಿಂದ ವಿವರವಾದ ತನಿಖೆ ನಡೆಸಬೇಕಾಗಿದೆ ಹಾಗು ಮೊತ್ತವನ್ನು ವಸೂಲು ಮಾಡುವುದಲ್ಲದೆ ತಪ್ಪಿತಸ್ಥ ಸಿಬ್ಬಂದಿಗಳ ವಿರುದ್ಧ ಕ್ರಿಮಿನಲ್ ನಡವಳಿಗಳು/ ಶಿಸ್ತಿನ ಕ್ರಮ ಪ್ರಾರಂಭಿಸಬೇಕಾಗಿದೆ. ಡಿಡಿಓರವರು ನಿಯತಕಾಲಿಕವಾಗಿ ನಗದು ಪುಸ್ತಕದ ನಮೂದುಗಳನ್ನು ಸಂಬಂಧಪಟ್ಟ ದಾಖಲೆಗಳು/ವಹಿಗಳೊಂದಿಗೆ ಹೊಂದಾಣಿಕೆ ಮಾಡಿ ಸರ್ಕಾರದ ಹಣಗಳನ್ನು ವಿಳಂಬವಿಲ್ಲದೆ ಜಮೆ ಆಗುವುದನ್ನು ಖಚಿತಪಡಿಸಿಕೊಳ್ಳಬೇಕು ಹಾಗು ಭವಿಷ್ಯದಲ್ಲಿ ಇಂತಹ ಘಟನೆಗಳು ಸಂಭವಿಸದಂತೆ ತಡೆಯಬೇಕು.***

## ಆಹಾರ,ನಾಗರೀಕ ಸರಬರಾಜು, ಗ್ರಾಹಕರ ವ್ಯವಹಾರಗಳ ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆ

### 2.4 ಅಕ್ಕಿ ಖರೀದಿಯ ಮೇಲೆ ತಪ್ಪಿಸಬಹುದಾಗಿದ್ದ ಬಡ್ಡಿ ಪಾವತಿ

**ಹಣದ ಲಭ್ಯತೆಯಿದ್ದಾಗ್ಯೂ ಛತ್ತೀಸಘಡದ ರಾಜ್ಯ ಆಹಾರ ನಿಗಮಕ್ಕೆ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತವು ಖರೀದಿಸಿದ ಅಕ್ಕಿಗೆ ವಿಳಂಬವಾಗಿ ಪಾವತಿ ಮಾಡಿತು. ಇದು ₹5.25 ಕೋಟಿಯಷ್ಟು ತಪ್ಪಿಸಬಹುದಾಗಿದ್ದ ಅಧಿಕ ಬಡ್ಡಿ ಪಾವತಿಯಲ್ಲಿ ಪರಿಣಮಿಸಿತು.**

ಆಗಸ್ಟ್ 2002 ರಲ್ಲಿ ಭಾರತ ಸರ್ಕಾರವು ಜಾರಿ ಮಾಡಿದ 'ಅಂತ್ಯೋದಯ ಅನ್ನ ಯೋಜನೆ' (ಎಎವೈ)ಯ ಮಾದರಿಯಲ್ಲೇ ಕಡು ಬಡವರಿಗೆ ಮತ್ತು ಬಡತನ ರೇಖೆ (ಬಿಪಿಎಲ್) ಗಿಂತ ಕೆಳಗಿರುವ ಕುಟುಂಬಗಳಿಗೆ

ಕಡಿಮೆ ದರದಲ್ಲಿ ಆಹಾರಧಾನ್ಯಗಳನ್ನು ವಿತರಿಸಲು ಕರ್ನಾಟಕವು ಜುಲೈ 2013 ರಲ್ಲಿ 'ಅನ್ನ ಭಾಗ್ಯ ಯೋಜನೆ'ಯನ್ನು ಪ್ರಾರಂಭಿಸಿತು. ಅನ್ನ ಭಾಗ್ಯ ಯೋಜನೆ ಯಡಿ ಅರ್ಹ ಬಿಪಿಎಲ್ ಮತ್ತು ಎಎವೈ ಕಾರ್ಡುದಾರರಿಗೆ ಪ್ರತಿ ಒಂದು ಸದಸ್ಯ ಕುಟುಂಬಕ್ಕೆ 10 ಕಿಲೋ ಅಕ್ಕಿ, ಎರಡು ಸದಸ್ಯರ ಕುಟುಂಬಕ್ಕೆ 20 ಕಿಲೋ ಅಕ್ಕಿ ಮತ್ತು ಮೂರು ಹಾಗೂ ಅದಕ್ಕಿಂತ ಹೆಚ್ಚು ಸದಸ್ಯರಿರುವ ಕುಟುಂಬಕ್ಕೆ ಗರಿಷ್ಠ 30 ಕಿಲೋ ಅಕ್ಕಿಯನ್ನು ಪ್ರತಿ ಕಿಲೋ ಅಕ್ಕಿಗೆ ₹1 ರಂತೆ ವಿತರಿಸಬೇಕಾಗಿತ್ತು.

ಕರ್ನಾಟಕ ಸರ್ಕಾರವು 'ಅನ್ನ ಭಾಗ್ಯ ಯೋಜನೆ'ಯನ್ನು ಅನುಷ್ಠಾನಗೊಳಿಸಲು ಅವಶ್ಯವಿರುವ ಹೆಚ್ಚುವರಿ ಅಕ್ಕಿಯನ್ನು ಮೆ. ಛತ್ತೀಸಘಡ ರಾಜ್ಯ ಆಹಾರ ನಿಗಮದಿಂದ 1,50,000 ಮೆಟ್ರಿಕ್ ಟನ್‌ಗಳಷ್ಟು ಅಕ್ಕಿಯನ್ನು ಮೂರು ಹಂತಗಳಲ್ಲಿ ಖರೀದಿಸಲು ನಿರ್ಧರಿಸಿತು. ಜುಲೈ 2013ರಲ್ಲಿ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಛತ್ತೀಸಘಡದ ರಾಜ್ಯ ಆಹಾರ ನಿಗಮದೊಂದಿಗೆ ಒಡಂಬಡಿಕೆ ಮಾಡಿಕೊಂಡಿತು. ಒಡಂಬಡಿಕೆಯು ಪ್ರತಿ ಕ್ವಿಂಟಾಲ್‌ಗೆ ₹2290 ಮತ್ತು ರೈಲು ಸಾಗಾಣಿಕೆ ಶುಲ್ಕ ಮತ್ತು ಛತ್ತೀಸಘಡದ ರೈಲು ನಿಲ್ದಾಣದವರೆಗೆ ನಿರ್ವಹಣೆ ಹಾಗೂ ಸಾಗಾಣಿಕೆ ವೆಚ್ಚವನ್ನೂ ಸೇರಿದಂತೆ ಛತ್ತೀಸಘಡದ ರಾಜ್ಯ ಆಹಾರ ನಿಗಮವು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮಕ್ಕೆ ವಿವಿಧ ನಿಯೋಜಿತ ಸ್ಥಳಗಳಿಗೆ ಅಕ್ಕಿಯ ಸರಬರಾಜಿಗೆ ನಿಬಂಧನೆ ಮತ್ತು ಷರತ್ತುಗಳನ್ನು ವಿವರಿಸುತ್ತದೆ. ಅಲ್ಲದೆ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಅಕ್ಕಿಯ ಬೆಲೆ ಹಾಗೂ ಪ್ರತಿ ರೈಲು ರೇಕಿನ ರೈಲು ಸಾಗಾಣಿಕೆ ಶುಲ್ಕವನ್ನು ಮುಂಗಡವಾಗಿ ಪಾವತಿಸಬೇಕು ಎಂದೂ ಸಹ ವಿಧಿಸುತ್ತದೆ. ಕರ್ನಾಟಕ ಸರ್ಕಾರ ಮತ್ತು ಛತ್ತೀಸಘಡ ಸರ್ಕಾರದ ಪರಸ್ಪರ ಒಪ್ಪಿಗೆಯೊಂದಿಗೆ ಮಧ್ಯಸ್ಥಿಕೆದಾರರೊಬ್ಬರ ನೇಮಿಸುವಿಕೆಯನ್ನೂ ಸಹ ಒಡಂಬಡಿಕೆಯಲ್ಲಿ ಸೇರಿಸಲಾಯಿತು. ಯೋಜನೆಯ ಅನುಷ್ಠಾನದಲ್ಲಿ ಅಥವಾ ಒಡಂಬಡಿಕೆಯ ಷರತ್ತುಗಳನ್ನು ಅರ್ಥೈಸಿಕೊಳ್ಳುವಲ್ಲಿ ವಿವಾದಗಳೇನಾದರೂ ಉದ್ಭವಿಸಿದಲ್ಲಿ ಮಧ್ಯಸ್ಥಿಕೆದಾರರ ನಿರ್ಧಾರವೇ ಅಂತಿಮ ಹಾಗೂ ಎರಡೂ ನಿಗಮಗಳೂ ಅದಕ್ಕೆ ಬದ್ಧರಾಗಿರಬೇಕು. ಸಾರ್ವಜನಿಕ ವಿತರಣಾ ವ್ಯವಸ್ಥೆ/ ಅನ್ನ ಭಾಗ್ಯ ಯೋಜನೆಯಡಿಯಲ್ಲಿ ಆಹಾರ ಧಾನ್ಯಗಳ ಖರೀದಿಗಾಗಿ ಕರ್ನಾಟಕ ಸರ್ಕಾರವು ಜೂನ್ 2013 ಹಾಗೂ ಮೇ 2014 ರ ನಡುವೆ ₹1915.76 ಕೋಟಿಗಳನ್ನು ಬಿಡುಗಡೆ ಮಾಡಿತ್ತು.

2012–13 ರಿಂದ 2018–19 ರ ಅವಧಿಯ[22] ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ ಲೆಕ್ಕ ಪರಿಶೋಧನೆಯು, ಜುಲೈ 2013 ಮತ್ತು ಡಿಸೆಂಬರ್ 2013ರ ನಡುವೆ ಛತ್ತೀಸಘಡದ ರಾಜ್ಯ ಆಹಾರ ನಿಗಮವು 15,36,389 ಕ್ವಿಂಟಾಲ್ ಅಕ್ಕಿಯನ್ನು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮಕ್ಕೆ ಸರಬರಾಜು ಮಾಡಿದೆಯೆಂದು ತಿಳಿಯಪಡಿಸಿತು. ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ₹377.68 ಕೋಟಿಗಳಿಗೆದುರಾಗಿ ₹317 ಕೋಟಿಗಳನ್ನು ವಿಳಂಬವಾಗಿ ಮತ್ತು ಉಳಿದ ₹60.68[23] ಕೋಟಿಗಳನ್ನು ಮೂರು ಕಂತುಗಳಲ್ಲಿ ಪಾವತಿಸಿತು. ಫೆಬ್ರವರಿ 2014 ರಲ್ಲಿ ಎರಡನೆಯ ಕಂತನ್ನು ಪಾವತಿಸಿದ ಎಂಟು ತಿಂಗಳುಗಳ ವಿಳಂಬದ ಬಳಿಕ ಮೂರನೆಯ ಹಾಗೂ ಕೊನೆಯ ಕಂತು ₹45.68 ಕೋಟಿಗಳನ್ನು ಪಾವತಿಸಿತು. ವಿಳಂಬವಾಗಿ ಪಾವತಿ ಮಾಡಿದ್ದು ಅಕ್ಕಿಯ ಬೆಲೆಯನ್ನು ಮುಂಗಡವಾಗಿ ಪಾವತಿಸಬೇಕೆಂಬ ಒಡಂಬಡಿಕೆಯ ಷರತ್ತು ಸಂಖ್ಯೆ 10ನ್ನು ಉಲ್ಲಂಘಿಸಿದ್ದರಿಂದ, ವಿಳಂಬವಾಗಿ ಪಾವತಿಸಿದ್ದ ಮೊತ್ತಕ್ಕೆ ಛತ್ತೀಸಘಡದ ರಾಜ್ಯ ಆಹಾರ ನಿಗಮವು ಶೇಕಡ 11 ರಂತೆ ₹6.16 ಕೋಟಿಗಳಷ್ಟು ಬಡ್ಡಿ ಮತ್ತು ನಿರ್ವಹಣಾ ವೆಚ್ಚದ ಬಾಕಿ ₹6.22 ಲಕ್ಷಗಳ ಬೇಡಿಕೆ ಸಲ್ಲಿಸಿತು. ಬಿಪಿಲ್ ಕುಟುಂಬಗಳಿಗೆ ಪ್ರತಿ ಕಿಲೋ ಅಕ್ಕಿಗೆ ₹1 ರಂತೆ 30 ಕಿಲೋ ಅಕ್ಕಿಯನ್ನು ವಿತರಿಸಿದ್ದರಿಂದ ಅಕ್ಕಿಯ ಬೇಡಿಕೆ ತೀವ್ರವಾಗಿ ಹೆಚ್ಚಿದ್ದರಿಂದ ಅಕ್ಕಿಯನ್ನು ವಿವಿಧ ಮೂಲಗಳಿಂದ ಸಂಗ್ರಹಿಸಬೇಕಾಗಿದ್ದು ಹಣದ ಕೊರತೆ

[22] 2012–13 ರಿಂದ 2013–14 ರ ಅವಧಿಯ ಲೆಕ್ಕಪರಿಶೋಧನೆಯನ್ನು ಅಕ್ಟೋಬರ್ 2015 ರಿಂದ ಫೆಬ್ರವರಿ 2016ರ ನಡುವೆ ಹಾಗೂ 2017–18 ರಿಂದ 2018–19 ರ ಅವಧಿಯ ಲೆಕ್ಕಪರಿಶೋಧನೆಯನ್ನು ನವೆಂಬರ್ 2020ರಲ್ಲಿ ನಡೆಸಲಾಯಿತು.

[23] ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ₹5 ಕೋಟಿಯನ್ನು ಜನವರಿ 2014 ರಲ್ಲಿ; ₹10 ಕೋಟಿಯನ್ನು ಫೆಬ್ರವರಿ 2014 ರಲ್ಲಿ ಮತ್ತು ₹45.68 ಕೋಟಿಯನ್ನು ಅಕ್ಟೋಬರ್ 2014 ರಲ್ಲಿ ಪಾವತಿಸಿತು.

ಉಂಟಾಯಿತು ಎಂದು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಹೇಳಿತು (ಅಕ್ಟೋಬರ್ 2014) ಮತ್ತು ಬಾಕಿ ಪಾವತಿಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವಂತೆ ವಿನಂತಿಸಿತು.ಆದಾಗ್ಯೂ, ಸಾಲದ ಹಣವನ್ನು ಬಳಸಿ ರಾಜ್ಯದ ಪಾಲಿನಡಿ ಸಂಗ್ರಹಿಸಿದ ಪ್ರಮಾಣದಿಂದ ಸರಬರಾಜು ಮಾಡಿರುವುದರಿಂದ ಛತ್ತೀಸಘಡದ ರಾಜ್ಯ ಆಹಾರ ನಿಗಮವು ಬಡ್ಡಿಯನ್ನು ಮನ್ನಾ ಮಾಡಲು ತನ್ನ ಅಸಮರ್ಥತೆಯನ್ನು ವ್ಯಕ್ತಪಡಿಸಿತು (ಫೆಬ್ರವರಿ 2015). ವಿಳಂಬವಾಗಿ ಪಾವತಿಸಲಾಗಿದ್ದ ಹಣಕ್ಕೆ ಛತ್ತೀಸಘಡದ ರಾಜ್ಯ ಆಹಾರ ನಿಗಮವು ಬಡ್ಡಿಯ ಬೇಡಿಕೆಯನ್ನು ಮುಂದುವರೆಸಿತು.

ಬಡ್ಡಿ ಮತ್ತು ನಿರ್ವಹಣಾ ವೆಚ್ಚವನ್ನು ಪಾವತಿಸುವ ಬಗ್ಗೆ ಎರಡೂ ನಿಗಮಗಳ ನಡುವೆಯಿದ್ದ ಭಿನ್ನಾಭಿಪ್ರಾಯಗಳನ್ನು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಏಪ್ರಿಲ್ 2015ರಲ್ಲಿ ನಡೆದ 278ನೇ ಮಂಡಳಿ ಸಭೆಯಲ್ಲಿ ಮಂಡಿಸಿತು. ಮಂಡಳಿಯು ಛತ್ತೀಸಘಡದ ರಾಜ್ಯ ಆಹಾರ ನಿಗಮವು ಕೇಳಿರುವ ಹಣದ ಶೇಕಡ 50 ರಷ್ಟನ್ನು ಸಮರ್ಥನೆಯೊಂದಿಗೆ ಪಾವತಿಸುವಂತೆ ನಿರ್ದೇಶಿಸಿತು. ಆದರೆ ಸದರಿ ವಿಷಯದ ಬಗ್ಗೆ ಏಜಿ ಆಡಿಟ್‌ರವರಿಂದ 2015–16ನೇ ಸಾಲಿನ ಲೆಕ್ಕಪರಿಶೋಧನೆಯ ಸಮಯದಲ್ಲಿ ಆಕ್ಷೇಪಣೆ ಇದ್ದ ಕಾರಣ ಮಂಡಳಿಯ ನಿರ್ಧಾರವನ್ನು ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಛತ್ತೀಸಘಡದ ರಾಜ್ಯ ಆಹಾರ ನಿಗಮಕ್ಕೆ ತಿಳಿಸಲಿಲ್ಲ ಮತ್ತು ಆಗಸ್ಟ್ 2017ರಲ್ಲಿ ನಡೆದ ತನ್ನ 290ನೆಯ ಮಂಡಳಿಯ ಸಭೆಯಲ್ಲಿ, ಪಾವತಿಯಲ್ಲಿನ ವಿಳಂಬಕ್ಕೆ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸಲು ನಿರ್ದೇಶಿಸಿತು. ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಮಾಡಿದ ಮನವಿಯ (ಅಕ್ಟೋಬರ್ 2017) ಮೇರೆಗೆ ಕರ್ನಾಟಕ ಸರ್ಕಾರವು ಎರಡೂ ನಿಗಮಗಳ ನಡುವಿನ ವ್ಯಾಜ್ಯವನ್ನು ಬಗೆಹರಿಸಲು ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರನ್ನು ಮಧ್ಯಸ್ಥಿಕೆದಾರರನ್ನಾಗಿ ನೇಮಿಸಿತು (ನವೆಂಬರ್ 2017). ಎರಡೂ ಕಡೆಯ ಅಹವಾಲನ್ನು ಆಲಿಸಿದ ಬಳಿಕ, ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಆದೇಶವನ್ನು ಸ್ವೀಕರಿಸಿದ ಒಂದು ವಾರದೊಳಗೆ ₹5.25[24] ಕೋಟಿಗಳಷ್ಟು ಬಡ್ಡಿಯನ್ನು ಬೇಡಿಕೆಯ ಅಂತಿಮ ಕಂತು ಹಾಗೂ ಪೂರ್ಣ ಬಗೆಹರಿಯುವಂತೆ ಛತ್ತೀಸಘಡದ ರಾಜ್ಯ ಆಹಾರ ನಿಗಮಕ್ಕೆ ಪಾವತಿಸಿ ಅವರಿಂದ ಪಡೆದ ಸ್ವೀಕೃತಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಮಧ್ಯಸ್ಥಿಕೆದಾರರು ಆದೇಶ ನೀಡಿದರು (ಜುಲೈ 2018). ಅದರಂತೆ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು 31 ಜುಲೈ 2018ರಂದು ₹5.25 ಕೋಟಿ ಮೊತ್ತವನ್ನು ಛತ್ತೀಸಘಡದ ರಾಜ್ಯ ಆಹಾರ ನಿಗಮಕ್ಕೆ ಪಾವತಿಸಿತು.

ಅನ್ನ ಭಾಗ್ಯ ಯೋಜನೆಯಡಿ ಅಕ್ಕಿ ಖರೀದಿಗೆ ಕರ್ನಾಟಕ ಸರ್ಕಾರವು ಬಿಡುಗಡೆ ಮಾಡಿದ್ದ ₹1915.76 ಕೋಟಿಯಲ್ಲಿ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಡಿಸೆಂಬರ್ 2013 (ಸರಕಿನ ಕೊನೆಯ ಕಂತು ಲೋಡಿಂಗ್ ಮಾಡಿದ ದಿನಾಂಕ) ರಲ್ಲಿದ್ದಂತೆ ₹895 ಕೋಟಿ ಹಣವನ್ನು ಸ್ವೀಕರಿಸಿತ್ತು. ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಅಕ್ಕಿ, ಗೋಧಿ ಮುಂತಾದವುಗಳ ಖರೀದಿಗೆ ಕಾರ್ಯವಾಹಿ ಬಂಡವಾಳಕ್ಕಾಗಿ ರಾಷ್ಟ್ರೀಕೃತ ಬ್ಯಾಂಕ್ ಒಂದರಿಂದ ₹650[25] ಕೋಟಿಗಳ ಓಪನ್ ಕ್ಯಾಷ್ ಕ್ರೆಡಿಟ್ ಸೌಲಭ್ಯವೂ ಸಹ ಲಭ್ಯವಿತ್ತು. ನಿಧಿಗಳ ಲಭ್ಯತೆಯಿದ್ದಾಗ್ಯೂ[26] ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಹಣ ಪಾವತಿಗೆ ಒಂದರಿಂದ 232 ದಿನಗಳ ವಿಳಂಬ ಮಾಡಿದ್ದು ₹5.25 ಕೋಟಿಗಳ ತಪ್ಪಿಸಬಹುದಾಗಿದ್ದ ಬಡ್ಡಿ ಪಾವತಿಯಲ್ಲಿ ಹಾಗೂ ತತ್ಪರಿಣಾಮವಾದ ನಷ್ಟದಲ್ಲಿ ಪರಿಣಮಿಸಿತು.

---

[24] ಮಧ್ಯಸ್ಥಿಕೆದಾರರ ನಡವಡಿಗಳೊಂದಿಗೆ ಲಗತ್ತಿಸಿದ್ದ ಲೆಕ್ಕಾಚಾರದ ಪಟ್ಟಿಯ ಪ್ರಕಾರ,ರೈಲು ರೇಕು ರವಾನೆಯಾದ ದಿನದಿಂದ 15 ದಿನಗಳಿಗಿಂತ ವಿಳಂಬವಾದ ಪ್ರತಿ ಕಂತಿಗೂ ಬಡ್ಡಿ ಲೆಕ್ಕ ಹಾಕಲಾಗಿತ್ತು

[25] ಇಂಡಿಯನ್ ಬ್ಯಾಂಕ್ ನಿಂದ ₹400 ಕೋಟಿ ಮತ್ತು ₹250 ಕೋಟಿ ಓಪನ್ ಕ್ಯಾಷ್ ಕ್ರೆಡಿಟ್

[26] 1 ಫೆಬ್ರವರಿ 2014 ರಲ್ಲಿ ಓಪನ್ ಕ್ಯಾಷ್ ಕ್ರೆಡಿಟ್ ಖಾತೆ 1ರಲ್ಲಿ ₹221.80 ಕೋಟಿ ಮತ್ತು 15 ಮಾರ್ಚ್ 2014 ರಲ್ಲಿ ಖಾತೆ 2 ರಲ್ಲಿ ₹263.93 ಕೋಟಿ ಮತ್ತು ಕರ್ನಾಟಕ ಸರ್ಕಾರದಿಂದ ಬಿಡುಗಡೆಗಳು

ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಎರಡನೇ ಓಪನ್ ಕ್ಯಾಷ್ ಕ್ರೆಡಿಟ್‌ರಡಿ ₹400 ಕೋಟಿ ನಗದು ಕ್ರೆಡಿಟ್ ಪಡೆದಿತ್ತೆಂದು ಮತ್ತು ತನ್ನ ಬ್ಯಾಂಕ್ ನಗದು ಕ್ರೆಡಿಟ್ ಖಾತೆಯಿಂದ ಫೆಬ್ರವರಿ 2014 ರಲ್ಲಿ ಬಾಕಿ ₹45.68 ಕೋಟಿಯನ್ನು ಪಾವತಿಸಿದ್ದಲ್ಲಿ, ಅಕ್ಟೋಬರ್ 2014 ವರೆಗೂ ಶೇಕಡ 10.25 ರಂತೆ ಬ್ಯಾಂಕ್‌ಗೆ ಬಡ್ಡಿ ಪಾವತಿಸಬೇಕಾಗುತ್ತಿತ್ತು ಎಂದು ರಾಜ್ಯ ಸರ್ಕಾರವು ಒಪ್ಪಿಕೊಂಡಿತು(ಮಾರ್ಚ್ 2021). ಆದರೆ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಶೇಕಡ 11 ರಂತೆ ಛತ್ತೀಸಘಡದ ರಾಜ್ಯ ಆಹಾರ ನಿಗಮಕ್ಕೆ ಬಡ್ಡಿ ಪಾವತಿಸಿದೆ.ನೈಜ ನಷ್ಟವು ಕೇವಲ ಶೇಕಡ 0.75 ರಷ್ಟಿದ್ದು (11–10.25) ₹35.80 ಲಕ್ಷಗಳಾಗುತ್ತವೆ ಎಂದೂ ಸಹ ಹೇಳಿತು. ಉತ್ತರದಲ್ಲಿ ಮಾಡಿರುವ ವಿಶ್ಲೇಷಣೆಯು ವಿಳಂಬಕ್ಕೆ ಕಾರಣ ನೀಡುವುದಿಲ್ಲವಾದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಅಲ್ಲದೆ ಕರ್ನಾಟಕ ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ನಿಗದಿತ ಸಮಯದಲ್ಲಿ ಪಾವತಿಗಳನ್ನು ಮಾಡಲು ಒಡಂಬಡಿಕೆಯ ಷರತ್ತುಗಳಡಿ ಬದ್ಧವಾಗಿತ್ತು. ಮುಂದುವರೆದು, ಮಂಡಳಿ ಸಭೆಯ ನಿರ್ದೇಶನದಂತೆ (ಆಗಸ್ಟ್ 2017) ಪಾವತಿಯ ವಿಳಂಬಕ್ಕೆ ಕಾರಣಗಳನ್ನು ತನಿಖೆ ನಡೆಸಿ ನಷ್ಟಕ್ಕೆ ಹೊಣೆಗಾರರಾದ ವ್ಯಕ್ತಿಗಳ ಮೇಲೆ ಶಿಸ್ತುಕ್ರಮ ಜರುಗಿಸುವ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು ಕೈಗೊಂಡ ಕ್ರಮದ ಕುರಿತು ಉತ್ತರವು ಮೌನವಾಗಿತ್ತು.

***ನಿಗಮವು ಮಂಡಳಿಯ ನಿರ್ದೇಶನಗಳಂತೆ ಪಾವತಿಯ ವಿಳಂಬಕ್ಕೆ ಕಾರಣಗಳನ್ನು ಪತ್ತೆ ಮಾಡಲು ತನಿಖೆ ನಡೆಸಬೇಕು ಮತ್ತು ಅಂತಹ ತನಿಖೆಯ ಆಧಾರದ ಮೇಲೆ ನಷ್ಟಕ್ಕೆ ಹೊಣೆಗಾರರಾದವರ ಮೇಲೆ ಶಿಸ್ತುಕ್ರಮ ಜರುಗಿಸಬೇಕು. ಅಂತಹ ಘಟನೆಗಳು ಪುನರಾವರ್ತನೆಯಾಗದಂತೆ ಒಪ್ಪಂದಗಳ ನಿಯಮ ಹಾಗೂ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಖಾತ್ರಿಪಡಿಸಿಕೊಳ್ಳಬೇಕು.***

## ಕಾರ್ಮಿಕ ಇಲಾಖೆ

## 2.5 ರಾಜ್ಯದಲ್ಲಿ ಕಡಿಮೆ/ ವಸೂಲಾತಿಯಾಗದ ರಾಜಸ್ವ

**ನೋಂದಣಿ/ನವೀಕರಣದ ಪರಿಷ್ಕೃತ ದರಗಳನ್ನು ಆನ್‌ಲೈನ್ ಪೋರ್ಟಲ್‌ನಲ್ಲಿ ವಿಳಂಬವಾಗಿ ಇಂದೀಕರಿಸಿರುವುದರ ಪರಿಣಾಮವಾಗಿ ₹2.38 ಕೋಟಿ ರಾಜಸ್ವ ಕೊರತೆಯುಂಟಾಯಿತು. ಅಂಗಡಿ ಹಾಗೂ ವಾಣಿಜ್ಯ ಸಂಸ್ಥೆಗಳ ನೋಂದಣಿ / ನವೀಕರಣಗೊಳಿಸುವಿಕೆಯಲ್ಲಿನ ಬೃಹತ್ ಬಾಕಿ ಉಳಿದಿರುವುದರ ಪರಿಣಾಮವಾಗಿ ₹37.21 ಕೋಟಿ ವಸೂಲಾಗದ ರಾಜಸ್ವದೊಂದಿಗೆ ಸಂಸ್ಥೆಗಳು ನಿರಂತರವಾಗಿ ಊರ್ಜಿತ ನೋಂದಣಿಗಳಿಲ್ಲದೇ ಕಾರ್ಯನಿರ್ವಹಿಸುತ್ತಿದ್ದವು.**

ಕರ್ನಾಟಕ ಸರ್ಕಾರವು, ಅಂಗಡಿ–ಮುಂಗಟ್ಟುಗಳು ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಣೆ ಮತ್ತು ಉದ್ಯೋಗಗಳಿಗೆ[27] ನಿಯಂತ್ರಣವನ್ನು ಒದಗಿಸುವ ಉದ್ದೇಶದೊಂದಿಗೆ, 1 ಅಕ್ಟೋಬರ್ 1964ರಿಂದ ಜಾರಿಗೆ ಬರುವಂತೆ ಕರ್ನಾಟಕ ಅಂಗಡಿ–ಮುಂಗಟ್ಟುಗಳು ಮತ್ತು ವಾಣಿಜ್ಯ ಸಂಸ್ಥೆಗಳಿಗೆ ಅನ್ವಯಿಸುವಂತೆ ಅಧಿನಿಯಮ 1961ಅನ್ನು ಜಾರಿಗೊಳಿಸಿತು (ಫೆಬ್ರವರಿ/ಮಾರ್ಚ್ 1962). ಈ ಅಧಿನಿಯಮವನ್ನು ಸರಾಗವಾಗಿ ಅನುಷ್ಠಾನಗೊಳಿಸಲು ಕರ್ನಾಟಕ ಸರ್ಕಾರವು ಅಂಗಡಿ ಮುಂಗಟ್ಟುಗಳ ಮತ್ತು ವಾಣಿಜ್ಯ ಸಂಸ್ಥೆಗಳ ನಿಯಮಗಳು 1963 ರನ್ನು ಅಧಿಸೂಚಿಸಿತು (ಡಿಸೆಂಬರ್ 1963). ಈ ಅಧಿನಿಯಮದ ಪರಿಚ್ಛೇದ 4(1) ಮತ್ತು 4(3) ರಂತೆ ಹಾಗೂ ನಿಯಮ 3 ರಂತೆ ಯಾವುದೇ ಸಂಸ್ಥೆಯು ಕಾರ್ಯನಿರ್ವಹಿಸಲು ಸಕ್ರಿಯಗೊಂಡ 30 ದಿನದೊಳಗೆ, ಪ್ರತಿಯೊಂದು ಸಂಸ್ಥೆಯ ಉದ್ಯೋಗಿಯು ನಿಗದಿಪಡಿಸಿದ ನಮೂನೆಯಲ್ಲಿ, ನಿಗದಿಪಡಿಸಿದ ಶುಲ್ಕದೊಂದಿಗೆ ತನ್ನ ಪ್ರದೇಶದ ವ್ಯಾಪ್ತಿಗೆ ಸಂಬಂಧಪಟ್ಟ ನಿರೀಕ್ಷಣಾಧಿಕಾರಿಗೆ ವಿವರಣೆ ಸಲ್ಲಿಸಬೇಕು. ವಿವರಣೆ ಹಾಗೂ ಶುಲ್ಕವನ್ನು ಸ್ವೀಕರಿಸಿದ ನಂತರ

[27] ಉದ್ಯೋಗದ ಷರತ್ತು – ಕೆಲಸದ ಸಮಯ, ವಿಶ್ರಾಂತಿ ಮಧ್ಯಂತರಗಳು, ಅಧಿಕಾವಧಿ, ರಜಾದಿನಗಳು, ಸೇವೆಉ ಕೊನೆಗಾಣಿಕೆ ಇತ್ಯಾದಿ.

ನಿರೀಕ್ಷಣಾಧಿಕಾರಿಯು ವಿವರಣೆಯ ಬಗ್ಗೆ ಸಮಾಧಾನ ಹಾಗೂ ಸತ್ಯಾಸತ್ಯತೆಯೊಂದಿಗೆ ಸಂಸ್ಥೆಗಳ ನೋಂದಣಿ ವಹಿಯಲ್ಲಿ ಸಂಸ್ಥೆಯನ್ನು ನೋಂದಾಯಿಸಿ ಮತ್ತು ನೋಂದಣಿ ಪ್ರಮಾಣ ಪತ್ರವನ್ನು ಉದ್ಯೋಗದಾರನಿಗೆ ನೀಡಬಹುದು. ನೋಂದಣಿ ಪ್ರಮಾಣ ಪತ್ರವು ಐದು ವರ್ಷಗಳವರೆಗೆ ಊರ್ಜಿತವಾಗಿರುತ್ತದೆ. ಮುಂದುವರೆದು, ಪರಿಚ್ಛೇದ 4(4) ಮತ್ತು ನಿಯಮ 3(ಎ) ರಂತೆ ನೋಂದಣಿ ಪ್ರಮಾಣಪತ್ರದ ಚಾಲ್ತಿ ದಿನಾಂಕವು ಕೊನೆಗೊಳ್ಳುವ ಮುನ್ನ ನಿಗದಿಪಡಿಸಿರುವ ಶುಲ್ಕವನ್ನು ಸಂದಾಯಮಾಡಿ ನವೀಕರಿಸಿಗೊಳ್ಳಬೇಕಿದೆ.

ಕಾರ್ಮಿಕ ಇಲಾಖೆಯು, ರಾಜ್ಯದ ಅಂಗಡಿ–ಮುಂಗಟ್ಟುಗಳ ಹಾಗೂ ವಾಣಿಜ್ಯ ಸಂಸ್ಥೆಗಳ ಪರವಾನಗಿಗಳನ್ನು ಆನ್‌ಲೈನ್ ನೋಂದಣಿ / ನವೀಕರಣಗೊಳಿಸುವುದಕ್ಕೆ ಒಂದು ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸಲು ಮೇಃ ಕಿಯೋನಿಕ್ಸ್ ಜೊತೆ ಒಂದು ಒಡಂಬಡಿಕೆ ಮಾಡಿಕೊಂಡಿತು (ಮಾರ್ಚ್ 2012) 'ಇ–ಕಾರ್ಮಿಕ' ಎಂಬ ಒಂದು ಪೋರ್ಟಲ್ ಅನ್ನು ಕಿಯೋನಿಕ್ಸ್ ಸಹಯೋಗದೊಂದಿಗೆ ವಿನ್ಯಾಸಗೊಳಿಸಲಾಯಿತು. ಹಾಗೂ ಪ್ರಸ್ತುತವಾಗಿ ರಾಷ್ಟ್ರೀಯ ಮಾಹಿತಿ ಕೇಂದ್ರದಿಂದ ನಿರ್ವಹಿಸಲ್ಪಡುತ್ತಿವೆ. ರಾಜ್ಯದಲ್ಲಿ ಎಲ್ಲಾ ನೋಂದಣಿ ಮತ್ತು ನವೀಕರಣಗಳನ್ನು ಎಲ್ಲಾ ಪ್ರಕ್ರಿಯೆಗಳನ್ನು ಹಂತಹಂತವಾಗಿ[28] ಜೂನ್ 2012ರಿಂದ ಏಪ್ರಿಲ್ 2015ರ ವರೆಗೆ ಆನ್‌ಲೈನ್ ವೇದಿಕೆಗೆ ವರ್ಗಾಯಿಸಲಾಯಿತು.

ಅರ್ಜಿದಾರರು 'ಇ–ಕಾರ್ಮಿಕದಲ್ಲಿ' ನೋಂದಾಯಿಸಿದ ನಂತರ ನೋಂದಣಿ/ನವೀಕರಣದ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಪ್ರಚಲಿತ ದರದಂತೆ ನಿಗಧಿಪಡಿಸಿರುವ ಶುಲ್ಕವನ್ನು ಪಾವತಿಸಿ, ವಿವರಗಳನ್ನು ಅಪ್‌ಲೋಡ್ ಮಾಡಬೇಕು. 2014ಕ್ಕೂ ಮುನ್ನ ನೋಂದಾಯಿಸಿದ/ ನವೀಕರಿಸಿದ ಅಂಗಡಿ–ಮುಂಗಟ್ಟುಗಳು ಹಾಗೂ ನಾಣಿಜ್ಯ ಸಂಸ್ಥೆಗಳ ವಿವರಗಳಿರುವ ದತ್ತಾಂಶವನ್ನು 2014–15ರ ಅವಧಿಯಲ್ಲಿ ಡಿಜಿಟಲೀಕರಣಗೊಳಿಸಲಾಗಿದೆ ಮತ್ತು ಆನ್‌ಲೈನ್ ಪೋರ್ಟಲ್‌ಗೆ ವರ್ಗಾವಣೆಗೊಂಡಿದೆ.

ಕಾರ್ಮಿಕ ಇಲಾಖೆಯ ಅನುಪಾಲನಾ ಲೆಕ್ಕಪರಿಶೋಧನೆಯನ್ನು ಮಾರ್ಚ್ 2019ರ ಅವಧಿಗೆ ಅಂತ್ಯವಾಗುವಂತೆ ಏಪ್ರಿಲ್ ನಿಂದ ಜೂನ್ 2019ರ ವರೆಗೆ ನಡೆಸಲಾಯಿತು. ಇಲಾಖೆಯ 67 ಘಟಕಗಳ ಪೈಕಿ 16 ಘಟಕಗಳ (ಕಾರ್ಮಿಕ ಇಲಾಖೆ ಆಯುಕ್ತರ ಕಛೇರಿ, ಉಪ ಕಾರ್ಮಿಕ ಆಯುಕ್ತರ ಮೂರು ಕಛೇರಿ, ಸಹಾಯಕ ಕಾರ್ಮಿಕ ಆಯುಕ್ತರ ನಾಲ್ಕು ಕಛೇರಿ ಮತ್ತು ಕಾರ್ಮಿಕ ಅಧಿಕಾರಿಯವರ ಆರು ಕಛೇರಿಗಳು ಹಾಗೂ ಎರಡು ಮಂಡಳಿಗಳು[29]) ಪರೀಕ್ಷಾ–ತನಿಖೆ ನಡೆಸಲಾಯಿತು. ಲೆಕ್ಕ ಪರಿಶೋಧನೆಯಲ್ಲಿ ಅನೇಕ ಕಛೇರಿಗಳಲ್ಲಿ ನೋಂದಣಿ/ ನವೀಕರಣಗಳಿಗೆ ಪರಿಷ್ಕೃತ ದರಗಳನ್ನು ಅನುಷ್ಠಾನಗೊಳಿಸುವುದರಲ್ಲಿ ವಿಳಂಬ ಹಾಗೂ ನೋಂದಣಿಯನ್ನು ನವೀಕರಿಸದೇ ಇರುವ ಪ್ರಕರಣಗಳನ್ನು ಗಮನಿಸಲಾಯಿತು. ಆದ್ದರಿಂದ, ಕಾರ್ಮಿಕ ಆಯುಕ್ತರಿಂದ ರಾಜ್ಯದ ಸಮಗ್ರ ಕ್ರೋಢೀಕೃತ ದತ್ತಾಂಶವನ್ನು ಕೋರಲಾಯಿತು (ಅಕ್ಟೋಬರ್ 2020) ದತ್ತಾಂಶಗಳ ವಿಶ್ಲೇಷಣೆ ಹಾಗೂ ಒದಗಿಸಿದ ಮಾಹಿತಿಯಂತೆ ಈ ಕೆಳಕಂಡಂತೆ ಪ್ರಕಟಪಡಿಸಿದೆ.

[28] ಬೆಂಗಳೂರು ನಗರ – ಜೂನ್ 2012; ಮೈಸೂರು ಮತ್ತು ಬೆಂಗಳೂರು 1 ಮತ್ತು 2 ಅಕ್ಟೋಬರ್ 2012; ಕಲಬುರಗಿ ಮತ್ತು ಬೆಳಗಾವಿ – ಏಪ್ರೀಲ್ 2015.

[29] ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ, ಬೆಂಗಳೂರು.

### *(i) ಅಂಗಡಿ ಮುಂಗಟ್ಟುಗಳು ಹಾಗೂ ವಾಣಿಜ್ಯ ಸಂಸ್ಥೆಗಳ ನೋಂದಣಿ/ ನವೀಕರಣದಲ್ಲಿ ಪರಿಷ್ಕೃತ ದರಗಳನ್ನು ಅನುಷ್ಠಾನಗೊಳಿಸುವುದರಲ್ಲಿ ವಿಳಂಬ*

ನೋಂದಣಿ/ ನವೀಕರಣದ ಪರಿಷ್ಕೃತ ದರಗಳು[30] ಅಧಿಸೂಚಿತವಾದ ದಿನಾಂಕದಿಂದಲೇ ಜಾರಿಯಾಗುವಂತೆ ಕರ್ನಾಟಕ ಸರ್ಕಾರವು ಅಧಿಸೂಚನೆ ನೀಡಿರುತ್ತದೆ (24 ಮಾರ್ಚ್ 2018). ಇಲಾಖೆಯು 2014–15ರಿಂದಲೇ ನೋಂದಣಿ/ ನವೀಕರಣಗಳನ್ನು ಆನ್‌ಲೈನ್ ವೇದಿಕೆಗೆ ವರ್ಗಾಯಿಸಿದ್ದರಿಂದ ಪರಿಷ್ಕೃತ ದರಗಳನ್ನು ತಕ್ಷಣವೇ ಇ–ಕಾರ್ಮಿಕ ಪೋರ್ಟಲ್‌ನಲ್ಲಿ ಇಂದೀಕರಿಸಬೇಕಿತ್ತು. ಇಲಾಖೆಯು ಜನವರಿ 2019ರ ಅವಧಿಯಲ್ಲಿ ಮಾತ್ರವೇ ರಾಷ್ಟ್ರೀಯ ಮಾಹಿತಿ ಕೇಂದ್ರಕ್ಕೆ ಪರಿಷ್ಕೃತ ದರಗಳನ್ನು ನವೀಕರಿಸುವ ಪ್ರಸ್ತಾವನೆಯನ್ನು ಸಲ್ಲಿಸಿರುತ್ತದೆ. ಇಲಾಖೆಯು 32,171 ಅರ್ಜಿಗಳನ್ನು ನೋಂದಣಿಗಾಗಿ ಹಾಗೂ 15,620 ಅರ್ಜಿಗಳನ್ನು ನವೀಕರಣಕ್ಕಾಗಿ ಅಧಿಸೂಚನೆಯ ನಂತರ ಆನ್‌ಲೈನ್ ಪೋರ್ಟಲ್ ಗಳಲ್ಲಿ ದರಗಳನ್ನು ನವೀಕರಿಸುವುದಕ್ಕಾಗಿ ಸ್ವೀಕರಿಸಿದೆ. ಪೋರ್ಟಲ್‌ಗಳಿಗೆ ನೋಂದಣಿ/ನವೀಕರಣಗಳ ಪರಿಷ್ಕೃತ ದರಗಳನ್ನು ವಿಳಂಬವಾಗಿ ಇಂದೀಕರಿಸಿದ ಪರಿಣಾಮ, ಪರಿಷ್ಕೃತ ದರದ ಮುಂಚಿತವಾದ ದರಗಳಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ **ಅನುಬಂಧ 2.9** ರಲ್ಲಿ ವಿವರಿಸಿರುವಂತೆ ₹2.38 ಕೋಟಿ ರಾಜಸ್ವದಲ್ಲಿ ಕೊರತೆಯುಂಟಾಯಿತು.

ಇ–ಕಾರ್ಮಿಕ ಆನ್‌ಲೈನ್ ಅರ್ಜಿಗಳಲ್ಲಿ ಪರಿಷ್ಕೃತ ದರಗಳನ್ನು (ಕಿಯೋನಿಕ್ಸ್) ಸಾಫ್ಟ್‌ವೇರ್ ಅಭಿವೃದ್ಧಿಕಾರರು ಇಂದೀಕರಿಸಬೇಕಿತ್ತು. ಆದರೆ 2017–18ರಲ್ಲಿಯೇ ಕೆಲವು ತಾಂತ್ರಿಕ ಸಮಸ್ಯೆಗಳಿಂದ ತಾಂತ್ರಿಕ ಹಾಗೂ ನಿರ್ವಹಣೆ ಬೆಂಬಲವನ್ನು ಸಂಸ್ಥೆಯು ಹಿಂಪಡೆಯಿತು ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ಮಾರ್ಚ್ 2021). ಆದ್ದರಿಂದ ಇಲಾಖೆಯು ತಕ್ಷಣವೇ ಪರಿಷ್ಕೃತ ದರಗಳನ್ನು ಅನುಷ್ಠಾನಗೊಳಿಸಲಾಗಲಿಲ್ಲ. ಜಾಲತಾಣಗಳ ನಿರ್ವಹಣೆ ಹಾಗೂ ನಿಯಮಿತ ಇಂದೀಕರಣವು ಇಲಾಖೆಯ ಅತ್ಯಂತ ಜರೂರಾದ ಕಾರ್ಯವಾಗಿರುವುದರಿಂದ ಹಾಗೂ ಯಾವುದೇ ರೀತಿಯ ಇಂದೀಕರಣ/ ಮಾರ್ಪಾಡನ್ನು ತಕ್ಷಣವೇ ಮಾಡಬೇಕಿದ್ದು ಸರ್ಕಾರಕ್ಕೆ ರಾಜಸ್ವ ನಷ್ಟವಾಗದಂತೆ ಖಚಿತಪಡಿಸಕೊಳ್ಳಬೇಕಾಗಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

### *(ii) ಅಂಗಡಿ–ಮುಂಗಟ್ಟುಗಳ ಮತ್ತು ವಾಣಿಜ್ಯ ಸಂಸ್ಥೆಗಳ ನೋಂದಣಿ ನವೀಕರಣದಲ್ಲಿ ಬೃಹತ್ತಾಗಿ ಉಳಿದಿರುವ ಬಾಕಿ.*

ಪೋರ್ಟಲ್ ನಲ್ಲಿ ಲಭ್ಯವಿರುವ ದತ್ತಾಂಶಗಳ ಪ್ರಕಾರ 6,95,448 ಸಂಸ್ಥೆಗಳಿಗೆ ಪ್ರತಿಯಾಗಿ 3,64,775 ಅಂಗಡಿ–ಮುಂಗಟ್ಟುಗಳ/ ಸಂಸ್ಥೆಗಳ ನವೀಕರಣವು ನವೆಂಬರ್ 2020ರಲ್ಲಿದ್ದಂತೆ ಬಾಕಿ ಉಳಿದಿವೆ. ಇವುಗಳಲ್ಲಿ 1961ಕ್ಕೂ ಮುನ್ನ ಸ್ಥಾಪಿತಗೊಂಡ ಸಂಸ್ಥೆಗಳ ನವೀಕರಣ ಪ್ರಕರಣಗಳೂ ಸೇರಿವೆ. ವಾರ್ಷಿಕ ರೀತ್ಯಾ ನವೀಕರಣಕ್ಕೆ ಬಾಕಿ ಉಳಿದಿರುವ ಸಂಸ್ಥೆಗಳ ಹಾಗೂ ರಾಜಸ್ವ ವಸೂಲಾತಿಯ ವಿವರಗಳನ್ನು **ಅನುಬಂಧ 2.10**ರಲ್ಲಿ ನೀಡಲಾಗಿದೆ.

---

[30] ನವೀಕರಣಗಳು/ ನೋಂದಣಿ (ಶೂನ್ಯ ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳು – ₹300; 1ರಿಂದ 9 ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳು – ₹600; 10ರಿಂದ 19 ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳು – ₹4000; 20ರಿಂದ 49 ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳು – ₹10000; 50ರಿಂದ 99 ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳು – ₹20000; 100ರಿಂದ 250 ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳು – ₹40000; 251ರಿಂದ 500 ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳು – ₹50000; 501ರಿಂದ 1000 ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳು – ₹70000 ಮತ್ತು ಸಾವಿರಕ್ಕೂ ಅಧಿಕ ಉದ್ಯೋಗಿಗಳನ್ನು ಹೊಂದಿರುವ ಸಂಸ್ಥೆಗಳು – ₹75000.

ಅಧಿನಿಯಮ ವ್ಯವಸ್ಥೆಯಡಿಯಲ್ಲಿ ಯಾವುದೇ ಉಲ್ಲಂಘನೆಯಾದಲ್ಲಿ ಸಂಬಂಧಪಟ್ಟ ಅಪರಾಧಿಗಳನ್ನು ತನಿಖೆಗೆ ಒಳಪಡಿಸಲು ತನಿಖಾಧಿಕಾರಿಗೆ ಪ್ರತ್ಯೇಕವಾಗಿ ನವೀಕರಿಸದಿರುವಂತಹದ್ದನ್ನೂ ಒಳಗೊಂಡಂತೆ ಅಧಿಕಾರ ನೀಡಲಾಗಿದೆ. ಸಂಬಂಧಪಟ್ಟ ಉಪಬಂಧಗಳನ್ನು ಈ ಕೆಳಗಿನಂತೆ ಸೂಚಿಸಲಾಗಿದೆ.

- ಅಧಿನಿಯಮ ಪರಿಚ್ಛೇದ 27 ವಿವರಿಸಿರುವಂತೆ ತನಿಖಾಧಿಕಾರಿಗಳ ಅಧಿಕಾರ ಮತ್ತು ಕರ್ತವ್ಯಗಳೊಂದಿಗೆ ನಿವೇಶನಗಳ ಪರಿವೀಕ್ಷಣೆ ಹಾಗೂ ದಾಖಲೆಗಳ ಪರಿಶೀಲನೆಯನ್ನು ಅಗತ್ಯವಾಗಿ ಪರಿಗಣಿಸಬೇಕೆಂದು ತಿಳಿಸುತ್ತದೆ.
- ಅಧಿನಿಯಮ ಪರಿಚ್ಛೇದ 30 ನಿರೂಪಣೆಯಂತೆ ಪರಿಚ್ಛೇದ 4ರ ಹಾಗೂ ಇತರ ಪರಿಚ್ಛೇದಗಳನ್ನೊಳಗೊಂಡಂತೆ ವ್ಯವಸ್ಥೆಗಳನ್ನು ಯಾರೇ ಅತಿಕ್ರಮಿಸಿದರೂ ಮೊದಲನೆಯ ಅಪರಾಧಕ್ಕೆ ಒಂದು ಸಾವಿರ ರೂಪಾಯಿಗಳು ಹಾಗೂ ಎರಡನೆಯ ಮತ್ತು ತದನಂತರದ ಅಪರಾಧಗಳಿಗೆ ಎರಡು ಸಾವಿರ ರೂಪಾಯಿಗಳವರೆಗೂ ದಂಡ ವಿಧಿಸಬಹುದು.
- ಲಿಖಿತ ರೂಪದಲ್ಲಿರುವ ದೂರುಗಳನ್ನು ಕಾಪಾಡಲು ಒಬ್ಬ ತನಿಖಾಧಿಕಾರಿಯಿಂದ ಜರುಗಿಸದಂತೆ ಪರಿಚ್ಛೇದ 31(1) ನಿಗಧಿಪಡಿಸುತ್ತದೆ.
- ಯಾವುದೇ ಅಪರಾಧದ ಮೇಲೆ ಆರೋಪಿಸಿದ ದಿನಾಂಕದಿಂದ ಆರು ತಿಂಗಳುಗಳ ಒಳಗೆ ದೂರಿನ ಹೊರತು, ಯಾವುದೇ ನ್ಯಾಯಾಲಯವು ಅಧಿನಿಯಮ ಅಥವಾ ನಿಯಮಗಳ ಅಥವಾ ಆದೇಶಗಳಡಿಯಲ್ಲಿ ಅಪರಾಧದ ಅರಿವು ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲವೆಂದು ಪರಿಚ್ಛೇದ 32 ನಿಗಧಿಪಡಿಸುತ್ತದೆ.

ಲೆಕ್ಕಪರಿಶೋಧನಾ ಅವಧಿಯಲ್ಲಿ ಲೆಕ್ಕಪರಿಶೋಧನೆಗೆ ನೀಡಿದ ಮಾಹಿತಿಯಂತೆ ಅಧಿನಿಯಮದಡಿ ಇಲಾಖೆಯು 1,01,028 ತಪಾಸಣೆ ನಡೆಸಿದ್ದಾರೆ ಹಾಗೂ ₹1.38 ಕೋಟಿ ದಂಡ ವಿಧಿಸಿರುತ್ತಾರೆ. ಆದಾಗ್ಯೂ, ಲೆಕ್ಕಪರಿಶೋಧನೆಗೆ ವಿಂಗಡಣೆಗೊಂಡ ಉಲ್ಲಂಘನೆಗಳನ್ನು ಕೂಡಲೇ ಒದಗಿಸಲಿಲ್ಲ. ಈ ಉಲ್ಲಂಘನೆಗಳ ವಿವರಣೆಗಳು ಇಲ್ಲದಿರುವಿಕೆಯು ಪರಿಚ್ಛೇದ 4ರ ಅಡಿಯಲ್ಲಿ ಆದ ಉಲ್ಲಂಘನೆಗಳು ಹಾಗೂ ಅಪರಾಧಗಳನ್ನು ಸಾಕಷ್ಟು ತಪಾಸಣೆ ನಡೆಸಲಾಯಿತೇ ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಖಚಿತಪಡಿಸಿಕೊಳ್ಳಲಾಗಲಿಲ್ಲ.

ಈ ರೀತಿ, ಸಂಸ್ಥೆಗಳು ನೋಂದಾಯಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿ ಕೊನೆಗೊಂಡ ನಂತರವೂ ಸಂಸ್ಥೆಗಳ ನವೀಕರಿಸಲಾಗಲಿಲ್ಲ. ಪ್ರಸಕ್ತ ದರಗಳಲ್ಲಿ ನವೀಕರಣಗೊಳ್ಳದ ಪ್ರಕರಣಗಳ ಪರಿಣಾಮ ₹37.21 ಕೋಟಿ ರಾಜಸ್ವ ವಸೂಲಾತಿಯಾಗದೇ ಬೃಹತ್ ಆಗಿ ಬಾಕಿ ಉಳಿದಿದೆ. ಅಲ್ಲದೇ ಸಂಸ್ಥೆಗಳು ನಿರಂತರವಾಗಿ ಯಾವುದೇ ನೋಂದಣಿ ಪ್ರಮಾಣಪತ್ರವಿಲ್ಲದೇ ಕಾರ್ಯನಿರ್ವಹಿಸುತ್ತಿವೆ.

1961ಕ್ಕೂ ಮುನ್ನ ಸ್ಥಾಪಿತವಾದ ಸಂಸ್ಥೆಗಳ ನವೀಕರಣಗಳ ಹಿಂಬಾಕಿ ಇರುವುದು, ಇಲಾಖೆಯು ಕಾಲಕಾಲಕ್ಕೆ ನೋಂದಣಿಗಳ ನವೀಕರಣಗಳನ್ನು ಖಚಿತಪಡಿಸಿಕೊಳ್ಳುವಲ್ಲಿ ವಿಫಲವಾಗಿರುತ್ತದೆ ಮತ್ತು ಕಾರ್ಯನಿರ್ವಹಿಸದ ಸಂಸ್ಥೆಗಳನ್ನು ಅಗತ್ಯ ತಪಾಸಣೆ ದತ್ತಾಂಶ ಸಂಚಯದಲ್ಲಿ ಸಂಸ್ಕರಿಸಿ, ಪಟ್ಟಿಯಿಂದ ತೆಗೆದುಹಾಕದಿರುವುದನ್ನು ಸೂಚಿಸುತ್ತದೆ.

ರಾಜ್ಯ ಸರ್ಕಾರವು ಈ ರೀತಿ ಉತ್ತರಿಸಿತು (ಮಾರ್ಚ್ 2021).

(i) ಆನ್‌ಲೈನ್ ಪೋರ್ಟಲ್‌ಗಳಲ್ಲಿ ವ್ಯವಸ್ಥೆಗಳಿದ್ದರೂ ಸಹ, ಇ–ಕಾರ್ಮಿಕದ ಅನುಷ್ಠಾನಗೊಳಿಸುವಿಕೆಯ ಹಂತವು ಜಾರಿಯಾದಾಗ ಅನೇಕ ಅಂಗಡಿ–ಮುಂಗಟ್ಟುಗಳು ಹಾಗೂ ವಾಣಿಜ್ಯ ಸಂಸ್ಥೆಗಳು ಸ್ಥಗಿತಗೊಂಡಿತ್ತಾದರೂ, ಉದ್ಯೋಗದಾತರು/ಒಡೆತನ ಹೊಂದಿದವರು ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿರಲಿಲ್ಲ.

(ii) 1961ರ ಕಾಯಿದೆ ಅನ್ವಯ, ಅಂಗಡಿ–ಮುಂಗಟ್ಟುಗಳು ಹಾಗೂ ವಾಣಿಜ್ಯ ಸಂಸ್ಥೆಗಳ ನವೀಕರಣದ ಉದ್ದೇಶಕ್ಕೆಂದೇ ಅಧಿಸೂಚಿತ ಅಧಿಕಾರಿಗಳಾದ ಇಲಾಖೆಯ ಕಾರ್ಮಿಕ ತನಿಖಾಧಿಕಾರಿ/ ಹಿರಿಯ ಕಾರ್ಮಿಕ ತನಿಖಾಧಿಕಾರಿಗಳ ಕೊರತೆ.

(iii) ಕರ್ನಾಟಕ ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸಗಾರರ (ಉದ್ಯೋಗ ನಿಯಂತ್ರಣ ಹಾಗೂ ಸೇವೆಯ ನಿಬಂಧನೆಗಳು) 1996ರ ಕಾಯಿದೆ ಅನ್ವಯ ಇಲಾಖೆಯ ಮೂಲ ಚಟುವಟಿಕೆಗಳು ನಿರ್ವಹಣೆಯಿಂದ ಕಲ್ಯಾಣ ಚಟುವಟಿಕೆಗಳ ಕಡೆಗೆ ತೀವ್ರವಾಗಿ ವರ್ಗಾವಣೆಗೊಂಡಿರುತ್ತದೆ ಮತ್ತು ಕಾರ್ಮಿಕ ತನಿಖಾಧಿಕಾರಿ/ ಹಿರಿಯ ಕಾರ್ಮಿಕ ತನಿಖಾಧಿಕಾರಿಗಳು ಮೇಲಿನ ಕಾಯಿದೆಯಲ್ಲಿ ಸ್ಥಾಪಿತವಾದ ಮಂಡಳಿಗಳಲ್ಲಿ ಬೃಹತ್ ಪ್ರಮಾಣದಲ್ಲಿ ಅಂತಹ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ.

(iv) ಕಾರ್ಮಿಕ ತನಿಖಾಧಿಕಾರಿಗಳು/ ಹಿರಿಯ ಕಾರ್ಮಿಕ ತನಿಖಾಧಿಕಾರಿಗಳಿಗೆ, ಅಂಗಡಿ–ಮುಂಗಟ್ಟುಗಳ ಹಾಗೂ ವಾಣಿಜ್ಯ ಸಂಸ್ಥೆಗಳ ಸ್ಥಿತಿಗತಿಗಳ ಬಗ್ಗೆ ತಪಾಸಣೆ ನಡೆಸುವಂತೆ ಹಾಗೂ ಅಂತಹ ಸಂಸ್ಥೆಗಳ ನೋಂದಣಿ ಮತ್ತು ನವೀಕರಣಗಳನ್ನು ನಡೆಸಲು ಕಟ್ಟುನಿಟ್ಟಾಗಿ ಸೂಚನೆ ನೀಡಲಾಗುತ್ತದೆ.

ಅಧಿಸೂಚಿತ ಅಧಿಕಾರಿಗಳು ಎಲ್ಲಾ ಅಂಗಡಿ ಮುಂಗಟ್ಟುಗಳು ಹಾಗೂ ವಾಣಿಜ್ಯ ಸಂಸ್ಥೆಗಳನ್ನು ಅಗತ್ಯತೆಗೆ ತಕ್ಕಂತೆ ತಪಾಸಣೆ ನಡೆಸುವುದು ಹಾಗೂ ಕಾಲಕಾಲಕ್ಕೆ ನೋಂದಣಿ ಮತ್ತು ನವೀಕರಿಸುವುದನ್ನು ಖಚಿತ ಪಡಿಸಿಕೊಳ್ಳುವುದರೊಂದಿಗೆ ಸರ್ಕಾರಕ್ಕೆ ಯಾವುದೇ ರೀತಿಯ ರಾಜಸ್ವ ನಷ್ಟವಾಗದಂತೆ ಮತ್ತು ನೋಂದಣಿ ಪ್ರಮಾಣಪತ್ರವಿಲ್ಲದೆ ಯಾವುದೇ ಸಂಸ್ಥೆಗಳು ಕಾರ್ಯನಿರ್ವಹಿಸದಂತೆ ನಿರ್ವಹಿಸುವುದು ಕಾರ್ಮಿಕ ಇಲಾಖೆಯ ಪ್ರಾಥಮಿಕ ಜವಾಬ್ದಾರಿಯಾಗಿರುವುದರಿಂದ ಉತ್ತರವು ಸ್ವೀಕಾರಾರ್ಹವಲ್ಲ.

***ನೋಂದಣಿಗಳ ನವೀಕರಣದಲ್ಲಿ ಬೃಹತ್ ಬಾಕಿಯಿರುವಿಕೆಯಿಂದ ರಾಜ್ಯದ ಅಂಗಡಿ–ಮುಂಗಟ್ಟುಗಳು ಮತ್ತು ವಾಣಿಜ್ಯ ಸಂಸ್ಥೆಗಳ ವಾಸ್ತವಿಕ ಅಸ್ತಿತ್ವದ ಸ್ಥಿತಿಯನ್ನು ಖಚಿತಪಡಿಸಿಕೊಳ್ಳಲು ಕೂಡಲೇ ಒಂದು ಸಮೀಕ್ಷೆಯನ್ನು ನಡೆಸಬೇಕು ಹಾಗೂ ಅಂತಹ ಸಂಸ್ಥೆಗಳು ನ್ಯಾಯಸಮ್ಮತವಾದ ನೋಂದಣಿಯೊಂದಿಗೆ ನಿರಂತರವಾಗಿ ಕಾರ್ಯನಿರ್ವಹಿಸಬೇಕೆಂಬುದನ್ನು ಖಚಿತಪಡಿಸಿಕೊಳ್ಳಬೇಕು. ಪೋರ್ಟಲ್‌ನಲ್ಲಿ ಇಂದೀಕರಣದ ವಿಳಂಬದಿಂದ ಉಂಟಾದ ನಷ್ಟಕ್ಕೆ ಇಲಾಖೆಯು ಕ್ರಮಗಳನ್ನು ಕೈಗೊಳ್ಳಬೇಕು.***

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ

### 2.6 ಲಿಕ್ವಿಡೇಟೆಡ್ ಡ್ಯಾಮೇಜಸ್‌ನ್ನು ಕಡಿಮೆ ವಿಧಿಸಿರುವುದು

**ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರಗಳ ಶಿಫಾರಸಿನಂತೆ ಆರೋಗ್ಯ ಇಂಜಿನೀಯರ್ ವಿಭಾಗದ ಮುಖ್ಯ ಇಂಜಿನೀಯರವರಿಂದ ವಿಳಂಬವಾಗಿ ಪೂರ್ಣಗೊಳಿಸಿದ ಕಾಮಗಾರಿಗಳ ಮೇಲೆ ಅತ್ಯಲ್ಪ ದಂಡವನ್ನು ವಿಧಿಸಲಾಗಿದೆ. ಇದು ₹14.63 ಕೋಟಿ ಕಡಿಮೆ ವಿಧಿಸಿರುವುದಲ್ಲದೇ, ಗುತ್ತಿಗೆದಾರರಿಗೆ ಅನುಚಿತ ಲಾಭವನ್ನು ವಿಸ್ತರಿಸುವಲ್ಲಿ ಪರಿಣಮಿಸಿತು.**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಆರೋಗ್ಯ ಇಂಜಿನೀಯರ್ ವಿಭಾಗದ ಮುಖ್ಯ ಇಂಜಿನೀಯರವರು ಆರೋಗ್ಯ ಹಾಗೂ ವೈದ್ಯಕೀಯ ಇಲಾಖೆ ಸಂಸ್ಥೆಗಳ ನಿರ್ಮಾಣ, ರಿಪೇರಿ ಹಾಗೂ ನಿರ್ವಹಣೆಗೆ ಜವಾಬ್ದಾರರಾಗಿರುತ್ತಾರೆ. ತಾಲ್ಲೂಕು ಹಾಗೂ ಜಿಲ್ಲೆಗಳಲ್ಲಿ ಅನೇಕ ಆಸ್ಪತ್ರೆಗಳ ಕಾಮಗಾರಿಗಳಿಗೆ (ನವೆಂಬರ್ 2013 ರಿಂದ ನವೆಂಬರ್ 2017ರ ಅವಧಿಯಲ್ಲಿ) ಮುಖ್ಯ ಇಂಜಿನೀಯರವರು ಟೆಂಡರಗಳನ್ನು ಆಹ್ವಾನಿಸಿದರು.

ಉದ್ದೇಶಿತ ಪೂರ್ಣಗೊಳ್ಳುವ ದಿನಾಂಕದ ನಂತರ ಪೂರ್ಣಗೊಂಡ ದಿನಾಂಕದವರೆಗೆ (ಸಮಗ್ರ ಕಾಮಗಾರಿಗಳು ಅಥವಾ ಮೈಲಿಗಲ್ಲುಗಳು ಗುತ್ತಿಗೆ ದತ್ತಾಂಶದಲ್ಲಿರುವಂತೆ) ದಿನಕ್ಕೆ ಗುತ್ತಿಗೆ ದತ್ತಾಂಶದಲ್ಲಿ

ತಿಳಿಸಿರುವ ದರದಂತೆ ಗುತ್ತಿಗೆದಾರನು ಉದ್ಯೋಗದಾರನಿಗೆ ಲಿಕ್ವಿಡೇಟೆಡ್ ಡ್ಯಾಮೇಜಸ್‌ನ್ನು ಪಾವತಿಸಬೇಕೆಂದು ಕಲಂ 41.1 ಟೆಂಡರ್ ದಸ್ತಾವೇಜು ನಿಗದಿಪಡಿಸುತ್ತದೆ. ಒಟ್ಟು ಲಿಕ್ವಿಡೇಟೆಡ್ ಡ್ಯಾಮೇಜಸ್ ಮೊತ್ತವು ಗುತ್ತಿಗೆ ದತ್ತಾಂಶದಲ್ಲಿ ಗೊತ್ತುಪಡಿಸಿದ ಮೊತ್ತವನ್ನು ಮೀರಬಾರದು. ಲಿಕ್ವಿಡೇಟೆಡ್ ಡ್ಯಾಮೇಜಸ್‌ನ್ನು ಮೈಲಿಗಲ್ಲಿಗೆ ತಕ್ಕಂತೆ ತರಹಾವಾರು ದರಗಳನ್ನು ವಿಧಿಸುವುದಲ್ಲದೆ ಸಮಗ್ರ ವಿಳಂಬಕ್ಕೂ ನಿಗದಿಪಡಿಸಲಾಗಿದೆ. ಲಿಕ್ವಿಡೇಟೆಡ್ ಡ್ಯಾಮೇಜಸ್‌ನ ಗರಿಷ್ಠ ಮೊತ್ತ ಅಂತಿಮ ಗುತ್ತಿಗೆ ದರದ ಶೇಕಡಾ 10ರಷ್ಟು ನಿಗದಿತವಾಗಿದೆ.

ನಾಲ್ಕು ವಿಭಾಗಗಳ[31] 2017–18 ಮತ್ತು 2018–19ರ ಅವಧಿಯಲ್ಲಿನ ಆಯ್ಕೆ ಮಾಡಲಾದ 375ರ ಪೈಕಿ 30[32] ಕಾಮಗಾರಿಗಳನ್ನು ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಿತು (ಜುಲೈ 2019) ಹಾಗೂ ಇದರಲ್ಲಿ ಆರು ಕಾಮಗಾರಿಗಳು ಪೂರ್ಣಗೊಳ್ಳಲು ವಿಳಂಬವಾದುದನ್ನು ಗಮನಿಸಲಾಗಿದೆ. ವಿಭಾಗದ ಕಾರ್ಯನಿರ್ವಾಹಕ ಇಂಜಿನೀಯರವರು ವಿಳಂಬಕ್ಕೆ ಇಲಾಖೆ ಹಾಗೂ ಗುತ್ತಿಗೆದಾರರೆಂದು ಅಧ್ಯಾರೋಪಿಸಿದರು. ಕಾಮಗಾರಿಗಳನ್ನು ಪೂರ್ಣಗೊಳಿಸುವುದರಲ್ಲಿನ ವಿಳಂಬಕ್ಕೆ ಗುತ್ತಿಗೆದಾರರಿಗೆ ನಿಯತಕಾಲಿಕವಾಗಿ ನೋಟಿಸ್‌ಗಳನ್ನು ಜಾರಿಗೊಳಿಸಿದರು. ಆದಾಗ್ಯೂ, ಕಾರ್ಯನಿರ್ವಾಹಕ ಇಂಜಿನೀಯರವರು ವಿಳಂಬಕ್ಕೆ ಕಾಲಾವಕಾಶ ವಿಸ್ತರಿಸುವ ಪ್ರಸ್ತಾವನೆಯನ್ನು ಶಿಫಾರಿಸುವಾಗ ₹100 ರಿಂದ ₹5,000 ವರೆಗೆ ಅತ್ಯಲ್ಪ ದಂಡವನ್ನು ಗುತ್ತಿಗೆದಾರರಿಗೆ ವಿಧಿಸಿತು ಹಾಗೂ ಇದನ್ನು ಮುಖ್ಯ ಇಂಜಿನೀಯರವರು ಈ ಕೆಳಕಂಡಂತೆ ಅನುಮೋದಿಸಿದರು.

(i) ಗದಗದ 100 ಹಾಸಿಗೆಯುಳ್ಳ ಎಮ್‌ಸಿಹೆಚ್ ಆಸ್ಪತ್ರೆ ನವೀಕರಣ ಹಾಗೂ ವಿಸ್ತರಣೆ ಕಾಮಗಾರಿಯು 25 ನವೆಂಬರ್ 2015ರಲ್ಲಿ ಪೂರ್ಣಗೊಳ್ಳಬೇಕಿತ್ತು, ಆದರೆ 1,166 ದಿನಗಳ ವಿಳಂಬದ ನಂತರ 31 ಜನವರಿ 2019ರಲ್ಲಿ ಪೂರ್ಣಗೊಂಡಿತು. ಗುತ್ತಿಗೆದಾರನಿಗೆ 230 ದಿನಗಳ ವಿಳಂಬವೆಂದು ಅಧ್ಯಾರೋಪಿಸಿದರು. ಗುತ್ತಿಗೆ ಪ್ರಕಾರದಂತೆ ದಿನಕ್ಕೆ ₹25,950 ರಂತೆ ದಂಡ ವಿಧಿಸುವುದಕ್ಕೆ ಬದಲಾಗಿ ದಿನಕ್ಕೆ ಅತ್ಯಲ್ಪ ₹1,000 ರಂತೆ ದಂಡ ವಿಧಿಸಲಾಯಿತು.

(ii) ಯಾದಗಿರಿ ಜಿಲ್ಲಾ ಆರೋಗ್ಯ ಕಛೇರಿ ಕಟ್ಟಡ ನಿರ್ಮಾಣದ ಕಾಮಗಾರಿಯು 417 ದಿನಗಳ ವಿಳಂಬದ ನಂತರ ಪೂರ್ಣಗೊಂಡರೂ ಗುತ್ತಿಗೆದಾರನಿಗೆ 294 ದಿನಗಳ ವಿಳಂಬವೆಂದು ಅಧ್ಯಾರೋಪಿಸಿದರು. ಆದಾಗ್ಯೂ, ದಿನಕ್ಕೆ ₹25,600 ರಂತೆ ದಂಡವಿಧಿಸುವ ಬದಲಿಗೆ ಕೇವಲ ₹100 ರಂತೆ ದಂಡ ವಿಧಿಸಲಾಯಿತು.

(iii) ಬೀದರನ 100 ಹಾಸಿಗೆಯುಳ್ಳ ಎಮ್‌ಸಿಹೆಚ್ ಆಸ್ಪತ್ರೆ ನಿರ್ಮಾಣ ಕಾಮಗಾರಿಯು 120 ದಿನಗಳ ವಿಳಂಬವಾಗಿ ಪೂರ್ಣಗೊಳಿಸಲಾಯಿತು. ಗುತ್ತಿಗೆದಾರನಿಗೆ 60 ದಿನಗಳೆಂದು ಆಧ್ಯಾರೋಪಿಸಿದರು ಹಾಗೂ ದಿನಕ್ಕೆ ₹1,99,356 ರಂತೆ (ಗುತ್ತಿಗೆ ಮೌಲ್ಯದ ಶೇಕಡಾ ಒಂದರಷ್ಟು) ದಂಡ ವಿಧಿಸುವುದಕ್ಕೆ ಪ್ರತಿಯಾಗಿ ದಿನಕ್ಕೆ ₹100 ರಂತೆ ದಂಡ ವಿಧಿಸಲಾಯಿತು.

(iv) ಕಲಬುರಗಿಯ ಟ್ರೋಮಾ ಕೇರ್ ಸೆಂಟರ್ ನಿರ್ಮಾಣದ ಕಾಮಗಾರಿಯು 444 ದಿನಗಳ ವಿಳಂಬದ ನಂತರ ಪೂರ್ಣಗೊಂಡಿತು. ದಿನಕ್ಕೆ ₹39,725 ರಂತೆ ದಂಡ ವಿಧಿಸುವುದಕ್ಕೆ ಪ್ರತಿಯಾಗಿ ಗುತ್ತಿಗೆದಾರನಿಗೆ 30 ದಿನಗಳಿಗೆ ಆಧ್ಯಾರೋಪಿಸಿ ದಿನಕ್ಕೆ ₹400 ರಂತೆ ದಂಡ ವಿಧಿಸಲಾಯಿತು.

(v) ಯಲ್ಲಾಪುರದ ತಾಲೂಕು ಮಟ್ಟದ ಆಸ್ಪತ್ರೆಯ ಉನ್ನತೀಕರಣ ಕಾಮಗಾರಿಯನ್ನು 375 ದಿನಗಳು ವಿಳಂಬವಾಗಿ ಪೂರ್ಣಗೊಳಿಸಲಾಯಿತು. ಗುತ್ತಿಗೆದಾರನಿಗೆ 253 ದಿನಗಳಂದು ಅಧ್ಯಾರೋಪಿಸಿ

[31] ಬೆಂಗಳೂರು, ಧಾರವಾಡ, ಕಲಬುರಗಿ ಮತ್ತು ಮೈಸೂರು.

[32] ಒಂದು ಕೋಟಿಗಿಂತ ಹೆಚ್ಚು ಅಂದಾಜು ವೆಚ್ಚದ 22 ಕಾಮಗಾರಿಗಳು ಮತ್ತು ಒಂದು ಕೋಟಿಗಿಂತ ಕಡಿಮೆ ಇರುವ ಅಂದಾಜು ವೆಚ್ಚದ 8 ಕಾಮಗಾರಿಗಳು. ಅತೀ ಹೆಚ್ಚಿನ ಅಂದಾಜು ವೆಚ್ಚದ ಕಾಮಗಾರಿಗಳ ಆಧಾರದ ಮೇಲೆ ನಾಲ್ಕು ವಿಭಾಗಗಳಲ್ಲಿ ಕಾಮಗಾರಿಗಳನ್ನು ಆಯ್ಕೆ ಮಾಡಲಾಗಿದೆ.

ಗುತ್ತಿಗೆ ಪ್ರಕಾರ ದಿನಕ್ಕೆ ₹81,374 ರಂತೆ ದಂಡ ವಿಧಿಸುವುದಕ್ಕೆ ಪ್ರತಿಯಾಗಿ ದಿನಕ್ಕೆ ₹200 ರಂತೆ ವಿಧಿಸಲಾಯಿತು.

(vi) ಕಲಬುರಗಿಯ ಗುಲ್ಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆ ಆವರಣದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣದ ಕಾಮಗಾರಿಯ 26 ಸೆಪ್ಟಂಬರ್ 2019ರಲ್ಲಿ ಪೂರ್ಣಗೊಳ್ಳಬೇಕಿತ್ತು. ಗುತ್ತಿಗೆದಾರನಿಗೆ 92 ದಿನಗಳಂತೆ ಆಧ್ಯಾರೋಪಿಸಿ ದಿನಕ್ಕೆ ₹5,000 ರಂತೆ ದಂಡ ವಿಧಿಸುವುದನ್ನೊಳಪಟ್ಟಂತೆ 365 ದಿನಗಳ ವಿಸ್ತರಣಾ ಅವಧಿಯನ್ನು ಮುಖ್ಯ ಇಂಜಿನೀಯರವರು ಅನುಮೋದಿಸಿದರು ಹಾಗೂ 26 ಸೆಪ್ಟಂಬರ್ 2020ರೊಳಗೆ ಕಾಮಗಾರಿ ಪೂರ್ಣಗೊಳಿಸಬೇಕಿತ್ತು. ಗುತ್ತಿಗೆ ಪ್ರಕಾರದಂತೆ ದಿನಕ್ಕೆ ₹12,41,465 ರಂತೆ ದಂಡ ವಿಧಿಸಬೇಕಿತ್ತು.

ಮೇಲೆ ತಿಳಿಸಿರುವಂತೆ ಅತ್ಯಲ್ಪ ದಂಡ ವಿಧಿಸುವುದು ಗುತ್ತಿಗೆ ನಿಬಂಧನೆಗಳಿಗೆ ವಿರುದ್ಧವಾಗಿರುತ್ತದೆ. ಅದೂ ಅಲ್ಲದೆ, ಅತ್ಯಲ್ಪ ದಂಡ ವಿಧಿಸುವ ಹಿಂದಿನ ತರ್ಕದ ಆಧಾರವನ್ನು ದಾಖಲಿಸಿರಲಿಲ್ಲ ಹಾಗೂ ಲೆಕ್ಕಪರಿಶೋಧನೆಗೆ ವಿವರಿಸಿರಲಿಲ್ಲ.

**ಅನುಬಂಧ 2.11** ರಲ್ಲಿ ವಿವರಿಸಿರುವಂತೆ ₹14.63 ಕೋಟಿ ಲಿಕ್ವಿಡೇಟೆಡ್ ಡ್ಯಾಮೇಜಸ್‌ನ ಅತ್ಯಲ್ಪ ದರವನ್ನು ವಿಧಿಸಿರುವುದಲ್ಲದೆ, ಗುತ್ತಿಗೆದಾರರಿಗೆ ಅನುಚಿತ ಲಾಭವನ್ನು ವಿಸ್ತರಿಸುವಲ್ಲಿ ಪರಿಣಮಿಸಿತು. ಮುಂದುವರೆದು, ಸರ್ಕಾರಕ್ಕೆ ಕಾಮಗಾರಿಗಳ ಪೂರ್ಣಗೊಳ್ಳುವಿಕೆಯ ವಿಳಂಬವು, ಉದ್ದೇಶಿತ ಫಲಾನುಭವಿಗಳಿಗೆ ಆರೋಗ್ಯ ಪಾಲನಾ ಸೇವೆಗಳನ್ನು ಒದಗಿಸುವ ಇಲಾಖೆಯ ಮೂಲ ಉದ್ದೇಶಗಳನ್ನು ವಿಫಲಗೊಳಿಸಿತು. ವಿಳಂಬವು ನಿವೇಶನಕ್ಕೆ ಸಂಬಂಧಿಸಿದಂತೆ ಭೂ ಹಸ್ತಾಂತರ ವಿಳಂಬ, ಸಾಮಗ್ರಿಗಳ ಸ್ಥಳಾಂತರ, ವಿನ್ಯಾಸಗಳ ಸ್ಪಷ್ಟತೆ ಹಾಗೂ ಅಂದಾಜು ಸಿದ್ಧತೆಗಳ ಸಮಯದಲ್ಲಿ ಹೆಚ್ಚುವರಿ ಕಾಮಗಾರಿಗಳ ಆಲೋಚನೆ ಇಲ್ಲದಿರುವುದರ ಅನುಮೋದನೆಗಳು ವಿಳಂಬಕ್ಕೆ ಪ್ರಮುಖ ಕಾರಣಗಳೆಂದು ರಾಜ್ಯ ಸರ್ಕಾರವು ತಿಳಿಸಿತು (ಏಪ್ರಿಲ್ 2021). ಮುಂದುವರೆದು, ವಿಸ್ತರಿಸಿದ ಅವಧಿಗೆ ದಂಡ ವಿಧಿಸದಿರುವುದು ವೆಚ್ಚ ಏರುವಿಕೆಗೆ ಸೆಳೆಯುವಂತಾಗುವುದರಿಂದ ಕಾಮಗಾರಿಯ ವೆಚ್ಚವೂ ಏರುವುದು ಹಾಗೂ ಇದನ್ನು ತಡೆಗಟ್ಟಲು ಗುತ್ತಿಗೆದಾರರಿಗೆ ಅತ್ಯಲ್ಪ ದಂಡವನ್ನು ವಿಧಿಸಲಾಯಿತು ಎಂದು ತಿಳಿಸಿತು.

ರಾಜ್ಯ ಸರ್ಕಾರವು ವಿಳಂಬಕ್ಕೆ ಕಾರಣಗಳನ್ನು ಮಾತ್ರ ತಿಳಿಸಿತು ಹಾಗೂ ಗುತ್ತಿಗೆದಾರರು ನಿಬಂಧನೆಗಳು ಮತ್ತು ಷರತ್ತುಗಳನ್ನು ಉಲ್ಲಂಘಿಸಿ ದಿನಕ್ಕೆ ₹100 ರಂತೆ ಅತ್ಯಲ್ಪ ದರ ನಿಗದಿಪಡಿಸಲು ಯಾವುದೇ ಆಧಾರವನ್ನು ಒದಗಿಸಲಿಲ್ಲವಾದ್ದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಮುಂದುವರೆದು, ಉತ್ತರದಲ್ಲಿರುವಂತೆ, ಗುಲ್ಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ನಿರ್ಮಾಣ ಕಾಮಗಾರಿಯನ್ನು 29 ಸೆಪ್ಟಂಬರ್ 2020 ರವರೆಗೂ ಕಾಲಾವಕಾಶವನ್ನು ವಿಸ್ತರಿಸಿದ್ದರೂ ಸಹ ಇನ್ನೂ ಪ್ರಗತಿಯಲ್ಲಿದೆ. ಆದಾಗ್ಯು, ಕಾಮಗಾರಿಯು ಪೂರ್ಣಗೊಳ್ಳುವಲ್ಲಿನ ಅಧಿಕ ವಿಳಂಬಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದರ ಬಗೆಗಿನ ಪ್ರಸ್ತಾವನೆಯು ಉತ್ತರದಲ್ಲಿ ಸೂಚಿಸಿಲ್ಲ.

***ರಾಜ್ಯ ಸರ್ಕಾರವು ಲಿಕ್ವಿಡೇಟೆಡ್ ಡ್ಯಾಮೇಜಸ್‌ನ ಕಡಿಮೆ ವಿಧಿಸಿರುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ನಿಗದಿಪಡಿಸಬೇಕು.***

## 2.7 ತಪ್ಪಿಸಬಹುದಾಗಿದ್ದ ವೆಚ್ಚ

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನೀಯರ್ ಉಪವಿಭಾಗದಲ್ಲಿ ಎಮ್ 25 ಗ್ರೇಡ್ ಕಾಂಕ್ರೀಟ್‌ಗೆ ಅಂದಾಜು/ಬಿಒಕ್ಯು (ಬಿಲ್ ಆಫ್ ಕ್ವಾಂಟಿಟಿ) ನಲ್ಲಿ ರೆಡಿಮಿಕ್ಸ್ ಕಾಂಕ್ರೀಟ್‌ಗೆ ಪ್ರತಿಯಾಗಿ ಸಿಮೆಂಟ ಕಾಂಕ್ರೀಟ್ (ಮಷಿನ್ ಮಿಶ್ರಣ) ಅಳವಡಿಸಿಕೊಂಡಿರುವುದು ₹3.30 ಕೋಟಿ ತಪ್ಪಿಸಬಹುದಾಗಿದ್ದ ವೆಚ್ಚ ಹಾಗೂ ಗುತ್ತಿಗೆದಾರನಿಗೆ ಅನುಚಿತ ಲಾಭದಲ್ಲಿ ಪರಿಣಮಿಸಿತು.**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯು ತಾನು ಕೈಗೊಳ್ಳುವ ವಿವಿಧ ಕಾಮಗಾರಿಗಳ ಅಂದಾಜು ಪಟ್ಟಿ ತಯಾರಿಕೆಗೆ ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆಯ ದರಪಟ್ಟಿಯನ್ನು ಅನುಸರಿಸುತ್ತದೆ. ದರಪಟ್ಟಿಯ ಪ್ರಕಾರ ವಿವಿಧ ಗ್ರೇಡ್‌ಗಳ ಕಾಂಕ್ರೀಟ್‌ಗೆ(ಎಮ್ 20, ಎಮ್ 25, ಎಮ್ 30, ಎಮ್ 35) ಒದಗಿಸುವ ಮಷಿನ್ ಮಿಕ್ಸಡ್ ರೀಇನ್ಫೂರ್ ಸಡ್ ಸಿಮೆಂಟ್ ಕಾಂಕ್ರೀಟ್ (ಆರ್‌ಸಿಸಿ) ಹಾಗೂ ರೆಡಿಮಿಕ್ಸ್ ಕಾಂಕ್ರೀಟ್ (ಆರ್‌ಎಮ್‌ಸಿ) ಗಳಿಗೆ ಪ್ರತ್ಯೇಕ ದರಪಟ್ಟಿಗಳನ್ನು ನಿಗಧಿಪಡಿಸುತ್ತದೆ. ದರಪಟ್ಟಿಯ ಅನುಸಾರ ಗ್ರೇಡ್ ಎಮ್20ರ ಮೇಲೆ ಇರುವ ಎಲ್ಲಾ ಕಾಂಕ್ರೀಟ್ ಆರ್‌ಸಿಸಿ ಕಾಮಗಾರಿಗಳಿಗೆ ಐಎಸ್:456:2000ರ ಪ್ರಕಾರದಂತೆ[33] ಡಿಜೈನ್ ಮಿಶ್ರಣವನ್ನು ವಿನ್ಯಾಸಗೊಳಿಸಲು ದರಪಟ್ಟಿಯು ನಿರ್ಧಿಷ್ಟಪಡಿಸುತ್ತದೆ.

ಆರ್‌ಎಮ್‌ಸಿ ದರವು ಮಷಿನ ಮಿಶ್ರಿತ ಸಿಮೆಂಟ್ ಕಾಂಕ್ರೀಟ್ ಗಿಂತಲೂ ಹೋಲಿಸಿದಾಗ ಅಗ್ಗವಾಗಿರುತ್ತದೆ ಹಾಗೂ ಹೆಚ್ಚಿನ ಪ್ರಮಾಣಗಳ ಪ್ರಾಜೆಕ್ಟಗಳಲ್ಲಿ ಪ್ರಾಶಸ್ತ್ಯ ನೀಡಲಾಗುತ್ತದೆ. ವಿನ್ಯಾಸ ಸಂಯೋಜನೆಯಂತೆ ಅಗತ್ಯವಾದ ಎಲ್ಲಾ ಗುಣಗಳ ಮಿಶ್ರಾಂಶವುಳ್ಳ ಕಾಂಕ್ರೀಟ್ ನ ಉತ್ತಮ ಗುಣಮಟ್ಟವನ್ನು ಪರೀಕ್ಷಿಸಿ ಬ್ಯಾಚ್ ಪ್ಲಾಂಟ್‌ನಲ್ಲಿ[34] ಉತ್ಪಾದಿಸುವ ಕಾಂಕ್ರೀಟ್‌ಗೆ ಆರ್‌ಎಮ್‌ಸಿ ಎನ್ನಲಾಗುವುದು. ಈಗಾಗಲೇ ಸ್ಥಾಪನೆಯಾಗಿರುವ ಸ್ಥಾವರದಲ್ಲಿ ಸಂಗ್ರಹಿಸಬಹುದು ಅಥವಾ ಸ್ಥಳದಲ್ಲೇ ಅಂತಹ ಸ್ಥಾವರವನ್ನು ನಿರ್ಮಾಣ ಮಾಡುವುದರೊಂದಿಗೆ ಆರ್‌ಎಮ್‌ಸಿಯನ್ನು ಉತ್ಪಾದಿಸಬಹುದು ಅಥವಾ ಸಂಗ್ರಹಿಸಬಹುದು. ಕಾಂಕ್ರೀಟ್ ಬೆರೆಸುವ ಯಂತ್ರವನ್ನು ಉಪಯೋಗಿಸಿ ಅಲ್ಪ ಪ್ರಮಾಣದ ಅಥವಾ ಹೆಚ್ಚು ಲೋಡ್ ಇಲ್ಲದ ಸ್ಥಳದಲ್ಲೇ ಕಾಂಕ್ರೀಟ್ ತಯಾರಿಸಿ ಮಿಶ್ರಣಾಂಶಕ್ಕೆ ಮಷಿನ್ ಮಿಶ್ರಣವೆನ್ನುವರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬೆಳಗಾವಿಯ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರವರು ಉಪವಿಭಾಗದ ಕಛೇರಿ ದಾಖಲೆಗಳ ಪರಿಶೀಲನೆಯಲ್ಲಿ, ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿಯ ಆವರಣದಲ್ಲಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅಂದಾಜು ವೆಚ್ಚವಾದ ₹138.60 ಕೋಟಿಗೆ ನಿರ್ಮಾಣ ಕಾಮಗಾರಿಯನ್ನು ₹162.83 ಕೋಟಿಗೆ (ಶೇಕಡಾ 17.5 ಟೆಂಡರ್ ಪ್ರೀಮಿಯಂ)ಒಂದು ಏಜನ್ಸಿಗೆ[35] (ಮಾರ್ಚ್ 2018) ನೀಡಲಾಯಿತು ಎಂಬುದನ್ನು ಗಮನಿಸಲಾಯಿತು. ಸೆಪ್ಟಂಬರ್ 2019ರಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ನಿಗದಿಪಡಿಸಲಾಯಿತು ಆದರೆ ಕಾಮಗಾರಿಯು ಚಾಲ್ತಿಯಲ್ಲಿ ಜುಲೈ 2020ರ ವರೆಗೆ ವ್ಯಯಿಸಿದ ಮೊತ್ತ ₹56.05 ಕೋಟಿಗಳಷ್ಟು ಇನ್ನೂ ಪ್ರಗತಿಯಲ್ಲಿದೆ. ಅಂದಾಜು ಪಟ್ಟಿಯನ್ನು ತಾಂತ್ರಿಕ ಸಲಹಾ ಸಮಿತಿಯು ತಾಂತ್ರಿಕವಾಗಿ ಮಂಜೂರಾತಿ ನೀಡಿತು.

---

33 ಬಲವರ್ಧಿತ ಸಿಮೆಂಟ್ ಕಾಂಕ್ರೀಟ್ ನಲ್ಲಿ ಕನಿಷ್ಟ ದರ್ಜೆಯ ಕಾಂಕ್ರೀಟ್ ಎಮ್20ಗಿಂತ ಕಡಿಮೆಯಿರಬಾರದು ಎಂದು ಐಎಸ್ 456:2000 ಶಿಫಾರಸು ಮಾಡುತ್ತದೆ. ಅತ್ಯಲ್ಪ (ಯಂತ್ರ) ಮಿಶ್ರಣಕ್ಕೆ (ಡಿಜೈನ್) ಮಿಶ್ರಣ (ರೆಡಿ ಮಿಕ್ಸ್) ಕಾಂಕ್ರೀಟ್ ಅನ್ನು ಆದ್ಯತೆ ನೀಡಲಾಗುತ್ತದೆ. ಎಂ20 ದರ್ಜೆಯ ಮೇಲಿರುವ ಎಲ್ಲಾ ಬಲವರ್ಧಿತ ಸಿಮೆಂಟ್ ಕಾಂಕ್ರೀಟ್ ಕಾಮಗಾರಿಗಳಿಗೆ ಡಿಜೈನ್ ಮಿಶ್ರಣವನ್ನು ಹೊಂದಿರಲೇಬೇಕು.

34 ಬ್ಯಾಚ್ ಪ್ಲಾಂಟ್ ಅನ್ನು ಕಾಂಕ್ರೀಟ್ ಎಂದೂ ಕರೆಯುತ್ತಾರೆ, ಇದು ನೀರು, ಮರಳು, ಮಿಶ್ರಣ, ಸಿಲಿಕಾ ಮುಂತಾದ ವಿವಿಧ ಪದಾರ್ಥಗಳನ್ನು ಒಟ್ಟುಗೂಡಿಸಿ ಉತ್ತಮ ಗುಣಮಟ್ಟದ ಕಾಂಕ್ರೀಟ್ ತಯಾರಿಸಲು ಬಳಸುವ ಸಾಧನವಾಗಿದೆ.

35 ಮೆ॥ ಬಿಎಸ್ ಆರ್ ಇನ್ಫ್ರಾಟೆಕ್ ಇಂಡಿಯಾ ಲಿಮಿಟೆಡ್.

ಮಷಿನ್ ಮಿಶ್ರಣದ ಎಮ್25ರ ಆರ್‌ಸಿಸಿ (19,435.11 ಘನ.ಮಿ) ಕಾಮಗಾರಿಗಳಾದ ಫುಟಿಂಗ್ಸ್‌ಗಳ ತಳಪಾಯ, ಗೋಡೆಗಳ ಉಳಿಸುವಿಕೆ, ತಾರಸಿ, ಲಿಂಟಲ್, ಬೀಮ್, ಮಹಡಿ ಮೆಟ್ಟಿಲು, ಇತ್ಯಾದಿ ಕಾಮಗಾರಿಗಳಿಗೆ ಸರಬರಾಜು ಮತ್ತು ಅಳವಡಿಸುವುದನ್ನು ಮತ್ತು ಆರ್‌ಎಮ್‌ಸಿಯ ಎಮ್35 (2,221.65 ಘನ.ಮಿ) ಅನ್ನು **ಅನುಬಂಧ 2.12**ರಲ್ಲಿ ತೋರಿಸಿರುವಂತೆ ಸೇರಿಸಲಾಗಿತ್ತು.

ಎಮ್35ಕ್ಕೆ ಹೋಲಿಸಿದರೆ, ಸಾಕಷ್ಟು ಪ್ರಮಾಣದ ಎಮ್25 ಗ್ರೇಡ್‌ನ ಕಾಮಗಾರಿಗಳನ್ನು ಹೆಚ್ಚು ಜಾರಿಗೊಳಿಸಬೇಕಾಗಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು ಹಾಗೂ ಆರ್‌ಎಮ್‌ಸಿ ದರಗಳಿಗೆ ಪ್ರತಿಯಾಗಿ ಮಿಷನ್ ಮಿಶ್ರಣದ ಆರ್ ಸಿಸಿ ದರಗಳನ್ನು ಅಂದಾಜು ಪಟ್ಟಿ ತಯಾರಿಕೆಯಲ್ಲಿ ಅಳವಡಿಸಲಾಯಿತು. ಎಮ್20ರ ಮೇಲ್ದರ್ಜೆಯ ಎಲ್ಲ ಕಾಮಗಾರಿಗಳಿಗೆ ಆರ್‌ಎಮ್ ಸಿಯನ್ನು ಅಳವಡಿಸಬೇಕಾಗಿತ್ತಾದ್ದರಿಂದ ಇದು ನ್ಯಾಯಸಮ್ಮತವಾಗಿರಲಿಲ್ಲ ಹಾಗೂ ಮಿತವ್ಯಯದಲ್ಲಿರಲಿಲ್ಲ. ಇದು ಐಎಸ್ 456:2000ರ ಮಾನದಂಡಕ್ಕೆ ವಿರುದ್ಧವಾಗಿದ್ದಿತು. ದೋಷಯುಕ್ತ ಅಂದಾಜುಪಟ್ಟಿಯ ತಯಾರಿಕೆಯಿಂದ ಗುತ್ತಿಗೆದಾರರಿಗೆ ಆರ್‌ಎಮ್‌ಸಿ ದರಕ್ಕೆ ಪ್ರತಿಯಾಗಿ ಮಷಿನ್ ಮಿಶ್ರಣದ ದರಗಳನ್ನು ಉಲ್ಲೇಖಿಸಲು ಅವಕಾಶ ಮಾಡಿಕೊಡಲಾಯಿತು.

ಮುಂದುವರೆದು, ಟೆಂಡರ್ ಷರತ್ತುಗಳಲ್ಲಿ ಕಾಂಕ್ರೀಟ್ ಬ್ಯಾಚಿಂಗ್ ಪ್ಲಾಂಟ್‌ನ್ನು ಸ್ಥಾಪಿಸಬೇಕೆಂದು ಸ್ಪಷ್ಟವಾಗಿ ನಿಗಧಿಪಡಿಸಲಾಗಿತ್ತು. ಸಮಾಲೋಚಕರ ಮಾಸಿಕ ವರದಿಗಳಲ್ಲಿ ಛಾಯಾಚಿತ್ರಗಳನ್ನು ಲಗತ್ತಿಸಿರುವುದರ ಮೂಲಕ ಗುತ್ತಿಗೆದಾರನು ಸ್ಥಾವರಗಳನ್ನು ಸ್ಥಾಪಿಸಿರುವುದು ಸ್ಪಷ್ಟವಾಗಿದೆ. ಆರ್‌ಎಮ್‌ಸಿಯ ಬಳಕೆಯು ಹೆಚ್ಚಿನ ಮಿತವ್ಯಯವಾದ್ದರಿಂದ ಗುತ್ತಿಗೆದಾರನು, ಎಮ್25 ಗ್ರೇಡ್ ತಯಾರಿಕೆಗೂ ಸ್ಥಾವರವನ್ನು ಉಪಯೋಗಿಸಿರುತ್ತಾನೆಂಬುದು ಸ್ಪಷ್ಟವಾಗಿರುತ್ತದೆ. ಹಾಗಾಗಿ, ಗುತ್ತಿಗೆದಾರನಿಗೆ ಮಷಿನ್ ಮಿಶ್ರಣದಲ್ಲಿ ಇರದಂತೆ, ಆರ್‌ಎಮ್‌ಸಿಗೆ ಅನ್ವಯಿಸುವ ದರಗಳಿಗೆ ಅನ್ವಯಿಸಿ ಪಾವತಿಸಬೇಕಿತ್ತು.

ಈ ರೀತಿ, **ಕೋಷ್ಟಕ 2.1**ರಲ್ಲಿ ವಿವರಿಸಿರುವಂತೆ, ಅಂದಾಜು ಪಟ್ಟಿಯಲ್ಲಿನ ಆರ್‌ಎಮ್‌ಸಿ ಎಮ್25 ಗ್ರೇಡ್ ಕಾಂಕ್ರೀಟ್ ದರಗಳಿಗೆ ಪ್ರತಿಯಾಗಿ ಆರ್‌ಸಿಸಿ (ಮಷಿನ್ ಮಿಶ್ರಣದ) ದರಗಳನ್ನು ಅಳವಡಿಸಿರುವುದು ₹3.30 ಕೋಟಿ ವೆಚ್ಚವನ್ನು ತಪ್ಪಿಸಬಹುದಾಗಿತ್ತು, ಹಾಗೂ ಗುತ್ತಿಗೆದಾರನಿಗೆ ಅನುಚಿತ ಲಾಭದಲ್ಲಿ ಪರಿಣಮಿಸಿತು.

**ಕೋಷ್ಟಕ – 2.1 ಅಧಿಕ ದರಗಳನ್ನು ಸೂಚಿಸುವ ವಿವರಣಾ ಪಟ್ಟಿ**

(ಮೊತ್ತ ₹ ಗಳಲ್ಲಿ)

| BOQ ನಲ್ಲಿ ಐಟಂ ಸಂಖ್ಯೆ | ಮಹಡಿ | ಘ.ಮಿ.ನಲ್ಲಿ BOQ ಪ್ರಮಾಣ | ಘ.ಮಿ.ನಲ್ಲಿ ಕಾರ್ಯಗತ ಗೊಳಿಸಿದ ಪ್ರಮಾಣ | ಪಾವತಿಸಿದ ದರ | ಪಾವತಿಸ ಬೇಕಾದ ದರ RMC[36] | ಪ್ರತಿ ಘ.ಮಿ.ಗೆ ಅಧಿಕ (e–f) | ಹೆಚ್ಚುವರಿ ವೆಚ್ಚ (d*g) |
|---|---|---|---|---|---|---|---|
| a | b | c | d | e | f | g | h |
| 13 | M 25 (ತಳಪಾಯ) | 7,470.25 | 5,897.74 | 9,500.00 | 7,332.17 | 2,168.00 | 1,27,86,300.00 |
| 15 | M 25 (ನೆಲ ಮಹಡಿ) | 3,795.48 | 3,720.05 | 9,700.00 | 7,332.17 | 2,368.00 | 88,09,078.00 |
| 16 | M25 ಮೊದಲನೆ ಮಹಡಿ) | 1,880.93 | 1,787.00 | 10,000.00 | 7,393.86 | 2,606.00 | 46,56,922.00 |
| 17 | M 25 (ಎರಡನೆ ಮಹಡಿ) | 1,880.93 | 1,877.81 | 10,000.00 | 7,455.55 | 2,544.00 | 47,77,148.00 |
| 18 | M 25 (ಮೂರನೆ ಮಹಡಿ) | 2,086.25 | 806.28 | 10,000.00 | 7,517.23 | 2,483.00 | 20,01,993.00 |
| ಒಟ್ಟು | | 17,113.84 | 14,088.88 | | | | 3,30,31,441.00 |

ಆಧಾರ: BOQ/RA ಬಿಲ್ಲುಗಳು, SR ಮತ್ತು ಆಡಿಟ್ ಲೆಕ್ಕಾಚಾರ

[36] ದರ ಪಟ್ಟಿಯನುಸಾರ ಮೂಲದರ, ಪ್ರತಿ ಹೆಚ್ಚುವರಿ ಮಹಡಿಗೆ, ಪ್ರತಿ ಘ.ಮೀಗೆ 50 ರಂತೆ ಹೆಚ್ಚುವರಿ ದರ ಮತ್ತು ಶೇಕಡಾ 5ರ ಪ್ರದೇಶದ ಪ್ರಾಮುಖ್ಯತೆಯಂತೆ ಮತ್ತು ಶೇಕಡಾ 17.5 ರಷ್ಟು ಟೆಂಡರ್ ಪ್ರಿಮಿಯಮ್ ಅನ್ನು ಒಳಗೊಳ್ಳುತ್ತದೆ.

ರಾಜ್ಯ ಸರ್ಕಾರವು ಈ ರೀತಿ ಉತ್ತರಿಸಿತು (ಏಪ್ರಿಲ್ 2021).

(i) ತಳಪಾಯ, ಕಾಲಂಗಳು, ಬೀಮ್ ಇತ್ಯಾದಿಗಳನ್ನೊಳಗೊಂಡಿರುವ ಕಾಮಗಾರಿಗಳನ್ನು ಹಂತಹಂತವಾಗಿ ಜಾರಿಗೊಳಿಸಬೇಕಿದ್ದರಿಂದ ಸ್ಥಳದ ನಿರ್ಬಂಧ ಪರಿಗಣಿಸಿ ಹಾಗೂ ಬೇರೆ ಬೇರೆ/ ವಿಭಿನ್ನ ಪರಿಮಾಣದಲ್ಲಿ ಎಮ್25 ಆರ್ಎಮ್ ಸಿ ಕಾಂಕ್ರೀಟನ್ನು ಸರಬರಾಜು ಮಾಡುವಾಗ ಉಂಟಾಗಬಹುದಾದ ತೊಂದರೆಗಳಿಂದ ಮಷಿನ್ ಮಿಶ್ರಣದ ಎಮ್25 ಕಾಂಕ್ರೀಟನ್ನು ಒದಗಿಸಲಾಯಿತು.

(ii) ಅಂದಾಜಿನಂತೆ ಆರ್ಎಮ್ಸಿ ಎಮ್25 ಗ್ರೇಡ್ ಕಾಂಕ್ರೀಟನ್ನು ಶೇಕಡಾ 90ರ ಪರಿಮಾಣದಲ್ಲಿ ಅಳವಡಿಸಿಕೊಳ್ಳಲು ಪರಿಗಣಿಸದೇ ಇದ್ದರೆ ಅದು ವಾಸ್ತವವಾಗಿ ನಿರಂತರವಾಗಿ ನಡೆಯುವ ಕಾಮಗಾರಿಗಳಿಗೆ ಕಾರ್ಯಸಾಧುವಾಗಿರಲಿಲ್ಲ ಹಾಗೂ ಪ್ರಾಯೋಜನೆಯನ್ನು ಪೂರ್ಣಗೊಳಿಸಲಾಗುತ್ತಿರಲಿಲ್ಲ.

(iii) ತಾರಸಿಯ ಕಾಂಕ್ರೀಟನ್ನು ಒಂದೇ ಹಂತದಲ್ಲಿ ಹಾಕುವುದರಿಂದ ಹಾಗೂ ಆಗಾಧವಾದ ಕಾಂಕ್ರೀಟ್ ಪರಿಮಾಣವನ್ನು ಬಳಸುವುದರಿಂದ ಆರ್ಎಮ್ಸಿಯ ಎಮ್35 ಗ್ರೇಡ್ ಕಾಂಕ್ರೀಟನ್ನು ಒದಗಿಸಲಾಯಿತು ಮತ್ತು ಕಾರ್ಯಗತಗೊಳಿಸಲಾಯಿತು.

(iv) ಸ್ಥಳದಲ್ಲಿ ಎಮ್35 ಗ್ರೇಡನ ಪರಿಮಾಣವು ಕೇವಲ ಶೇಕಡಾ 10 ರಷ್ಟಿದ್ದು ಹಾಗೂ ಎಮ್25 ಗ್ರೇಡನ ಜೊತೆ ಮಿಶ್ರಣವಾಗದಂತೆ ಹಾಗೂ ಅಗತ್ಯವಾದ ಕಾಂಕ್ರೀಟನ ಗುಣಮಟ್ಟವನ್ನು ಕಾಯ್ದಿರಿಸಲು ಹಾಗೂ ಏಕಕಾಲಿಕವಾಗಿ ಎಮ್35 ಕಾಂಕ್ರೀಟನ್ನು ಬಳಸಲು ಪ್ರಮಾಣಿಕೃತ ಖಾಸಗಿ ಆರ್ಎಮ್ಸಿ ಸ್ಥಾವರದವರೊಂದಿಗೆ ಹೊರಗುತ್ತಿಗೆ ಮಾಡಬೇಕಾಗಿತ್ತು. ಆದುದರಿಂದ ಬ್ಯಾಚ್ ಪ್ಲಾಂಟ್ನ್ನು ಸ್ಥಾಪಿಸಲಾಗಲಿಲ್ಲ.

ಈ ಕೆಳಕಂಡ ಕಾರಣಗಳಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ.

(i) ಎಮ್20 ಗ್ರೇಡ್ ನ ಮೇಲ್ದರ್ಜೆಯ ನಂತರದ ಎಲ್ಲಾ ಆರ್ಸಿಸಿ ಕಾಮಗಾರಿಗಳಿಗೆ ಐಎಸ್456:2000 ಪ್ರಕಾರದಂತೆ ಮಿಶ್ರಣ ವಿನ್ಯಾಸಗಳಿರಬೇಕು ಎಂದು ದರಪಟ್ಟಿಯಲ್ಲಿ ಸ್ಪಷ್ಟವಾಗಿ ನಿಗದಿಪಡಿಸಿದೆ ಹಾಗೂ ಮಿಶ್ರಣ ವಿನ್ಯಾಸಗಳನ್ನು ಆರ್ಎಮ್ಸಿ ಸ್ಥಾವರದಲ್ಲಿಯೇ ನಿರ್ಮಾಣವಾಗಿರಬೇಕೆಂದು ತಿಳಿಸಿದೆ.

(ii) ಸ್ಥಾಪಿತವಾದ ಕಾಂಕ್ರೀಟ್ ತಂಡದ ಸಾಮರ್ಥ್ಯವು ಗಂಟೆಗೆ 30 ಘನ ಮಿ.ಗಿಂತ ಕಡಿಮೆ ಇರಬಾರದು ಎಂದು ಟೆಂಡರ್ ಷರತ್ತುಗಳು ಸ್ಪಷ್ಟವಾಗಿ ನಿಗದಿಪಡಿಸುತ್ತದೆ ಇದು ಆರ್ಎಮ್ಸಿಯಿಂದ ಬಂದ ಕಾಂಕ್ರೀಟ್ ಗ್ರೇಡ್ ಸುಸಂಗತವಾಗಿರುವುದಲ್ಲದೆ ನಿರ್ಮಾಣಕಾರ್ಯ ವಿಧಾನವನ್ನು ಸಾಕಷ್ಟು ವೇಗಗೊಳಿಸುತ್ತದೆ.ಆದರೆ ಮಷಿನ್ ಮಿಶ್ರಣವು ಬಹಳವಾಗಿ ಅಸಂಗತತೆಯಿಂದಿರುತ್ತದೆ.

(iii) ಸ್ಥಳದಲ್ಲಿ ಸ್ಥಾವರ ತಂಡವನ್ನು ಸ್ಥಾಪಿಸುವುದಕ್ಕೆ ಎಮ್35 ಗ್ರೇಡ್ ಪರಿಮಾಣವು ಕೇವಲ ಶೇಕಡಾ 10ರಷ್ಟಿದ್ದು ಹಾಗೂ ಎಮ್35 ಕಾಂಕ್ರೀಟನ್ನು ಬಳಸಲು ಪ್ರಮಾಣೀಕೃತ ಆರ್ಎಮ್ಸಿ ಸ್ಥಾವರದ ಖಾಸಗಿಯರೊಂದಿಗಿನ ಹೊರಗುತ್ತಿಗೆ ಮಾಡಬೇಕೆಂಬ ಉತ್ತರವು ಟೆಂಡರನಲ್ಲಿ ಸ್ಥಳದಲ್ಲಿ ಸ್ಥಾವರ ತಂಡದಿಂದ ಸ್ಥಾಪಿಸಿದ ಎಮ್25 ಗ್ರೇಡ್ ಕಾಂಕ್ರೀಟ್ ತಯಾರಿಕೆಗಾಗಿ ಎಂದು ಸ್ಪಷ್ಟವಾಗಿ ಸೂಚಿಸಲ್ಪಡುತ್ತದೆ.

(iv) ತಳಪಾಯದ ಕಾಮಗಾರಿಗಳ ನಂತರ ಕಾಲಂಗಳು ಹಾಗೂ ಬೀಮ್ಗಳ ಕಾಮಗಾರಿಗಳವಾಗುವುದರಿಂದ ತಾರಸಿ ಕಾಮಗಾರಿ ನಡೆಯುವುದರಿಂದ ಏಕಕಾಲಿಕವಾಗಿ ಕಾಂಕ್ರೀಟನ್ನು ಸುರಿಯುವ ಕೆಲಸವು ಉದ್ಭವಿಸುವುದಿಲ್ಲ.

***ನ್ಯಾಯೋಚಿತವಲ್ಲದ ಅಂದಾಜು ಪಟ್ಟಿಯನ್ನು ತಯಾರಿಸಲು ಮತ್ತು ಅನುಮೋದಿಸಲು ಜವಾಬ್ದಾರರಾದ ಅಧಿಕಾರಿಗಳ ಮೇಲೆ ರಾಜ್ಯ ಸರ್ಕಾರವು ಜವಾಬ್ದಾರಿಯನ್ನು ನಿಗದಿಪಡಿಸಬೇಕು.***

## 2.8 ವಾಸ್ತವವಾಗಿ ಕಾಮಗಾರಿಗಳನ್ನು ಕೈಗೊಳ್ಳದೇ ಕೃತ್ರಿಮವಾಗಿ ಪ್ರಮಾಣೀಕರಿಸಿರುವುದು

**ಕಲಬುರಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಪವಿಭಾಗದ ಸಹಾಯಕ ಇಂಜಿನಿಯರವರು ವಾಸ್ತವವಾಗಿ ಕಾಮಗಾರಿ ಬಾಬ್ತುಗಳನ್ನು ಕೈಗೊಳ್ಳದೇ ಅಳತೆ ಪುಸ್ತಕದಲ್ಲಿ ದಾಖಲಿಸಿದ್ದಾರೆ. ಇದನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು ಪ್ರಮಾಣೀಕರಿಸಿರುತ್ತಾರೆ ಹಾಗೂ ಇದನ್ನು ಕಾರ್ಯನಿರ್ವಾಹಕ ಇಂಜಿನಿಯರು ಅನುಮೋದಿಸಿದ್ದಾರೆ. ಇದು ₹97.59 ಲಕ್ಷ ಅಕ್ರಮ ಸಂದಾಯದೊಂದಿಗೆ ಗುತ್ತಿಗೆದಾರನಿಗೆ ಅನುಚಿತ ಲಾಭದಲ್ಲಿ ಪರಿಣಮಿಸಿತು**

ಕರ್ನಾಟಕ ಲೋಕೋಪಯೋಗಿ (ಕೆಪಿಡಬ್ಲುಡಿ) ಸಂಹಿತೆಯ ಉಪಬಂಧಗಳು ಈ ಕೆಳಕಂಡಂತೆ ನಿಗದಿಪಡಿಸಿವೆ.

| ನಿಯಮ | ನಿಬಂಧನೆ |
|---|---|
| 109 | ಮಾಪನ ಪುಸ್ತಕವು ಎಲ್ಲಾ ಪರಿಮಾಣಗಳ ಖಾತೆಗಳ ಆಧಾರವಾಗಿದೆ ಮತ್ತು ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ತನ್ನ ವ್ಯಾಪ್ತಿಯಲ್ಲಿರುವ ಎಲ್ಲಾ ಅಳತೆ ಪುಸ್ತಕಗಳನ್ನು ಎಚ್ಚರಿಕೆಯಿಂದ ಲೆಕ್ಕವಿಡಲಾಗಿದೆ ಮತ್ತು ಅಳತೆಗಳನ್ನು ಸರಿಯಾಗಿ ದಾಖಲಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. |
| 110(8) | ಕ್ಷೇತ್ರೀಯ ಇಂಜಿನಿಯರ್ ದಾಖಲಿಸಿದ ಅಳತೆಗಳನ್ನು ಮಾಪನದಲ್ಲಿನ ದೋಷಗಳನ್ನು ಪತ್ತೆಹಚ್ಚಲು, ಮೋಸದ ನಮೂದುಗಳನ್ನು ತಡೆಗಟ್ಟಲು ಮತ್ತು ನಿವೇಶನದಲ್ಲಿ ನಡೆಸಲಾದ ಮತ್ತು ಅಳತೆ ಮಾಡಲಾದ ಕಾರ್ಯಗಳು ಅನುಮೋದಿತ ಯೋಜನೆಗಳು ಮತ್ತು ಅಂದಾಜುಗಳು ನಿಗದಿತ ವಿಶಿಷ್ಟತೆಗಳಿಗೆ ಅನುಗುಣವಾಗಿವೆಯೇ ಎಂದು ಪರೀಕ್ಷಿಸಲು ಅಥವಾ ಪರಿಶೀಲಿಸಲು ಎಇಇಯಿಂದ ಅಳತೆ ಮಾಡಲ್ಪಡುತ್ತವೆ.ಅಳತೆಗಳನ್ನು ಪರೀಕ್ಷಿಸಿದ ನಂತರ ಅಳತೆಯ ನಿಖರತೆಯ ಬಗ್ಗೆ ದಿನಾಂಕದೊಂದಿಗೆ ಎಇಇರವರು ತನ್ನ ಕೈಬರಹದಲ್ಲಿ ಮತ್ತು ಸಹಿಯಡಿಯಲ್ಲಿ ದಾಖಲಿಸುತ್ತಾರೆ. ಕ್ಷೇತ್ರೀಯ ಇಂಜಿನಿಯರ್ ಅಥವಾ ಚೆಕ್–ಅಳತೆ ಅಧಿಕಾರಿಯಾಗಿರುವ ಎಇಇರವರು ನೀಡುವ ಸುಳ್ಳು ಪ್ರಮಾಣಪತ್ರವು ಸರ್ಕಾರದಿಂದ ಅನ್ಯಾಯದ ವಿಧಾನಗಳಿಂದ ಮೋಸದ ಪಾವತಿಗಳನ್ನು ಪಡೆಯುವ ಪ್ರಯತ್ನವೆಂದು ಪರಿಗಣಿಸಬಹುದು ಮತ್ತು ದಂಡಕ್ರಮಕ್ಕೆ ಆಹ್ವಾನಿಸುತ್ತದೆ. |

ಬೀದರನಲ್ಲಿ 100 ಹಾಸಿಗೆಯುಳ್ಳ ತಾಯಿ ಮತ್ತು ಮಗುವಿನ ಆಸ್ಪತ್ರೆಯ ನಿರ್ಮಾಣದ ಕಾಮಗಾರಿಗೆ ₹20 ಕೋಟಿ ಅಂದಾಜಿನ ದರಕ್ಕೆ ಟೆಂಡರನ್ನು (ಫೆಬ್ರವರಿ 2017ರಲ್ಲಿ) ಆಹ್ವಾನಿಸಲಾಯಿತು, ಕನಿಷ್ಟ ಬಿಡ್ಡುದಾರನಾದ ಮೆ॥ ಈರಣ್ಣ ಮಮದಾಪುರ ಅವರಿಗೆ, ಗುತ್ತಿಗೆ ಬೆಲೆಯ ₹19.93 ಕೋಟಿಗೆ ಗುತ್ತಿಗೆಯನ್ನು ನೀಡಲಾಯಿತು. ಕಾಮಗಾರಿಯನ್ನು ಮಾರ್ಚ್ 2019ರಲ್ಲಿ ಪೂರ್ಣಗೊಳಿಸಲಾಯಿತು ಹಾಗೂ ಇಲಾಖೆಗೆ ನವೆಂಬರ್ 2019ರಲ್ಲಿ ಹಸ್ತಾಂತರಿಸಲಾಯಿತು.

ಕಲಬುರಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಉಪವಿಭಾಗದ ಮೇಲ್ವಿಚಾರಣೆಯ ಕಾಮಗಾರಿಯ ಅಳತೆ ಪುಸ್ತಕ ಹಾಗೂ ಚಾಲ್ತಿ ಲೆಕ್ಕದ ಬಿಲ್ಲುಗಳ ಪರಿಶೀಲನೆಯಲ್ಲಿ ಈ ಕೆಳಕಂಡಂತೆ ಗಮನಿಸಲಾಯಿತು.

1. ಗುತ್ತಿಗೆದಾರನು ಚಾಲ್ತಿ ಬಿಲ್ಲುಗಳನ್ನು (5 ಮತ್ತು 6) ಜುಲೈ 2018ರಲ್ಲಿ ಕಾಮಗಾರಿಯಲ್ಲಿನ ಬಾಬ್ತುಗಳನ್ನು ನಿರ್ವಹಿಸಿರುವುದಾಗಿ ನಿವೇದಿಸಿರುತ್ತಾನೆ ಆದರೆ ಹೊಣೆಗಾರರಾದ ಸಹಾಯಕ ಇಂಜಿನಿಯರವರು ಕಾಮಗಾರಿಯನ್ನು (14 ಏಪ್ರಿಲ್ 2018 ಮತ್ತು 23 ಜೂನ್ 2018) ತಾಳೆ ಮಾಡಿರುವುದಾಗಿ ಧೃಢೀಕರಿಸಿ ಮತ್ತು ಗುತ್ತಿಗೆದಾರನು ವಾಸ್ತವವಾಗಿ ಕಾಮಗಾರಿಯನ್ನು ನಡೆಸಿರುವುದಾಗಿ ಹಾಗೂ ಬಿಲ್ಲುಗಳನ್ನು ಸಂದಾಯಕ್ಕೆ ಶಿಫಾರಸು ಮಾಡಿರುತ್ತಾರೆ. ಈ ಅಳತೆಗಳನ್ನು ಜಿಐಬಿ–343 ಸಂಖ್ಯೆಯ ಅಳತೆಪುಸ್ತಕದಲ್ಲಿ ಸಹಾಯಕ ಇಂಜಿನಿಯರವರು ದಾಖಲಿಸಿದ್ದಾರೆ.

2. ಸಹಾಯಕ ಇಂಜಿನಿಯರವರು ಮಾಡಿದ ಈ ಅಳತೆಗಳನ್ನು (28 ಏಪ್ರಿಲ್ 2018 ಹಾಗೂ 23 ಜೂನ್ 2018) ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರು ಅನುಮೋದಿಸಿದ್ದಾರೆ ಹಾಗೂ ಕಾರ್ಯನಿರ್ವಾಹಕ ಇಂಜಿನಿಯರವರು 31 ಜುಲೈ 2018ರಲ್ಲಿ ಮೇಲು ರುಜು ಮಾಡಿರುತ್ತಾರೆ. ಗುತ್ತಿಗೆದಾರನಿಗೆ ಒಟ್ಟು ₹4.64 ಕೋಟಿ ಮೊಬಲಗನ್ನು (ಸೆಪ್ಟಂಬರ್ 2018) ಚಾಲ್ತಿ ಬಿಲ್ಲು 5ರಲ್ಲಿ ₹2.94 ಕೋಟಿ ಹಾಗೂ ಚಾಲ್ತಿ ಬಿಲ್ಲು 6 ರಲ್ಲಿ ₹1.70 ಕೋಟಿ ಪಾವತಿಸಲಾಗಿದೆ.

3. ಸರಬರಾಜು, ಸ್ಥಾಪನೆ, ಪರೀಕ್ಷೆ ಹಾಗೂ (1) ಪ್ರಯಾಣಿಕ/ಆಸ್ಪತ್ರೆ ಲಿಫ್ಟ್ (2) 62.5 ಕೆ.ವಿ ಆಂಪ್ಸ್ ಡೀಸಲ್ ಜನರೇಟರ್ ಸೆಟ್ ಮತ್ತು (3)ಮಾಡ್ಯೂಲರ್ ಸಾಮಾನ್ಯ ಆಪರೇಷನ್ ಥಿಯೆಟರ್‌ಗಳ ಕಾರ್ಯಗತಗೊಳಿಸುವ ಕಾಮಗಾರಿಗಳ ಬಾಬ್ತುಗಳನ್ನು ಚಾಲ್ತಿ ಲೆಕ್ಕದ ಬಿಲ್ಲುಗಳು ಒಳಗೊಂಡಿತ್ತು.

4. ಆದರೆ, ಲೆಕ್ಕಪರಿಶೋಧನೆಯಲ್ಲಿ ದೊರಕಿದ ಇನ್‌ವಾಯ್ಸ್‌ಗಳ ಪ್ರತಿಯಲ್ಲಿದ್ದಂತೆ.

   - ಪ್ರಯಾಣಿಕ/ಆಸ್ಪತ್ರೆ ಲಿಫ್ಟನ ವಿವಿಧ ಭಾಗಗಳನ್ನು ಮಾರ್ಚ್ 2018 ಮತ್ತು ಫೆಬ್ರವರಿ 2019 ರ ನಡುವೆ ಸರಬರಾಜು ಮಾಡಲಾಗಿದೆಯಾದರೂ 28 ಮಾರ್ಚ್ 2018ರಲ್ಲಿ ಚಾಲ್ತಿ ಸ್ಥಿತಿಯಲ್ಲಿ ಇದೆ ಎಂದು ಹಸ್ತಾಂತರಿಸಲಾಗಿದೆ.
   - ಡೀಸಲ್ ಜನರೇಟರ್ ಸೆಟ್‌ನ್ನು 17 ಜುಲೈ 2018ರಲ್ಲಿ ಸರಬರಾಜು ಮಾಡಲಾಗಿದೆ ಹಾಗೂ 2 ಜನೆವರಿ 2019ರಲ್ಲಿ ಸ್ಥಾಪಿಸಲಾಗಿದೆ.
   - ಮಾಡ್ಯುಲರ್ ಆಪರೇಷನ್ ಥಿಯೇಟರ್‌ನ ಸಾಧನ ಸಾಮಗ್ರಿಗಳನ್ನು 18 ಆಗಸ್ಟ್ 2018ರಲ್ಲಿ ಸರಬರಾಜು ಮಾಡಲಾಗಿದೆ ಮತ್ತು 20 ಸೆಪ್ಟಂಬರ್ 2018 ರಲ್ಲಿ ಸ್ಥಾಪಿಸಲಾಗಿದೆ.

ಹೀಗೆ, ಕಾಮಗಾರಿಗಳನ್ನು ನಡೆಸದೆ, ಹಣ ಸಂದಾಯದ ವೇಳೆ ಕಾಮಗಾರಿಗಳನ್ನು ಜಾರಿಗೊಳಿಸಿದೆ ಎಂದು ಧೃಡೀಕರಿಸಲಾಗಿದೆಯಾದರೂ ವಾಸ್ತವವಾಗಿ ನಂತರ ಮಾಡಲಾಗಿದೆ.

ಮುಂದುವರೆದು, ಅಳತೆ ಪುಸ್ತಕವನ್ನು ಧೃಡೀಕರಿಸಿದ ಸಹಾಯಕ ಇಂಜಿನಿಯರವರು ಹಾಗೂ ಅಳತೆ ಪುಸ್ತಕವನ್ನು ಅನುಮೋದಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಇಬ್ಬರನ್ನೂ (ಜೂನ್ 2018 ಮತ್ತು ಜುಲೈ 2018ರಲ್ಲಿ ಅನುಕ್ರಮವಾಗಿ) ವರ್ಗಾಯಿಸಲಾಯಿತೆಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಯಿತು. ಹೊಸದಾಗಿ ಕಾರ್ಯಭಾರವನ್ನು ತೆಗೆದುಕೊಂಡ ಸಹಾಯಕ ಇಂಜಿನಿಯರವರು (ಆಗಸ್ಟ್ 2018) ಕಾಮಗಾರಿಯ ಪ್ರಗತಿಯನ್ನು ಪರಿವೀಕ್ಷಿಸಿದರು ಮತ್ತು ಹೇಳಲಾಗಿದ್ದ ಕಾಮಗಾರಿಯ ಬಾಬ್ತುಗಳನ್ನು ಜಾರಿಗೊಳಿಸಲಾಯಿತು, ಅಳತೆ ಮಾಡಲಾಯಿತು ಹಾಗೂ ಸಂದಾಯ ಮಾಡಲಾಯಿತು ಎಂಬುದು ನೈಜವಾಗಿ ಜಾರಿಯಾಗಿಲ್ಲವೆಂದೂ ಕಾಮಗಾರಿಯು ಪ್ರಗತಿಯಲ್ಲಿದೆ ಎಂದು ಛಾಯಾಚಿತ್ರಗಳ ಮೂಲಕ ಹೊಸ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರವರ ಗಮನಕ್ಕೆ ತರಲಾಯಿತು. ತದನಂತರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರವರು ಶೋಕಾಸ್ ನೋಟಿಸನ್ನು ಹಿಂದಿನ ಸಹಾಯಕ ಇಂಜಿನಿಯರವರಿಗೆ ನೀಡಲಾಯಿತು (ಆಗಸ್ಟ್ 2018) ಮತ್ತು ಇದರ ಪ್ರತಿಯನ್ನು ಕಾರ್ಯನಿರ್ವಾಹಕ ಇಂಜಿನಿಯರವರಿಗೆ ನೀಡಲಾಯಿತು. ಹಿಂದಿನ ಸಹಾಯಕ ಇಂಜಿನಿಯರವರ ಉತ್ತರವು, ಯಾವುದಾದರು ಇದ್ದಲ್ಲಿ ಹಾಗೂ ಕಾರ್ಯನಿರ್ವಾಹಕ ಇಂಜಿನಿಯರವರು ಅಗತ್ಯ ಕ್ರಮಗಳನ್ನು ಜರುಗಿಸಿದ ಬಗ್ಗೆ ಯಾವುದೇ ದಾಖಲೆಗಳು ಕಂಡುಬರಲಿಲ್ಲ ಹಾಗೂ ಲೆಕ್ಕಪರಿಶೋಧನೆಗೆ ವಿವರಣೆಯನ್ನು ನೀಡಲಿಲ್ಲವಾದುದರಿಂದ ಯಾವುದೇ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ.

ಏಪ್ರಿಲ್ 2018 ಮತ್ತು ಜೂನ್ 2018ರ ತಿಂಗಳುಗಳಲ್ಲಿ ಅಳತೆ ಪುಸ್ತಕ/ ಚಾಲ್ತಿಖಾತೆ ಬಿಲ್ಲುಗಳಲ್ಲಿ ಕಾಮಗಾರಿ ಬಾಬ್ತುಗಳನ್ನು ಜಾರಿಗೊಳಿಸಿದೆ ಎಂದು ದಾಖಲಿಸಿರುವುದು, ವಾಸ್ತವವಾಗಿ ಕಾಮಗಾರಿಗಳನ್ನು ಜಾರಿಗೊಳಿಸಿಲ್ಲ. ಆದರೆ ಅವುಗಳನ್ನು ತದನಂತರ ನಡೆಸಲಾಯಿತು ಎಂಬುದು ಸ್ಪಷ್ಟವಾಗಿದೆ. **ಅನುಬಂಧ 2.13** ರಲ್ಲಿ ವಿವರಿಸಿರುವಂತೆ ಸಂಬಂಧಪಟ್ಟ ಸಿಬ್ಬಂದಿಗಳು ಈ ಕಾಮಗಾರಿಗಳನ್ನು ಅಳತೆ ಪುಸ್ತಕದಲ್ಲಿ

ಜಾರಿಗೊಳಿಸಲಾಗಿದೆ ಎಂದು ಅಕ್ರಮವಾಗಿ ಧೃಢೀಕರಿಸಿದ್ದಾರೆ ಹಾಗೂ ₹97.59 ಲಕ್ಷ ಪಾವತಿಸಿ ಅನುಮೋದಿಸಿರುವುದು ಅತೀವ ಅಕ್ರಮವು. ಇದು ಸಹಾಯಕ ಇಂಜಿನೀಯರು/ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರವರು ಬಹುಶಃ ಗುತ್ತಿಗೆದಾರನೊಂದಿಗೆ ಸೇರಿ ನಡೆಸಿದ ಒಳಸಂಚನ್ನು ಸೂಚಿಸುತ್ತದೆ.

ಈ ರೀತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನೀಯರಿಂಗ್ ವಿಭಾಗದ ಇಂಜಿನೀಯರವರ ಕೆಪಿಡಬ್ಲುಡಿ ಸಂಹಿತೆಯ ಉಪಬಂಧಗಳ ಉಲ್ಲಂಘನೆಯು ಕಾಲ್ಪನಿಕ ಅಳತೆಯ ಅಕ್ರಮ ಧೃಢೀಕರಣದಲ್ಲಿ ಪರಿಣಮಿಸಿದ್ದಲ್ಲದೇ, ವಾಸ್ತವವಾಗಿ ಜಾರಿಗೊಳಿಸದ ಕಾಮಗಾರಿಗಳಿಗೆ ₹97.59 ಲಕ್ಷ ಪಾವತಿಯಾಯಿತು.

ಕಲಬುರಗಿ ಕಾರ್ಯನಿರ್ವಾಹಕ ಇಂಜಿನೀಯರವರ ವರದಿಯಂತೆ, ಕಾಮಗಾರಿಗಳನ್ನು ಪರಿಮಾಣಗಳ ಬಿಲ್ಲಿನಂತೆ ನಡೆಸಲಾಗಿದೆ ಮತ್ತು ದಾಖಲಿಸಲಾಗಿರುವ ಕೆಲಸಗಳಿಗೆ ಪಾವತಿ ಮಾಡಲಾಯಿತು ಹಾಗೂ ತೃಪ್ತಿಕರ ಮುಕ್ತಾಯ ವರದಿ ಹಾಗೂ ಹೆಚ್ಚುವರಿ ಆರ್ಥಿಕ ಹೊರೆಯಿಲ್ಲದೆ ಒಪ್ಪಂದದ ಬೆಲೆ ಮೇರೆಗೆ ಕಾಮಗಾರಿ ಮುಕ್ತಾಯದ ನಂತರ ಆಸ್ಪತ್ರೆ ಅಧಿಕಾರಿಗಳಿಗೆ ಹಸ್ತಾಂತರಿಸಿದೆ ಎಂದು ರಾಜ್ಯ ಸರ್ಕಾರವು ಉತ್ತರಿಸಿತು (ಏಪ್ರಿಲ್ 2021).

ವಾಸ್ತವವಾಗಿ ಕಾಮಗಾರಿ ಬಾಬ್ತುಗಳನ್ನು ಜಾರಿಗೊಳಿಸದೇ ಅಳತೆ ಪುಸ್ತಕದಲ್ಲಿ ದಾಖಲಿಸಿರುವುದಕ್ಕೆ ಹಾಗೂ ಬಿಲ್ಲುಗಳಿಗೆ ಸಂದಾಯ ಮಾಡುವ ವಿಷಯದ ಬಗ್ಗೆ ಲೆಕ್ಕಪರಿಶೋಧನೆಯು ಗಮನಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದರಿಂದ ಉತ್ತರವನ್ನು ಒಪ್ಪಲಾಗುವುದಿಲ್ಲ. ಸಹಾಯಕ ಇಂಜಿನೀಯರವರ ದೂರು ಹಾಗೂ ಕಾರ್ಯನಿರ್ವಾಹಕ ಇಂಜಿನೀಯರವರ ಕ್ರಮಗಳ ಬಗ್ಗೆ ಉತ್ತರವು ಮೌನವಾಗಿದೆ.

***ಅಳತೆಗಳ ಅಕ್ರಮ ಧೃಢೀಕರಣ ಹಾಗೂ ಅಂತಹ ಧೃಢೀಕರಣದಿಂದಾದ ಸಂದಾಯಗಳ ಬಗ್ಗೆ ರಾಜ್ಯ ಸರ್ಕಾರವು ಸಂಬಂಧಿಸಿದ ಅಧಿಕಾರಿಗಳಿಗೆ ಹೊಣೆಗಾರಿಕೆಯನ್ನು ಹೊರಿಸಬೇಕಿದೆ.***

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

### 2.9 ಅಂಗೀಕಾರಾರ್ಹವಲ್ಲದ ಸೇವೆಗಳ ಮೇಲೆ ತಪ್ಪಿಸಬಹುದಾಗಿದ್ದ ಸರಕು ಮತ್ತು ಸೇವಾ ತೆರಿಗೆಯ ವೆಚ್ಚ

**ಸರಕು ಮತ್ತು ಸೇವಾ ತೆರಿಗೆಯ ದರವು ಶೂನ್ಯ ಇರುವ 'ಅಪ್ಪಟ ಸೇವೆಗಳ' ಅಡಿ ಬರುವ ಮಾನವ ಸಂಪನ್ಮೂಲ ಏಜೆನ್ಸಿಗಳು ನೀಡಿದ ಸೇವೆಗಳಿಗೆ ಜಿಲ್ಲಾ ಪಂಚಾಯತ್‌ಗಳಿಂದ ಮಾಡಲಾದ ಪಾವತಿಯು ಅಂಗೀಕಾರಾರ್ಹವಲ್ಲದ ಸೇವೆಗಳ ಮೇಲೆ ₹1.29 ಕೋಟಿಗಳಷ್ಟು ತಪ್ಪಿಸಬಹುದಾಗಿದ್ದ ವೆಚ್ಚದಲ್ಲಿ ಪರಿಣಮಿಸಿತು.**

ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶ ಅಥವಾ ಸ್ಥಳೀಯ ಸಂಸ್ಥೆ ಅಥವಾ ಸರ್ಕಾರದ ಸಂಸ್ಥೆಗೆ ಸಂವಿಧಾನದ ಪರಿಚ್ಛೇದ 243ಡಬ್ಲ್ಯು ರಡಿಯಲ್ಲಿ ಮುನಿಸಿಪಾಲಿಟಿಗೆ ಅಥವಾ ಪರಿಚ್ಛೇದ 243ಜಿ ರಡಿಯಲ್ಲಿ ಪಂಚಾಯಿತಿಗೆ ವಹಿಸಿರುವ ಕಾರ್ಯಗಳಿಗೆ ಸಂಬಂಧಿಸಿದ ಯಾವುದೇ ಚಟುವಟಿಕೆಗೆ ಒದಗಿಸಿದ 'ಅಪ್ಪಟ ಸೇವೆಗಳು' (ಕಾಮಗಾರಿ ಗುತ್ತಿಗೆ ಸೇವೆ ಅಥವಾ ಸರಕುಗಳ ಸರಬರಾಜುಗಳನ್ನೊಳಗೊಂಡ ಇತರ ಸಂಯುಕ್ತ ಸೇವೆಗಳನ್ನು ಹೊರತುಪಡಿಸಿ) ಸೇರಿದಂತೆ ರಾಜ್ಯದಲ್ಲಿನ ಸೇವೆಗಳ ಆಂತರಿಕ ಸರಬರಾಜುಗಳು 1 ಜುಲೈ 2017 ರಿಂದ ಕೇಂದ್ರ ತೆರಿಗೆಯಿಂದ ವಿನಾಯಿತಿ ಪಡೆದಿದೆಯೆಂದು ಭಾರತ ಸರ್ಕಾರ, ಆರ್ಥಿಕ ಮಂತ್ರಾಲಯ (ರಾಜಸ್ವ ಇಲಾಖೆ)ವು ತನ್ನ ಅಧಿಸೂಚನೆ ಸಂಖ್ಯೆ 12/2017–ಕೇಂದ್ರ ತೆರಿಗೆ(ದರ) ದಿನಾಂಕ 28 ಜೂನ್ 2017 ರ ಮೂಲಕ ಅಧಿಸೂಚಿಸಿತು.

ಅಧಿಸೂಚನೆಯನುಸಾರ, ಯಾವುದೇ ಸರಕುಗಳನ್ನೊಳಗೊಳ್ಳದೆ ಒದಗಿಸಿದ ಸೇವೆಗಳನ್ನು 'ಅಪ್ಪಟ ಸೇವೆಗಳು' ಎಂದು ಪರಿಗಣಿಸಲಾಗುತ್ತದೆ. ಅಂತೆಯೇ, ರಸ್ತೆಗಳು ಮತ್ತು ಸಾರ್ವಜನಿಕ ಸ್ಥಳಗಳ ಸ್ವಚ್ಛತೆ ,ವಾಸ್ತುಶಿಲ್ಪಿ ಸೇವೆಗಳು , ಸಮಾಲೋಚಕ ಇಂಜಿನಿಯರ್ ಸೇವೆಗಳು, ಸಲಹಾ ಸೇವೆಗಳಂತಹ ಸೇವೆಗಳು ಮತ್ತು ವ್ಯಾವಹಾರಿಕ ಸಂಸ್ಥೆಗಳಿಂದ ಒದಗಿಸಿದ ಯಾವುದೇ ಸರಕುಗಳ ಸರಬರಾಜನ್ನೊಳಗೊಳ್ಳದ ಮಾನವ ಸಂಪನ್ಮೂಲ ಸೇವೆಗಳನ್ನು ಅಪ್ಪಟ ಸೇವೆಗಳೆಂದು ಪರಿಗಣಿಸಲಾಗುತ್ತದೆ.ಅಂತಹ ಸೇವೆಗಳು ಸರಕು ಮತ್ತು ಸೇವಾ ತೆರಿಗೆಯ ವಿಧಿಸುವಿಕೆಗೆ ಒಳಪಡುವುದಿಲ್ಲ.

2017–18 ರಿಂದ 2019–20 ರ ಅವಧಿಯ ದಕ್ಷಿಣ ಕನ್ನಡ, ದಾವಣಗೆರೆ,ಧಾರವಾಡ,ಗದಗ,ಮೈಸೂರು, ಮತ್ತು ರಾಯಚೂರು ಜಿಲ್ಲಾ ಪಂಚಾಯಿತಿಗಳ ದಾಖಲೆಗಳ ಲೆಕ್ಕಪರಿಶೋಧನೆಯು, ಸದರಿ ಜಿಲ್ಲಾ ಪಂಚಾಯಿತಿಗಳು ತಮ್ಮ ದೈನಂದಿನ ಆಡಳಿತಾತ್ಮಕ ಕೆಲಸ ಕಾರ್ಯಗಳಿಗೆ, ನಿರ್ವಹಣೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಅಕ್ಷರ ದಾಸೋಹದಂತಹ ಸರ್ಕಾರದ ವಿವಿಧ ಕಲ್ಯಾಣ ಯೋಜನೆಗಳಿಗೆ ತಾಂತ್ರಿಕ ಸಹಾಯಕರು, ಕಂಪ್ಯೂಟರ್ ಆಪರೇಟರುಗಳು,ವಾಹನ ಚಾಲಕರು,ಜವಾನರು, ಸ್ವಚ್ಛತಾ ಸಿಬ್ಬಂದಿ, ಕಾವಲುಗಾರರು ಮತ್ತು ಮಾಲಿಗಳು ಮುಂತಾದವರ ಸೇವೆಗಳನ್ನು ಒದಗಿಸಲು ಮಾನವ ಸಂಪನ್ಮೂಲ ಏಜೆನ್ಸಿಗಳೊಡನೆ ಒಪ್ಪಂದ ಮಾಡಿಕೊಂಡವು ಎಂಬುದನ್ನು ತೋರಿಸಿಕೊಟ್ಟಿತು. ಏಜೆನ್ಸಿಗಳು ಸಲ್ಲಿಸಿದ ಶೇಕಡ 18 ರಷ್ಟು ಸರಕು ಮತ್ತು ಸೇವಾ ತೆರಿಗೆಯನ್ನು ಒಳಗೊಂಡಿದ್ದ ಹೊರಗುತ್ತಿಗೆ ಸಿಬ್ಬಂದಿಗಳ ವೇತನದ ಬಿಲ್ಲುಗಳಿಗೆ ಜಿಲ್ಲಾ ಪಂಚಾಯಿತಿಗಳು ಹಾಗೆಯೇ ಹಣ ಪಾವತಿಸಿದವು. ಅಪ್ಪಟ ಸೇವೆಗಳಿಗೆ ಸರಕು ಮತ್ತು ಸೇವಾ ತೆರಿಗೆಯಿಂದ ವಿನಾಯಿತಿ ಇರುವುದರಿಂದ ಮಾನವ ಸಂಪನ್ಮೂಲ ಏಜೆನ್ಸಿಗಳಿಗೆ ಆರು ಜಿಲ್ಲಾ ಪಂಚಾಯಿತಿಗಳಿಂದ ಮಾಡಲಾದ ಪಾವತಿಯು ತಪ್ಪಿಸಬಹುದಾಗಿದ್ದ ₹1.29 ಕೋಟಿಗಳ ಹೆಚ್ಚುವರಿ ಪಾವತಿಯಲ್ಲಿ ಪರಿಣಮಿಸಿತು. ವಿವರಗಳನ್ನು **ಅನುಬಂಧ 2.14** ರಲ್ಲಿ ನೀಡಲಾಗಿದೆ.

ಗದಗ, ಮೈಸೂರು ಮತ್ತು ರಾಯಚೂರು ಜಿಲ್ಲಾ ಪಂಚಾಯಿತಿಗಳು ವಿಷಯವನ್ನು ಪರಿಶೀಲಿಸಲಾಗುವುದು ಮತ್ತು ಸೇವೆಗಳನ್ನು ಒದಗಿಸುತ್ತಿರುವ ಏಜೆನ್ಸಿಗಳೊಡನೆ ಚರ್ಚಿಸಲಾಗುವುದು ಎಂದು ಉತ್ತರಿಸಿದವು. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಯು ಮಾನವ ಸಂಪನ್ಮೂಲ ಸೇವೆಗಳು ಸರಕು ಮತ್ತು ಸೇವಾ ತೆರಿಗೆಯಿಂದ ವಿನಾಯಿತಿ ಹೊಂದಿರುವ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಯಾವುದೇ ಆದೇಶವಾಗಲೀ ಅಥವಾ ಸುತ್ತೋಲೆಯಾಗಲೀ ಸ್ವೀಕೃತವಾಗಿರುವುದಿಲ್ಲವೆಂದು ಹಾಗೂ ವಿಷಯವನ್ನು ಇಲಾಖೆಯ ಗಮನಕ್ಕೆ ತಂದು ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ವಿಷಯವನ್ನು ಸರ್ಕಾರಕ್ಕೆ ಮಾರ್ಚ 2021ರಲ್ಲಿ ಉಲ್ಲೇಖಿಸಲಾಗಿದ್ದು, ಉತ್ತರವು ಬಂದಿರುವುದಿಲ್ಲ.

***ಇಲಾಖೆಯ ಅಧಿಕಾರಿಗಳು ಸರಕು ಮತ್ತು ಸೇವಾ ತೆರಿಗೆಯೆಡೆಗೆ ತಪ್ಪಾಗಿ ಪಾವತಿಸಿರುವ ಹಣವನ್ನು ಹಿಂಪಡೆಯಲು ಕ್ರಮ ಕೈಗೊಳ್ಳಬೇಕು ಮತ್ತು ಭವಿಷ್ಯದಲ್ಲಿ ಕ್ಲೇಮುದಾರರಿಗೆ ಪಾವತಿಗಳನ್ನು ಮಾಡುವ ಮೊದಲು ಅಧಿನಿಯಮ ಅಥವಾ ನಿಯಮಗಳಲ್ಲಿ ನಿರ್ದಿಷ್ಟಪಡಿಸಿರುವಂತೆ ತೆರಿಗೆದರಗಳ ನಿಖರತೆಯನ್ನು ಖಚಿತಪಡಿಸಿಕೊಳ್ಳಬೇಕು.***